# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜನವರಿ, ೨೦೧೩ (‘ನವ ಮಾನವ ಮಾಸಿಕ’ದ ನೋಂದಿತ ಆವೃತ್ತಿ) ಸಂಪುಟ: ೧ ಸಂಚಿಕೆ: ೨

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ ವಿವರ:** ವಾರ್ಷಿಕ: ರೂ. ೧೨೫/–(ವ್ಯಕ್ತಿಗಳಿಗೆ) ರೂ. ೨೦೦/–(ಸಂಸ್ಥೆ/ಗ್ರಂಥಾಲಯಗಳಿಗೆ)
**ವಿಳಾಸ:** ಎಚ್.ಐ.ಜಿ–೫, ‘ನುಡಿ’, ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ– ೫೭೭ ೨೦೧

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಮೊದಲು ಹೇಳಬೇಕಾದದ್ದು ಮೊದಲಿಗೆ:

ಅಮೆರಿಕಾದಲ್ಲಿ ೨೦ ವರ್ಷಗಳ ಹುಡುಗನೊಬ್ಬ ತನ್ನ ತಾಯಿಯ ಬಳಿಯಲ್ಲಿದ್ದ ಬಂದೂಕು ಬಳಸಿ ಸನಿಹದ ಶಾಲೆಯೊಂದರಲ್ಲಿ ಐದರಿಂದ ಏಳು ವರ್ಷಗಳ ೨೦ ಜನ ಪುಟ್ಟ ಮಕ್ಕಳೂ ಸೇರಿದಂತೆ ೨೭ ಜನರನ್ನು ಕೊಂದು ತನ್ನನ್ನೂ ಕೊಂದುಕೊಂಡಿದ್ದಾನೆ. ಇದು ಆ ದೇಶದಲ್ಲಿ ನಡೆದ ಈ ರೀತಿಯ ಮೊದಲ ಘಟನೆಯೇನೂ ಅಲ್ಲ.

ಈ ಸುದ್ದಿ ಇಲ್ಲಿ ತಲ್ಲಣಗಳನ್ನು ಹುಟ್ಟಿಸುತ್ತಿದ್ದ ಸಮಯದಲ್ಲೇ ದೆಹಲಿಯಲ್ಲಿ ರಾತ್ರಿ ಒಂಭತ್ತಕ್ಕೆ ನಗರದ ಖಾಸಗಿ ಸಾರಿಗೆ ಬಸ್ ಹತ್ತಿದ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬಳ ಮೇಲೆ ಆ ಬಸ್ಸಿನ ಚಾಲಕ ಮತ್ತು ನಿರ್ವಾಹಕ ಸೇರಿದಂತೆ ಐದಾರು ಜನ ಸಾಮೂಹಿಕ ಅತ್ಯಾಚಾರವೆಸಗಿ, ಪ್ರತಿರೋಧಿಸಿದ ಆಕೆ ಮತ್ತು ಆಕೆಯ ಗೆಳೆಯನನನ್ನು ಮಾರಕವಾಗಿ ಥಳಿಸಿ ಊರ ಹೊರಗಿನ ನಿರ್ಜನ ಪ್ರದೇಶವೊಂದರಲ್ಲೆ ಎಸೆದು ಹೋಗಿರುವ ಘಟನೆ ವರದಿಯಾಗಿದೆ. ಇದು ಈ ದೇಶದಲ್ಲಿ ಇತ್ತೀಚೆಗೆ ನಡೆದ ಈ ರೀತಿಯ ಮೊದಲ ಘಟನೆಯೇನೂ ಅಲ್ಲ. ಆದರೂ ದೇಶ ಅರೆ ಕ್ಷಣ ಬೆಚ್ಚಿ ಕೂತು ಈಗ ಅಳತೊಡಗಿದೆ;ಕಿರುಚಡತೊಡಗಿದೆ. ಆದರೆ ಬುದ್ಧಿಮಾಂದ್ಯ ಮಗುವಿನಂತೆ.

ಮೇಲಿನ ಈ ಎರಡೂ ಎಂತಹ ಕೃತ್ಯಗಳೆಂದರೆ ಅವನ್ನು ಬಣ್ಣಿಸಲು ಭಾಷೆಯೇ ಸೋತು ಹೋಗುವಂತಿದೆ. ಭೀಕರ, ಘೋರ, ಅಮಾನವೀಯ, ಮೃಗೀಯ ಇತ್ಯಾದಿ ಶಬ್ದಗಳು ಸವಕಲುಗಳಾಗಿ ಕಾಣತೊಡಗಿವೆ. ಈ ಎರಡೂ ಘಟನೆಗಳನ್ನು ಇಲ್ಲಿ ಒಟ್ಟಿಗೆ ಜೋಡಿಸಿ ಹೇಳಲು ಇವೆರಡೂ ಒಂದೇ ಹೊತ್ತಿಗೆ ನಡೆದಿವೆ ಎಂಬುದಷ್ಟೇ ಕಾರಣವಲ್ಲ. ಇವೆರಡೂ ಒಂದೇ ಮನಃಸ್ಥಿತಿಯ ಎರಡು ಮುಖಗಳು ಎಂಬುದೂ ಕೂಡ. ಇವೆರಡೂ ವಕ್ರವಾಗಿ ಬೆಳೆದು ವಿಕ್ಷಿಪ್ತಗೊಂಡಿರುವ ಮತ್ತು ವಿಕ್ಷಿಪ್ತಗೊಳ್ಳುತ್ತಿರುವ ಎರಡು ಸಮಾಜಗಳ ಭಯಂಕರ ರೋಗ ಲಕ್ಷಣಗಳು. ಅಮೆರಿಕಾದ ಸಮಾಜ ಒಳಗೆ ಏನಾಗಿದೆ ಎಂಬುದರ ಅರಿವಿಲ್ಲದೆ ಅದನ್ನು ಕುರುಡಾಗಿ ಅನುಕರಿಸುತ್ತಿರುವ ಭಾರತದ ಸಮಾಜ ಪ್ರಾಣಾಂತಿಕವಾಗಿ ಎಚ್ಚರದಪ್ಪುತ್ತಿರುವ ಸೂಚನೆಯಿದು. ಇದು ಇಲ್ಲಿ ಮುಕ್ತ ಆರ್ಥಿಕ ನೀತಿಯ ರೂಪದಲ್ಲಿ ವ್ಯಕ್ತವಾಗುತ್ತಿದ್ದು ದುಡಿಮೆಯ ಅರ್ಥವೇ ಬದಲಾಗಿ ಹೋಗಿದೆ. ಸುಲಭ ಮಾರ್ಗಗಳಲ್ಲಿ ಹಣ ಮತ್ತು ಅಧಿಕಾರ ಅಯೋಗ್ಯರ, ದುಷ್ಟರ ಪಾಲಾಗುತ್ತಾ ಸಮಾಜ ಹೆಚ್ಚೆಚ್ಚು ವಕ್ರವೂ, ವಿಕ್ಷಿಪ್ತವೂ ಆಗತೊಡಗಿದೆ. ಹಿಂಸೆಯ ಭೀಕರತೆ ಮತ್ತು ವೈವಿಧ್ಯ ಎರಡೂ ಹೆಚ್ಚುತ್ತಿದೆ. ವಿಶೇಷವಾಗಿ ಇಲ್ಲಿ ಮಹಿಳೆ, ಮಕ್ಕಳು ಮತ್ತು ದಲಿತರ ಮೇಲೆ. ಇದಕ್ಕೆ ಅಂಕಿ ಅಂಶಗಳ ಅಗತ್ಯವಿರಲಾರದು. ಈ ಸಾಮೂಹಿಕ ಲೈಂಗಿಕ ಅತ್ಯಾಚಾರ ದೇಶದ ಅಸಹಾಯಕ ಜನತೆ ದಿನ ನಿತ್ಯ ಎದುರಿಸುತ್ತಿರುವ ಇನ್ನೊಂದು ವಿಶಾಲ ಅರ್ಥದ ಸಾಮೂಹಿಕ ಸಾಮಾಜಿಕ ಅತ್ಯಾಚಾರದ ಒಂದು ಸ್ಫೋಟಕ ಅಭಿವ್ಯಕ್ತಿ ರೂಪವಷ್ಟೆ. ಆದರೆ ಇದನ್ನು ಯಾರಿಗೆ ಹೇಳುವುದು?

ಈ ಎರಡೂ ಕಡೆ ನೋಡಿ. ಬರೀ ಕಾನೂನುಗಳನ್ನು ಬಿಗಿಗೊಳಿಸುವ ಮಾತುಗಳನ್ನಾಡಲಾಗುತ್ತಿದೆ. ಮತ್ತೆ ಅದೇ ಹೊರನೋಟ. ಏಕೆಂದರೆ ಈ ಸಮಾಜಕ್ಕೆ ಸುಲಭ ಸುಖ ಮತ್ತು ಮಜಾಗಳ ರುಚಿ ಹತ್ತಿಬಿಟ್ಟಿದೆ. ಸಮಸ್ಯೆಯ ಮೂಲಕ್ಕೆ ಹೋಗಲು ಅದರ ಬುದ್ಧಿ ಮಾಂದ್ಯತೆ. ನಿರಾಕರಿಸುತ್ತಿದೆ.

* * *

ಗುಜರಾತ್‌ನಲ್ಲಿ ಮತ್ತೆ ಕಾಂಗ್ರೆಸ್ಸಿಗರು, ಮಾನವ ಹಕ್ಕು ಹೋರಾಟಗಾರರು, ಸ್ವಯಂ ಘೋಷಿತ ಸೆಕ್ಯಲರಿಸ್ಟರೂ ಸೇರಿದಂತೆ ಎಲ್ಲರ ನಿರೀಕ್ಷೆಯಂತೆ ಮೋದಿ ಗೆದ್ದಿದ್ದಾರೆ. ಆದರೆ ಇದು ಗುಜರಾತ್ ಜನತೆಯ ಒಂದು–ಶೇ.೪೦ರಷ್ಟು–ಭಾಗವೂ ಸೇರಿದಂತೆ ಎಲ್ಲರ ಅಪೇಕ್ಷೆಯಂತೂ ಆಗಿರಲಿಲ್ಲ. ನರೇಂದ್ರ ಮೋದಿಯ ಚರಿತ್ರೆ ಮತ್ತು ಆಡಳಿತ ಶೈಲಿಯನ್ನು ಗಮನಿಸಿದವರಾರೂ ಇದನ್ನು ಅಪೇಕ್ಷಿಸಿರಲಾರರು. ಆದರೂ ಅವರು ಗೆದ್ದಿದ್ದಾರೆ. ಏಕೆ ಎಂದು ಯೋಚಿಸಲಾಗದ ಅವರ ವಿರೋಧಿಗಳ ದೌರ್ಬಲ್ಯವೇ ಮತ್ತೆ ಮತ್ತೆ ಮೋದಿಯವರ ವಿಜಯಕ್ಕೆ ಕಾರಣವಾಗುತ್ತಿದೆ ಎಂದರೆ ತಪ್ಪಾಗಲಾರದು.

ಕಣ್ಣು ಕುಕ್ಕುವಂತಹ ಅಭಿವೃದ್ಧಿ, ಅದನ್ನು ಸಾಧ್ಯ ಮಾಡಿದ ದಕ್ಷತೆ, ಸ್ವಚ್ಛ ಆಡಳಿತ ಮೋದಿಯ ಸತತ ವಿಜಯಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಆದರೆ ಬಡತನ ನಿವಾರಣೆ, ಆರೋಗ್ಯ, ಪೌಷ್ಟಿಕತೆ, ಲಿಂಗ ಸಮಾನತೆಯ ಸೂಚ್ಯಂಕಗಳಲ್ಲದೆ, ಹೊಸ ಅಭಿವೃದ್ಧಿಯ ಸೂಚ್ಯಂಕವಾದ ವಿದೇಶಿ ಬಂಡವಾಳ ಹೂಡಿಕೆಯ ವಿಷಯದಲ್ಲೂ ಗುಜರಾತ್ ಹಲವು ರಾಜ್ಯಗಳಿಗಿಂತ ಹಿಂದಿದೆ ಎಂದು ಅಂಕಿ ಅಂಶಗಳು ಹೇಳುತ್ತಿವೆ. ಹಾಗಾಗಿ ಈ ವಿಜಯದ ಮುಖ್ಯ ಕಾರಣ: ಮೋದಿ ವಿರೋಧಿಗಳ ವಿಶ್ವಾಸಾರ್ಹತೆ, ಅಂದರೆ ಅವರು ಪ್ರತಿಪಾದಿಸುವ ಅಭಿವೃದ್ಧಿ ಶೈಲಿ, ಸೆಕ್ಯುಲರಿಸಂ, ಸ್ವಚ್ಛ ಮತ್ತು ದಕ್ಷ ಆಡಳಿತಗಳ ಬಗೆಗಿನ ಸಾರ್ವಜನಿಕ ನಂಬಿಕೆ ಎಷ್ಟು ಕಡಿಮೆ ಇದೆಯೆಂದರೆ, ಮೋದಿಯ ಅಭಿವೃದ್ಧಿ ಕಲ್ಪನೆಯ ವ್ಯಾಪ್ತಿಗೆ ಒಳಪಡದ ಜನಸಮುದಾಯಗಳೂ ಇವರನ್ನು ನಂಬದಷ್ಟು!

ಅಲ್ಲಿನ ‘ಸೆಕ್ಯುಲರ್’ ಕಾಂಗ್ರೆಸ್ಸಿನ ಸ್ಥಿತಿ ನೋಡಿ. ಶಂಕರಸಿಂಗ್ ವಘೇಲ ಎಂಬ ಮಾಜಿ ಆರೆಸ್ಸೆಸ್ ನಾಯಕನೇ ಅದರ ಅಗ್ರ ನಾಯಕ! ಇನ್ನು ಈ ಚುನಾವಣೆಗಳಲ್ಲಿ ಟಿಕೆಟ್ ಸಿಗಲಿಲ್ಲವೆಂದು ಮುನಿಸಿಕೊಂಡು ಬಿಜೆಪಿ ಸೇರಿ ಮೋದಿಯನ್ನು ಪ್ರಧಾನ ಮಂತ್ರಿ ಮಾಡುವುದೇ ನನ್ನ ಮುಂದಿನ ಜೀವನದ ಗುರಿ ಎಂದೂ ಘೋಷಿಸಿದ ನರಹರಿ ಅಮೀನ್ ಎಂಬಾತ ಇತ್ತೀಚಿನವರೆಗೆ ಈ ಪಕ್ಷದ ಹಿರಿಯ ಉಪಾಧ್ಯಕ್ಷನಾಗಿ ಈ ಬಾರಿಯ ಮುಖ್ಯಮಂತ್ರಿ ಅಭ್ಯರ್ಥಿಗಳಲ್ಲೊಬ್ಬರೆಂದು ಬಿಂಬಿಸಲ್ಪಟ್ಟಿದ್ದವ! ಹೀಗೆ ನೈತಿಕವಾಗಿ ದಿವಾಳಿಯೆದ್ದು ಹೋಗಿರುವ ಈ ಪಕ್ಷ ಕೋಮುವಾದದ ಸುದ್ದಿ ಎತ್ತಿದರೆ ಹಿಂದೂ ಮತಗಳು ಬೀಳಲಾರವು ಎಂಬ ಭಯದ ಲೆಕ್ಕಾಚಾರದಲ್ಲಿ ಈ ಬಾರಿ ಅದರ ಸುದ್ದಿಗೇ ಹೋಗಲಿಲ್ಲ! ನರೇಂದ್ರ ಮೋದಿ ಪ್ರಧಾನಿಯಾಗುವ ಸಂಭವನೀಯತೆ ಈ ಫಲಿತಾಂಶದಿಂದ ಹೆಚ್ಚಿದೆ ಎಂದು ಈಗಲೇ ಆತಂಕಿತರಾಗಿ ಹುಯಿಲೆಬ್ಬಿಸುತ್ತಿರುವ ನಮ್ಮ ‘ಸೆಕ್ಯುಲರಿಸ್ಟ್’ರು ಇದನ್ನು ಗಮನಿಸಬೇಕು.

ನರೇಂದ್ರ ಮೋದಿ ಪ್ರಧಾನಿಯಾದರೆ ದೇಶದಲ್ಲಿ ಶಾಂತಿ–ಸುಭಿಕ್ಷ ನೆಲೆಸುವುದೆಂದು ನಂಬಿರುವವರೆಲ್ಲಾ ಕೋಮುವಾದಿಗಳೇನಲ್ಲ. ಅವರಲ್ಲಿ ಬಹಳಷ್ಟು ಜನ ಕಾಂಗ್ರೆಸ್–ಬಿಜೆಪಿ ಈ ಎರಡೂ ಸೇರಿದಂತೆ ಈಗಿನ ರಾಜಕೀಯ ವ್ಯ.ವಸ್ಥೆಯಲ್ಲಿ ನಂಬಿಕೆ ಕಳೆದುಕೊಂಡಿರುವವರು. ಆದುದರಿಂದ ನರೇಂದ್ರ ಮೋದಿಯ ಎದುರು ನಿಜವಾದ ರಾಜಕಾರಣ ಎಂದರೆ, ಈ ರಾಜಕೀಯ ವ್ಯವಸ್ಥೆಗೆ ಪರ್ಯಾಯವೊಂದನ್ನು ರೂಪಿಸುವುದೇ ಆಗಿದೆ.

ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು!

**–ಸಂಪಾದಕ**

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

ನವೆಂಬರ್ ಸಂಚಿಕೆ ಅಕ್ಟೋಬರ್ ಸಂಚಿಕೆಯಷ್ಟು ತಟ್ಟಿ–ತಡವಿ ಸಂತೈಸಲಿಲ್ಲ. ಸಂಪಾದಕರಿಗೆ ಪ್ರತಿ ಸಂಚಿಕೆಯೂ ಒಂದು ಯುದ್ಧವೇ! 'ಒಂದು ಮರುಹುಟ್ಟೇ! ತಾವು ನಂಬಿದ ತತ್ವ–ಸಿದ್ಧಾಂತ–ಆದರ್ಶಗಳಲ್ಲಿ ರಾಜಿ ಮಾಡಿಕೊಳ್ಳುವುದೇ ಬೇಡ. ಪತ್ರಿಕೆ ಚೆನ್ನಾಗಿಯೇ ಬರುತ್ತಿದೆ. ಜಾಹೀರಾತು ಇರಲಿ, ಇಲ್ಲದಿರಲಿ; ಗುಣಮಟ್ಟ ಕಾಪಾಡಿಕೊಂಡರೆ ಸಮಾನ ಮನಸ್ಕರು ಕೈಜೋಡಿಸಲು ಇದ್ದೇ ಇರುತ್ತಾರೆ.

–**ಎಂ. ಸುದರ್ಶನ ರಾಜ್**, ಧಾರವಾಡ

ಜಗತ್ತಿನಲ್ಲಿ ಅಲ್ಲಲ್ಲಿ ಕಾಣಿಸಿಕೊಂಡಿರುವ ಮತೀಯ ಭಯೋತ್ಪಾದನೆ, ವಿಶೇಷತಃ ಇಸ್ಲಾಂ ಅನುಯಾಯಿಗಳಲ್ಲಿ ಅಥವಾ ಅವರ ಪ್ರಾಬಲ್ಯವಿರುವಲ್ಲೀ ಕಾಣಿಸಿಕೊಂಡಿರುವ ಮತೀಯಾಧಾರಿತ ರಾಜಕೀಯ ಹಿಂಸೆಗೆ ನಮ್ಮ ಬಹುಪಾಲು ಎಡಪಂಥೀಯರು ಸಾಮ್ರಾಜ್ಯಶಾಹಿ, ನವ ಸಾಮ್ರಾಜ್ಯಶಾಹಿ, ಜಾಗತೀಕರಣ, ಅಮೆರಿಕಾ ಕಾರಣ ಎಂದು ಮಂಡಿಸುವ ವಾದ ದಿಕ್ಕು ತಪ್ಪಿಸುವಂತಹದು. ಭಾರತದ ಮುಸ್ಲಿಮರ ಲೌಕಿಕೀಕರಣ ನಡೆಯುತ್ತಿರುವಾಗ ಅಸ್ಘರ್ ಅಲಿ ಇಂಜಿನಿಯರರಂತಹ ಚಿಂತಕರೂ ಇಂತಹ ವಾದವನ್ನು ಮಂಡಿಸುತ್ತಿರುವುದು(*ಕಳೆದ ಸಂಚಿಕೆ*) ವಿಚಿತ್ರ.

ಅನೇಕ ಎಡಪಂಥೀಯರು ಒಂದು ಬಗೆಯ ಮೂಲಭೂತವಾದ ಮತ್ತು ಕೋಮುವಾದಗಳನ್ನು ಬೆಂಬಲಿಸುತ್ತಿರುವುದು–ಅದರಿಂದ ಸಮಾಜವಾದ ಮುಂದೆ ಗಟ್ಟಿಯಾಗುತ್ತದೆ ಎಂಬ ತಪ್ಪು ತಿಳಿವಿನಿಂದ! ಎಡಪಂಥಕ್ಕೆ ಹಿಂದೂತ್ವ ಪ್ರಧಾನ ಶತ್ರು ಅಲ್ಲ.

–**ಎಂ. ಪ್ರಭಾಕರ ಜೋಶಿ**, ಮಂಗಳೂರು

ಕಳೆದ'ಸಂಚಿಕೆಯ ಕೆಲವು ಸಾಲುಗಳ ಬಗ್ಗೆ ನನಗೆ ಅಸಮಧಾನವಿದೆ. ಸಂಪಾದಕರ ಟಿಪ್ಪಣಿಯಲ್ಲಿ ನೀವು ಕಸಬ್‌ನನ್ನು ಗಲ್ಲಿಗೇರಿಸಿದ್ದಕ್ಕೆ 'ಕಾವ್ಯ ಕಂಬನಿ ಮಿಡಿದ ಒಕ್ಕಣ್ಣಿನ ಸಹೃದಯ'ರ ಬಗ್ಗೆ ಬರೆದಿದ್ದೀರಿ. ಕಸಬ್‌ನ ದೇಹಾಂತ್ಯದ ಬಗ್ಗೆ ಕನ್ನಡದಲ್ಲಿ ಪ್ರಕಟವಾಗಿರುವ ಒಂದೆರಡು ಕವಿತೆಗಳು ಮರಣ ದಂಡನೆಯನ್ನು ವಿರೋಧಿಸುವಂತಹವೇ ಹೊರತು ಕಸಬ್‌ನ ಅಪರಾಧವನ್ನು ಮನ್ನಿಸುವಂತಹುವಲ್ಲ. ಇದನ್ನು ನೀವು ಗಮನಿಸಿಲ್ಲ.

ಅದೇ ಸಂಚಿಕೆಯಲ್ಲಿ ವೀರಣ್ಣ ತಿಮ್ಮಾಜಿಯವರನ್ನು ಕುರಿತು ಅವರ ಸಂದರ್ಶಕ 'ಪಾಕಿಸ್ತಾನದಂತೆ ಭಾಸವಾಗಿರುವ ವಾತಾವರಣದ ನಡುವೆ ಇದ್ದೀರಲ್ಲಾ ನಿಮಗೇನೂ ಅನ್ನಿಸಿಲ್ಲವೇ?' ಎಂದು ಕೇಳುತ್ತಾರೆ. ಮುಸ್ಲಿಮರು ಗಣನೀಯ ಸಂಖ್ಯೆಯಲ್ಲಿರುವ ಸ್ಥಳ ಯಾ ಊರುಕೇರಿಗಳನ್ನು ಪಾಕಿಸ್ತಾನವೆಂದು ಕರೆಯುವುದು ಈಗ ವಾಡಿಕೆಯಾಗಿ ಹೋಗಿಬಿಟ್ಟಿದೆ. ಜನಸಾಮಾನ್ಯರ ಈ ಮೂರ್ಖ 'ಕಾಮನ್ ಸೆನ್ಸ್' ಸಮಾಜವಾದಿಗಳ ಲೋಕಜ್ಞಾನ ಆಗಕೂಡದು.

ಸಂದರ್ಶಕರ ಪ್ರಶ್ನೆಗೆ ವೀರಣ್ಣ ತಿಮ್ಮಾಜಿಯವರು ಒಬ್ಬ ನೈಜ ಸಮಾಜವಾದಿಯಂತೆ ಉತ್ತರಿಸಿದ್ದು ನನಗೆ ಸಮಾಧಾನ ತಂದಿತು. ಆದರೆ ಈ ಪ್ರಶ್ನೆಯ ಹಿನ್ನೆಲೆಯಲ್ಲಿ ಅವರ ಸಹಜ ವಿವೇಕವೇ ಮಹಾ ಔದಾರ್ಯವೂ ಎಂಬಂತೆ ಕಾಣತೊಡಗಿತು. ತಿಮ್ಮಾಜಿಯವರು ಅದನ್ನು ಬಯಸಿರಲಾರರು.

–**ಜಿ. ರಾಜಶೇಖರ,** ಉಡುಪಿ

ಪ್ರಿಯ ರಾಜಶೇಖರ್,

ಕಸಬ್‌ನನ್ನು ನೇಣಿಗೇರಿಸಿದ ಸಂದರ್ಭದಲ್ಲಿ ನಾನು ಕಂಡಂತೆ ಕನ್ನಡದಲ್ಲಿ ಪ್ರಕಟವಾದ ಎರಡೂ ಪದ್ಯಗಳು ನೇರವಾಗಿ ಕಸಬ್‌ನಿಗೆ ಸಂಬಂಧಿಸಿದಂತೆಯೇ ಇವೆ. ಇದನ್ನು ನಾನು ವಿವರವಾಗಿ ಗಮನಿಸಿರುವೆ. ನೀವು ಗಮನಿಸಿದಂತಿಲ್ಲ. ಕೃಪೆ ಮಾಡಿ ಗಮನಿಸಿ. ಮರಣ ದಂಡನೆ ಬಗ್ಗೆ ನಿಜವಾಗಿಯೂ ಗಂಭೀರ ತಕರಾರಿರುವವರು ಸಮರ್ಥ ಅಭಿಪ್ರಾಯ ಅಥವಾ ವಾದ ಮಂಡಿಸಿ ಅದನ್ನು ರದ್ದು ಪಡಿಸುವ ಪ್ರಯತ್ನ ಮಾಡುವರೇ ಹೊರತು ಅದರ ಬಗ್ಗೆ ಬೋಳು ಪದ್ಯ ಬರೆಯಲಾರರು. ಹೋಗಲಿ, ನಾಲ್ಕೈದು ವರ್ಷಗಳ ಹಿಂದೆ ಪ.ಬಂಗಾಳದ ಯುವ ಅತ್ಯಾಚಾರಿಯೊಬ್ಬನನ್ನು ಗಲ್ಲಿಗೇರಿಸಿದರಲ್ಲಾ, ಆಗ ಕನ್ನಡದಲ್ಲಿ ಎಷ್ಟು ಪದ್ಯಗಳು ಬಂದಿವೆ ಹೇಳಿ.

ಇನ್ನು, ಆರಂಭಿಕ ಟಿಪ್ಪಣಿಯಲ್ಲೇ ಸೂಚಿಸುರುವಂತೆ, ವೀರಣ್ಣ ತಿಮ್ಮಾಜಿ ಕುರಿತ ಬರಹ 'ಹೊಸ ಮನುಷ್ಯ'ಕ್ಕಾಗಿ ಅಥವಾ ಅದರ ಪರವಾಗಿ ಬರೆದುದಲ್ಲ. ಅದು ಒಂದು–ಒಂದೂವರೆ ದಶಕದಷ್ಟು ಹಳೆಯ ಬರಹ. ಹಾಗಾಗಿ ನಿಮಗೆ ಆಕ್ಷೇಪಾರ್ಹವಾಗಿ ಕಂಡಿರುವ ಶಬ್ದದ ಬಳಕೆಗೆ ಪತ್ರಿಕೆ ನೇರ ಹೊಣೆಯಲ್ಲ. ಆದರೆ ಒಂದು ಮಾತು: 'ಮುಸ್ಲಿಂ **ಬಂಧುಗಳು** ನಮಾಜ್ ಮಾಡುತ್ತಾ ಬರತೊಡಗಿದ್ದರು' ಎಂದು ಬರೆಯುವ ಲೇಖಕನೇ(ಇವರು ನನಗೆ ತಿಳಿದಂತೆ ಪ್ರಗತಿಪರರು ಮತ್ತು ಬಂಡಾಯ ಲೇಖಕರು) ಆ ಶಬ್ದ ಬಳಸುವಂತಾಗಿದ್ದರೆ, ಇದಕ್ಕೇನು ಕಾರಣ ಎಂದು ನಾವು ಯೋಚಿಸಬೇಕಲ್ಲವೆ? ಬದಲಿಗೆ, 'ಜನ ಸಾಮಾನ್ಯರ ಮೂರ್ಖ ಕಾಮನ ಸೆನ್ಸ್' ಎಂದೆಲ್ಲ ಸುಮ್ಮನೆ ಉದ್ವಿಗ್ನರಾಗುವುದಾದರೂ ಏತಕ್ಕೆ? ಮುಸ್ಲಿಂ ಬಹುಸಂಖ್ಯಾತತೆಯೊಂದೇ ಒಂದು ಜಾಗ ಪಾಕಿಸ್ತಾನದಂತೆ 'ಭಾಸ'ವಾಗಲು ಕಾರಣವಾಗದಿರುವ ಸಾಧ್ಯತೆಯೂ ಇರಬಹುದಲ್ಲವೇ? ತಿಮ್ಮಾಜಿಯವರ ಉತ್ತರದ ಅಕ್ಕಪಕ್ಕಗಳನ್ನೆಲ್ಲ ಬಹು ಸೂಕ್ಷ್ಮವಾಗಿ ಅರ್ಥೈಸಬಲ್ಲವರಾದ ನೀವು ಈ ಮಾತಿನ ಬಗ್ಗೆ ಮಾತ್ರ ಏಕಿಷ್ಟು ಸಪಾಟಾಗಿ ಯೋಚಿಸಿ ಕ್ರುದ್ಧರಾಗುವಿರಿ?

**–ಸಂಪಾದಕ**

## ಇಸ್ಲಾಂ ಮತ್ತು ಮಹಿಳೆ: ಒಂದು ಪ್ರತಿಕ್ರಿಯೆ

ಅಸ್ಗರ್ ಅಲಿ ಎಂಜಿನಿಯರ್ ಅವರ 'ಇಸ್ಲಾಮಿಗೂ ಸಮಾಜವಾದಕ್ಕೂ ಹೊಂದಾಣಿಕೆ ಸಾಧ್ಯವೆ?' ಎನ್ನುವ ಲೇಖನಕ್ಕೆ ಬಾಪು ಹೆದ್ದೂರಶೆಟ್ಟಿ ಅವರ ಪ್ರತಿಕ್ರಿಯೆ(*ಹೊಸ ಮನುಷ್ಯ:* ಡಿಸೆಂಬರ್, ೨೦೧೨) ಸಹಜವಾದದ್ದೇ. ಇಸ್ಲಾಂ ಮತ್ತು ಮುಸಲ್ಮಾನರ ಸ್ಥಿತಿಗತಿ ಕುರಿತು ಅಭಿಪ್ರಾಯ ವ್ಯಕ್ತಪಡಿಸಲು ಮುಸ್ಲಿಮರೇ ಹಿಂದೇಟು ಹಾಕುತ್ತಿರುವ ಇಂದಿನ ಸಂದರ್ಭದಲ್ಲಿ ಈ ಸಂಬಂಧ ಕಾಳಜಿಯುಳ್ಳ ಯಾರೇ ಆಗಲಿ ಅರ್ಥಪೂರ್ಣ ಚರ್ಚೆಗೆ ತವಕಿಸಿದರೆ ಅದು ಖಂಡಿತ ಸ್ವಾಗತಾರ್ಹವೇ.


ಮಹಿಳೆಯರ ಹಕ್ಕುಗಳಿಗಾಗಿ ನಿರಂತರ ಹೋರಾಟ ಮಾಡುತ್ತ ಬಂದಿರುವವರಿಗೆ ಅಸ್ಗರ್ ಅಲಿ ಒತ್ತಾಸೆಯಾಗಿ ನಿಂತವರು. ಮಹಿಳೆಯರ ವಿಷಯವಾಗಿ ಕುರ್‌ಆನ್ ಪಕ್ಷಪಾತ ಮಾಡುತ್ತದೆ ಎನ್ನುವುದಕ್ಕೆ ಪುರಾವೆಯಾಗಿ ಕುರ್‌ಆನ್‌ನ ಶ್ಲೋಕ(ಸೂರಾ)ಗಳನ್ನು ಹಾಗೂ ಸುನ್ನಾ(ಪ್ರವಾದಿಯ ನಡೆ ನುಡಿ)ಅನ್ನು ಉಲ್ಲೇಖಿಸಲಾಗುತ್ತದೆ. ಇಂತಹ ಶ್ಲೋಕಗಳು ಅಂದಿನ ಸಾಮಾಜಿಕ ಸಮಸ್ಯೆಗಳ ಸಂದರ್ಭದಲ್ಲಿ ಅವತೀರ್ಣಗೊಂಡಿದ್ದವು. ಆ ಶ್ಲೋಕಗಳನ್ನು ಅಸಿಂಧುಗೊಳಿಸಿದ ಶ್ಲೋಕಗಳೂ ಸಹ ಅವತೀರ್ಣಗೊಂಡವು. ಅಂತಹ ಶ್ಲೋಕಗಳು ಮಹಿಳೆಯರ ಹಕ್ಕುಗಳು ಹಾಗೂ ಸ್ತ್ರೀ ಪುರುಷರ ಸಮಾನತೆಯನ್ನು ಎತ್ತಿ ಹಿಡಿಯುತ್ತವೆ. ಆ ಶ್ಲೋಕಗಳನ್ನು ಹಾಗೂ ಸುನ್ನಾಅನ್ನು ಬೇಕೆಂತಲೇ ಅಲಕ್ಷಿಸಲಾಗಿದೆ. ಇದು ಸಮಾಜದ ಪಟ್ಟಭದ್ರ ಹಿತಾಸಕ್ತಿಗಳ ಕುತಂತ್ರ ಎನ್ನುವುದನ್ನು ಎಂಜಿನಿಯರ್ ಅವರೇ ಹಲವು ಲೇಖನಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.

ಉದಾಹರಣೆಗೆ ಕುರ್‌ಆನ್‌ನ ೩೩:೩೫ನೆಯ ಶ್ಲೋಕ ಹೀಗಿದೆ: "'ಖಂಡಿತವಾಗಿಯೂ, ಶರಣಾಗುವ ಪುರುಷರು ಮತ್ತು ಶರಣಾಗುವ ಸ್ತ್ರೀಯರು...... ಇವರೆಲ್ಲರನ್ನೂ ಅಲ್ಲಾಹ್ ಕ್ಷಮೆ ಹಾಗೂ ಅಪಾರ ಪ್ರತಿಫಲಕ್ಕೆ ಅರ್ಹಗೊಳಿಸಿದ್ದಾನೆ.' ಈ ಶ್ಲೋಕವು ಪ್ರತಿಯೊಂದು ವಿಷಯದಲ್ಲೂ ಪುರುಷರು ಮತ್ತು ಸ್ತ್ರೀಯರ ಸಮಾನತೆಯನ್ನು ಮತ್ತು ಅವರ ಪ್ರತಿಫಲದ ಸಮಾನತೆಯನ್ನು ಸಹ ಹತ್ತು ಬಾರಿ ಸೂಚಿಸಿದೆ. ಪುರುಷರು ಆಧ್ಯಾತ್ಮಿಕ ಅಥವಾ ಲೌಕಿಕವೆನ್ನದೆ ಯಾವುದೇ ವಿಧದಲ್ಲೂ ಸ್ತ್ರೀಯರಿಗಿಂತ ಮಿಗಿಲಾಗಿಲ್ಲ. ಈ ಘೋಷಣೆ ಆದದ್ದು ಗ್ರೀಕ್ ತತ್ವಜ್ಞಾನಿಗಳು ಇನ್ನೂ ಸ್ತ್ರೀಯರಿಗೆ ಆತ್ಮ ಇದೆಯೋ ಇಲ್ಲವೋ ಎಂದು ಚರ್ಚಿಸುತ್ತಿದ್ದಾಗ! ಇಂತಹ ಅನೇಕ ಶ್ಲೋಕಗಳು ಕುರ್‌ಆನ್‌ನಲ್ಲಿವೆ.

ಇಸ್ಲಾಂ ಬರೀ ಆಧ್ಯಾತ್ಮಿಕ ಕ್ರಾಂತಿ ಅಲ್ಲ, ಅದೊಂದು ಸಾಮಾಜಿಕ ಕ್ರಾಂತಿಯೂ ಆಗಿತ್ತು. ಈ ಹಿನ್ನೆಲೆಯಲ್ಲಿಯೇ ಎಂಜಿನಯರ್ ಅವರು ಹೇಳುವಂತೆ: ಮುಸ್ಲಿಂ ಸಮಾಜಗಳಲ್ಲಿ ಶತಮಾನಗಳಿಂದ ಮಹಿಳೆಯನ್ನು ಗುಲಾಮಳನ್ನಾಗಿಸಲು ಬಳಸಲಾಗುತ್ತಿರುವ ಶ್ಲೋಕಗಳ ಮರು ಅಧ್ಯಯನ ಮತ್ತು ಮರುವ್ಯಾಖ್ಯೆ ಅವಶ್ಯವಾಗಿದೆ. ಈ ಗುಲಾಮಗಿರಿ ಇಸ್ಲಾಂ ಅಥವಾ ಕುರ್‌ಆನ್‌ಗೆ ಸಂಬಂಧಿಸಿದ್ದಾಗಿರದೆ ಪಿತೃಪ್ರಭುತ್ವ ವ್ಯವಸ್ಥೆಗೆ ಸಂಬಂಧಿಸಿದ್ದಾಗಿದೆ.

–**ಹಸನ್ ನಯೀಂ ಸುರಕೋಡ,** ರಾಮದುರ್ಗ

# ನಮ್ಮ ಸಮಾಜವಾದಿಗಳು: ‘ಜನ ಸೇವಕ’ ದಿನಕರ ದೇಸಾಯಿ



ಕನ್ನಡದಲ್ಲಿ ಚುಟುಕಗಳ ಪಿತಾಮಹರೆಂದು ಹೆಸರಾದ ದಿನಕರ ದೇಸಾಯಿಯವರು ಓರ್ವ ಅಗ್ರ ಸಮಾಜವಾದಿ ನಾಯಕರೂ ಆಗಿದ್ದರೆಂಬುದು ಬಹಳ ಜನಕ್ಕೆ ಗೊತ್ತಿಲ್ಲ. ಬಹುಶಃ ಇದಕ್ಕೆ ಕಾರಣಗಳು ಮೂರು. ಒಂದು: ಅವರು ಸಮಾಜವಾದಿ ಚಟುವಟಿಕೆಗಳನ್ನು ನಡೆಸಲಾರಂಭಿಸಿದ್ದ ಈಗ ಉತ್ತರ ಕನ್ನಡ ಜಿಲ್ಲೆಯೆಂದು ಕರೆಯಲ್ಪಡುವ ಪ್ರದೇಶ ಆಗ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದುದು. ಎರಡು: ಅವರು ಸಮಾಜವಾದಿ ಪಕ್ಷದೊಂದಿಗೆ ಅಧಿಕೃತವಾಗಿ ಗುರುತಿಸಿಕೊಂಡಿರಲಿಲ್ಲವೆಂಬುದು. ಮೂರು: ಅವರ ಕಾರ್ಯ–ಕೇಂದ್ರ ಮುಂಬೈ ಆಗಿದ್ದುದು. ಅದೇನೇ ಇದ್ದರೂ ಅವರು ಮುಂಬೈನಲ್ಲಿ ಸಂಘಟಿಸಿದ ಬಂದರು ಕಾರ್ಮಿಕ ಹೋರಾಟ ಮತ್ತು ಉತ್ತರ ಕನ್ನಡದಲ್ಲಿ ಸಂಘಟಿಸಿದ ರೈತ ಹೋರಾಟ ಹಾಗೂ ಅದರ ಭಾಗವಾಗಿ ರೂಪಿಸಿದ ಶಿಕ್ಷಣ ಆಂದೋಲನ ದಿನಕರ ದೇಸಾಯಿಯವರನ್ನು ಭಾರತದ ಸಮಾಜವಾದಿ ಆಂದೋಲನದ ಇತಿಹಾಸದಲ್ಲಿ ಅಮರರನ್ನಾಗಿಸಿದೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಳಲ ಬಳಿಯ ಅಲಗೇರಿಯಲ್ಲಿ ಅನುಕೂಲಸ್ಥ ರೈತ ಕುಟುಂಬವೊಂದರಲ್ಲಿ ೧೯೦೯ರಲ್ಲಿ ಜನಿಸಿದ ದಿನಕರರು ಸ್ನಾತಕೋತ್ತರ ಶಿಕ್ಷಣಕ್ಕಾಗಿ ಮುಂಬೈಗೆ ಹೋದವರು ಅಲ್ಲಿ ಶಿಕ್ಷಣ ಮುಗಿದೊಡನೆ ಉದ್ಯೋಗವನ್ನರಸದೆ ಗಾಂಧಿಜಿಯವರ ರಾಜಕೀಯ ಗುರು ಎಂದೇ ಪ್ರಸಿದ್ಧರಾದ ಗೋಪಾಲಕೃಷ್ಣ ಗೋಖಲೆಯವರು ಸ್ಥಾಪಿಸಿದ್ದ ‘ಸರ್ವೆಂಟ್ಸ್ ಆಫ್ ಇಂಡಿಯಾ’ ಸಂಸ್ಥೆಯ ಧ್ಯೇಯೋದ್ದೇಶಗಳಿಂದ ಆಕರ್ಷಿತರಾಗಿ ಅದರ ಆಜೀವ ಸದಸ್ಯತ್ವ ಪಡೆದು ಅಲ್ಲಿಯೇ ಸಾರ್ವಜನಿಕ ಸೇವೆಯಲ್ಲಿ ತೊಡಗಿಕೊಂಡರು. ಸಂಸ್ಥೆಯ ಸದಸ್ಯರು ಯಾವುದೇ ರಾಜಕೀಯ ಪಕ್ಷದೊಡನೆ ಗುರುತಿಸಿಕೊಳ್ಳಬಾರದೆಂಬ ನಿಬಂಧನೆಯಿಂದಾಗಿಯೇ ದೇಸಾಯಿಯವರು ಸಮಾಜವಾದಿ ಪಕ್ಷದದೊಡನೆ ಅಧಿಕೃತ ಸಂಬಂಧ ಹೊಂದಲಿಲ್ಲ.

ದಿನಕರರು ಮೊದಲು ಆರಂಭಿಸಿದ್ದು ಕಡಲ ಕಾರ್ಮಿಕರ ಹೋರಾಟವನ್ನು. ಆವರೆಗೆ ಸಂಘಟನೆಯನ್ನೇ ಕಾಣದಿದ್ದ ಮುಂಬೈ ಬಂದರಿನ ಕೆಲಸಗಾರರ ಸಂಘವನ್ನು ೧೯೩೬ರಲ್ಲಿ ಸ್ಥಾಪಿಸಿದ ಅವರು, ದಟ್ಟ ದರಿದ್ರ ಸ್ಥಿತಿಯಲ್ಲಿದ್ದ ಅವರಿಗೆ ಕನಿಷ್ಟ ಕಾರ್ಮಿಕ ಹಕ್ಕು ಮತ್ತು ಸೌಲಭ್ಯಗಳನ್ನು ಕಲ್ಪಿಸಿಕೊಡಲು ೪೦ ದಿನಗಳ ಮುಷ್ಕರ ನಡೆಸಿ ಅದರಲ್ಲಿ ಯಶಸ್ವಿಯೂ ಆದರು. ಕಾರ್ಮಿಕ ಪ್ರತಿನಿಧಿಯಾಗಿ ದೇಶ ವಿದೇಶ ಸಂಚರಿಸಿ ಕಾರ್ಮಿಕ ಹಕ್ಕುಗಳ ಬಗ್ಗೆ, ವಿಶೇಷವಾಗಿ ಕಡಲ ಕಾರ್ಮಿಕರ ಹಕ್ಕು ಬಾಧ್ಯತೆಗಳ ಬಗ್ಗೆ ಜಾಗೃತಿ ಮೂಡಿಸಿದರು. ಈ ಕೆಲಸ ಅವರನ್ನು ಹಲವು ವರ್ಷಗಳ ಕಾಲ ಮುಂಬೈ ನಗರಪಾಲಿಕೆಯ ಸದಸ್ಯರಾಗಿ ಮತ್ತು ಮುಂಬೈ ಬಂದರು ಟ್ರಸ್ಟಿನ ಧರ್ಮ ದರ್ಶಿಯಾಗಿ ಕೆಲಸ ಮಾಡಲೂ ಸಹಾಯ ಮಾಡಿತು.

ದಿನಕರರು ಮುಂಬೈನಲ್ಲಿ ನೆಲೆಸಿ ತಮ್ಮ ಊರನ್ನು ಮರೆಯಲಿಲ್ಲ. ತಮ್ಮ ಬಾಲ್ಯದಲ್ಲಿ ಕಣ್ಣಾರೆ ಕಂಡಿದ್ದ ಬಡ ರೈತರ ಕಷ್ಟ–ಸಂಕಷ್ಟಗಳನ್ನು ನೆನೆದು ಅವರು ಮುಂಬೈನ ಕಾರ್ಮಿಕ ಹೋರಾಟದ ಜೊತೆ ಜೊತೆಗೇ ೧೯೩೬ರಲ್ಲೇ ಅಂಕೋಲೆಯ ಸುತ್ತಮುತ್ತ ಗೇಣಿದಾರ ರೈತರ ಸಂಘಟನೆ ಆರಂಭಿಸಿದರು. ಉತ್ತರ ಕನ್ನಡ ಜಿಲ್ಲೆಯಾದ್ಯಂತ ರೈತಕೂಟಗಳನ್ನು ಸ್ಥಾಪಿಸಿ ಸಭೆ, ಮೆರವಣಿಗೆ, ಮುತ್ತಿಗೆಗಳನ್ನು ನಡೆಸಿ ಭೂಮಾಲಿಕರ ದಬ್ಬಾಳಿಕೆಯ ವಿರುದ್ಧ ರೈತರಲ್ಲಿ ಜಾಗೃತಿ ಮೂಡಿಸಿದರು. ಗೇಣಿದಾರರನ್ನು ಜೀತದಾಳುಗಳನ್ನಾಗಿ ಪರಿವರ್ತಿಸಿದ್ದ ಸ್ಥಳೀಯ ಗೇಣಿ ರೂಢಿ ಮತ್ತು ಕಾನೂನುಗಳನ್ನು ಗೇಣಿದಾರರ ಪರವಾಗಿ ಬದಲಾಯಿಸುವಂತೆ ಆಗಿನ ಮುಂಬೈ ಸರ್ಕಾರದ ಮೇಲೆ ಒತ್ತಡ ಹೇರಿದರು.

ಮೇಲ್ಜಾತಿಗಳಿಗೆ ಸೇರಿದ್ದ ಭೂಮಾಲಿಕರು ಇದರಂದ ಬೆದರಿದರು. ದಿನಕರರನ್ನು ಸ್ಥಳೀಯ ನುಡಿಗಟ್ಟಿನಲ್ಲಿ ‘ಹಾವಳಿ ಮಂಜ’(ಅಂದರೆ ಪುಂಡ ಗಂಡುಬೆಕ್ಕು) ಎಂದು ಶಪಿಸುತ್ತಿದ್ದ ಭೂಮಾಲಿಕರು ಅನಗತ್ಯ ಗಲಭೆ–ಗೊಂದಲಗಳ ನೆಪವೊಡ್ಡಿ ಸ್ಥಳೀಯ ಆಡಳಿತದ ಮೇಲೆ ಪ್ರಭಾವ ಬೀರಿ ಅವರನ್ನು ಐದು ವರ್ಷಗಳ ಕಾಲ ಜಿಲ್ಲೆಯಿಂದ ಗಡಿಪಾರು ಮಾಡಿಸುವಲ್ಲಿ ಯಶಸ್ವಿಯಾದರು. ಆದರೆ ದಿನಕರರ ಮುಂಬೈನಲ್ಲಿನ ಪ್ರಭಾವದಿಂದಾಗಿ ರಾಜ್ಯ ಸರ್ಕಾರ ಗೇಣಿ ಕಾನೂನುಗಳನ್ನು ಸಡಲಿಸಿತು. ರೈತರು ಸ್ವಲ್ಪ ನಿಸೂರಾಗಿ ಉಸಿರಾಡುವಂತಾಗಿ ದಿನಕರರು ಉತ್ತರ ಕನ್ನಡ ಜಿಲ್ಲೆಯ ಮನೆ ಮಾತಾದರು. ಆದರೆ ಈ ಆಂದೋಲನ ಇಲ್ಲಿಗೇ ನಿಲ್ಲದೆ ಸತತವಾಗಿ ೩೫ ವರ್ಷಗಳ ಕಾಲ ಕಾವು ಕಳೆದುಕೊಳ್ಳದೆ ನಡೆದು ದೇವರಾಜ ಅರಸರ ಭೂಸುಧಾರಣೆ ಕಾಯ್ದೆ ಜಾರಿಯಾದಾಗಲೇ ತನ್ನ ತಾರ್ಕಿಕ ಅಂತ್ಯ ಕಂಡುಕೊಂಡದ್ದು. ಪಕ್ಕದ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಸುಪ್ರಸಿದ್ಧ ಕಾಗೋಡು ಭೂ ಸತ್ಯಾಗ್ರಹದ ರೂವಾರಿ ಗಣಪತಿಯಪ್ಪ ಮೂಲತಃ ಉತ್ತರ ಕನ್ನಡದ ಸಿದ್ಧಾಪುರದವರಾಗಿದ್ದು, ಅಲ್ಲಿ ದಿನಕರ ದೇಸಾಯಿಯವರು ಸಂಘಟಿಸಿದ್ದ ರೈತಹೋರಾಟದ ಸ್ಫೂರ್ತಿಯಿಂದಲೇ ಸಾಗರಕ್ಕೆ ಬಂದು ಕಾಗೋಡಿನ ಗೇಣಿದಾರರನ್ನು ಜಾಗೃತಗೊಳಿಸಿದ್ದು.

ದೇಸಾಯಿಯವರು ತಮ್ಮೆಲ್ಲ ಸಾರ್ವಜನಕ ಭಾಷಣಗಳಲ್ಲಿ ಪದೇ ಪದೇ ಸಮಾಜವಾದಿ ತತ್ವಗಳ ಉಲ್ಲೇಖ ಮಾಡುತ್ತಿದ್ದರಾದರೂ, ಸಮಾಜವಾದಿ ಪಕ್ಷದ ಜಗಳ–ಒಳಜಗಳಗಳ ರಾಜಕಾರಣದತ್ತ ಒಮ್ಮೆಯೂ ಸುಳಿಯಲಿಲ್ಲ. ಇದರಂದಾಗಿ ಅವರು ಏಕಾಂಗಿಯಾಗಿ ಜಿಲ್ಲೆಯಲ್ಲಿ ಸಮಾಜವಾದಿ ತತ್ವಗಳನ್ನು ಜನರ ಮನದಲ್ಲಿ ನೆಲೆಯೂರಿಸುವ ಕಾಯಕದತ್ತ ಮನಸ್ಸು ಕೊಟ್ಟರು. ಹೋರಾಟದಷ್ಟೇ ಹುರುಪಿನಂದ ರಚನಾತ್ಮಕ ಚಟುವಟಿಕೆಗಳಲ್ಲೂ ತೊಡಗಿಕೊಂಡರು. ತಮ್ಮ ರೈತ ಸಂಘಟನೆಯ ಗೆಳೆಯ ಶೇಷಗಿರಿ ಪಿಕಳೆಯವರನ್ನು ಅವರು ಕೆಲಸ ಮಾಡುತ್ತಿದ್ದ ಶಾಲೆ ಅವರ ಚಳುವಳಿಯ ಕಾರಣದಿಂದಾಗಿ ಸೇವೆಯಿಂದ ಹೊರಹಾಕಿದಾಗ ದಿನಕರರು ರೈತರ ದೇಣಿಗೆ ಮತ್ತು ಶ್ರಮದಾನದ ಮೂಲಕ ಬೊಬ್ರುವಾಡ ಎಂಬ ಹಳ್ಳಿಯಲ್ಲಿ ಕಟ್ಟಡವೊಂದನ್ನು ನಿರ್ಮಿಸಿ ಅಲ್ಲಿ ಶಾಲೆಯೊಂದನ್ನು ಆರಂಭಿಸಿ ಪಿಕಳೆಯವರಿಗೆ ಜೀವನೋಪಾಯ ಕಲ್ಪಿಸಿಕೊಟ್ಟರು. ಇದೇ ನೆಪವಾಗಿ ಅವರು ರೈತ ಮಕ್ಕಳ ಶಿಕ್ಷಣಕ್ಕಾಗಿ ‘ಕೆನರಾ ವೆಲ್‌ಫೇರ್ ಟ್ರಸ್ಟ್’ನ್ನು ಸ್ಥಾಪಿಸಿ ಅದರಡಿಯಲ್ಲಿ ಜಿಲ್ಲೆಯಾದ್ಯಂತ ಪ್ರಾಥಮಿಕ ಶಾಲೆಗಳಿಂದ ಹಿಡಿದು ವಿವಿಧ ಪದವಿ ಕಾಲೇಜುಗಳವರೆಗೆ ಮುವ್ವತ್ತಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು

ಸ್ವತಃ ಸಾಹಿತಿಗಳಾಗಿದ್ದ ದಿನಕರರು ಜಿಲ್ಲೆಯ ಸಾಹಿತ್ಯ ಪೋಷಣೆಗಾಗಿ ‘ಜನತಾ ಪ್ರಕಾಶನ’ ಆರಂಭಿಸಿ ಅನೇಕ ಯುವಸಾಹಿತಿಗಳನ್ನು ಪ್ರೋತ್ಸಾಹಿಸಿದರು. ‘ಜನಸೇವಕ’ ಎಂಬ ಪತ್ರಿಕೆಯನ್ನು ಆರಂಭಿಸಿ ಅದರ ಮೂಲಕ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಶಿಕ್ಷಣದ ಪ್ರಯೋಗ ನಡೆಸಿದರು. ತಮ್ಮ ಮದುವೆಯನ್ನು ಹದಿಮೂರು ರೂಪಾಯಿಗಳ ಖರ್ಚಿನಲ್ಲಿ ಮಾಡಿಕೊಂಡಿದ್ದ ಸಮಾಜವಾದಿ ದಿನಕರರು ತಮ್ಮ ಮಕ್ಕಳನ್ನೂ ಸಮಾಜವಾದಿ ಸಂಸ್ಕೃತಿಯಲ್ಲಿ ಬೆಳೆಸಿ ಅವರೆಲ್ಲರೂ ಜಾತಿ ಮೀರಿ ಮದುವೆಯಾಗಲು ಅನುವು ಮಾಡಿಕೊಟ್ಟರು.

ಇಂತಹ ತನ್ನ ಪ್ರಬುದ್ಧ ಮತ್ತು ನಿಸ್ವಾರ್ಥಿ ‘ಸೇವಕ’ನನ್ನು ಉತ್ತರ ಕನ್ನಡದ ಜನತೆ ಒಮ್ಮೆ–೧೯೬೭ರಲ್ಲಿ–ಲೋಕಸಭೆಗೆ ಆರಿಸಿ ಕಳಿಸಿತು. ರೈತ ಹೋರಾಟ ಕಾಲದಿಂದಲೂ ಸಮಾಜವಾದಿ ಪಕ್ಷದಿಂದ ಬೇಷರತ್ ಬೆಂಬಲ ಪಡೆದು ಚುನಾವಣಾ ರಾಜಕಾರಣದಲ್ಲಿ ತೊಡಗಿಕೊಂಡಿದ್ದ ದಿನಕರರು ಆ ಚುನಾವಣೆಯಲ್ಲಿ ಜಿಲ್ಲೆಯಾದ್ಯಂತ ತಮ್ಮ ಪ್ರತಿನಿಧಿಗಳನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್ಸನ್ನು ಧೂಳೀಪಟ ಮಾಡಿದ್ದರು. ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದ ಈ ಜನಸೇವಕ ೧೯೮೨ರ ನವೆಂಬರ್ ಆರರಂದು ಮುಂಬೈನಲ್ಲಿ ಹೃದಯಾಘಾತದಿಂದ ನಿಧನ ಹೊಂದಿದರು. ಅಲ್ಲಿಗೆ ಉತ್ತರ ಕನ್ನಡದ ಸಾರ್ವಜನಿಕ ಬದುಕಿನಲ್ಲಿ ಒಂದು ಉಜ್ವಲ ಅಧ್ಯಾಯ ಮುಗಿದಂತಾಯಿತು.

**–ಡಿಎಸ್ಸೆನ್** (ಸಾಧಾರ)

# ಗಾಂಧಿ ನೆನಪು : ಸೇವಾ ಗ್ರಾಮಕ್ಕೊಂದು ಭೇಟಿ

–ಎನ್.ಎಂ. ಕುಲಕರ್ಣಿ



**ಕ**ಳೆದ ಅಕ್ಟೋಬರ್‌ನಲ್ಲಿ ಹೆಗ್ಗೋಡಿನ ನಮ್ಮ ಚರಕ ತಂಡದೊಂದಿಗೆ ವಾರ್ಧಾ ಆಶ್ರಮಕ್ಕೆ ಭೇಟಿ ಕೊಡುವ ಅವಕಾಶ ಒದಗಿಬಂದಿತ್ತು. ಚರಕ ಸಂಸ್ಥೆಯ ಪ್ರಸನ್ನ ಸ್ವತಃ ಆಸಕ್ತಿ ವಹಿಸಿ ನಮ್ಮನ್ನೆಲ್ಲ ಅಲ್ಲಿಗೆ ಕರೆದೊಯ್ದಿದ್ದರು.

ವಾರ್ಧಾ ಮಹಾರಾಷ್ಟ್ರದ ವಿದರ್ಭ ಪ್ರಾಂತ್ಯದಲ್ಲಿದೆ. ಗಾಂಧೀಜಿಯವರ ಪರಮ ಅನುಯಾಯಿ ವಿನೋಬಾ ಭಾವೆಯವರ ಪೌನಾರ್ ಆಶ್ರಮ ಕೂಡ ವಾರ್ಧಾ ಬಳಿಯೇ ಇದೆ. ಗಾಂಧೀಜಿಯನ್ನು ತಮ್ಮ ರಾಜಕೀಯ ವೈರಿ ಎಂದು ಪರಿಗಣಿಸಿದ್ದ ಅಂಬೇಡ್ಕರ್ ಅವರ ಪ್ರಸಿದ್ಧ ದೀಕ್ಷಾಭೂಮಿಯೂ, ಗಾಂಧಿ ಹತ್ಯೆಗೆ ಕಾರಣರೆನ್ನಲಾದ ಆರ್.ಎಸ್.ಎಸ್. ಕೇಂದ್ರ ಕಚೇರಿ ಇರುವ ನಾಗಪುರ ಕೂಡ ಇಲ್ಲಿಂದ ಕೇವಲ ೮೦ ಕಿ.ಮೀ. ದೂರದಲ್ಲಿದೆ. ಮಹಾರಾಷ್ಟ್ರದ ಇತರ ಪ್ರಾಂತ್ಯಗಳಿಗೆ ಹೋಲಿಸಿದರೆ ಈ ಭಾಗ ಹಿಂದುಳಿದ ಪ್ರದೇಶವಾಗಿದೆ.

ಗಾಂಧಿ ಆಶ್ರಮವಿರುವುದು ವಾರ್ಧಾ ಬಳಿಯ ಸೇವಾ ಗ್ರಾಮದಲ್ಲಿ. ಆಶ್ರಮಕ್ಕೆ ಹೊಂದಿಕೊಂಡಂತಿರುವ "ನಯೀ ತಾಲೀಮ್ ಸಮಿತಿ"ಯ ಕಟ್ಟಡವೊಂದರಲ್ಲಿ ನಮಗೆ ಸಾಮೂಹಿಕ ವಸತಿ ವ್ಯವಸ್ಥೆ ಮಾಡಲಾಗಿತ್ತು. ನಾವು ಅಲ್ಲಿಗೆ ತಲುಪಿದ್ದು ಸಂಜೆ ೭ ಗಂಟೆಗೆ. ನಯೀ ತಾಲೀಮ್ ಎಂದರೆ ಹೊಸ ಶಿಕ್ಷಣ ಎಂದರ್ಥ. ಗುಮಾಸ್ತರನ್ನು ತಯಾರಿಸುವ ಬ್ರಿಟಿಷ್ ಶಿಕ್ಷಣ ನೀತಿಯನ್ನು ಒಪ್ಪದ ಗಾಂಧೀಜಿ ಪರ್ಯಾಯ ಶಿಕ್ಷಣಕ್ಕೆ ಒತ್ತುಕೊಡುತ್ತಿದ್ದರು. ಅಂತಹ ಶಿಕ್ಷಣದ ಜವಾಬ್ದಾರಿ ಹೊತ್ತ ಸಮಿತಿ ಇದಾಗಿತ್ತು. ಈಗಲೂ ಅದು ಚಟುವಟಿಕೆಗಳನ್ನು ನಡೆಸುತ್ತಿದ್ದು ಹೊರ ರಾಜ್ಯದ ಕೆಲವು ಕಾಲೇಜು ಹುಡುಗರು ಅಲ್ಲಿ ನಮಗೆ ಕಂಡುಬಂದರು.

ಆಶ್ರಮದ ಚಟುವಟಿಕೆಗಳನ್ನು ದಿನದ ಆರಂಭದಿಂದಲೇ ನೋಡುವ ಕುತೂಹಲದಿಂದ ಬೆಳಿಗ್ಗೆ ೬ ಗಂಟೆಗೇ ಹೋದೆವು. ಧೂಳು ಮತ್ತು ಕೆಸರು ಆಗದಿರಲೆಂದು ಅಂಗಳಕ್ಕೆಲ್ಲ ಮರಳಿನ ದಪ್ಪ ಗೋಣೆಯನ್ನು ಹಾಕಲಾಗಿತ್ತು. ವಿದೇಶಿಗರಿಬ್ಬರು ಉದ್ದನೆಯ ಕಡ್ಡಿ ಹಿಡಿಯಿಂದ ಅಂಗಳ ಗುಡಿಸುತ್ತಿದ್ದರು. ಕಸವೆಂದರೆ ಇನ್ನೇನಿಲ್ಲ; ಮರಗಳಿಂದ ಉದುರಿದ ಎಲೆಗಳಷ್ಟೆ. ಬಯಲು ಸೀಮೆಯಲ್ಲಿ ಸಾಮಾನ್ಯವಾಗಿ ಬೆಳೆಯುವ ಬೇವು, ಅರಳೆ ಮರಗಳೇ ಅಲ್ಲಿ ಹೆಚ್ಚಾಗಿದ್ದವು. ಬೆಳಗಿನ ಪ್ರಶಾಂತ ವಾತಾವರಣದಲ್ಲಿ ಗುಬ್ಬಿಗಳ ಕಲರವ ಪ್ರಕೃತಿಯ ಸಂಗೀತ ಸಂಯೋಜನೆಯಂತಿತ್ತು. ಬೆಳಕಿನ ವಿನ್ಯಾಸ ಮಾಡಿದಂತೆ ಹೊಂಬಣ್ಣದ ಸೂರ್ಯ ಕಿರಣಗಳು ಆಶ್ರಮಕ್ಕೆ ಕಾಂತಿ ತಂದಿದ್ದವು. ಆಶ್ರಮವಾಸಿ ಮಹಿಳೆಯರಿಬ್ಬರು ಬಾಪುಕುಟಿಯ ಬಾಗಿಲನ್ನು ತೆರೆದು ಈಚಲು ಹಿಡಿಯಿಂದ ಗುಡಿಸತೊಡಗಿದರು. ಶುಚಿತ್ವ ಮತ್ತು ಪ್ರಶಾಂತತೆ ಆಶ್ರಮದ ಮುಖ್ಯ ಲಕ್ಷಣವಾಗಿದ್ದವು.

ಬಾಪುಕುಟಿ ಈ ಆಶ್ರಮದ ಮೊಟ್ಟಮೊದಲ ಕುಟೀರ. ಗಾಂಧೀಜಿ ವಾರ್ಧಾಕ್ಕೆ ಬಂದು ಮಗನವಾಡಿಯಲ್ಲಿ ತಂಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕುವವರೆಗೆ ಕಾಲಿಡುವುದಿಲ್ಲವೆಂದು ಸಾಬರಮತಿ ಆಶ್ರಮವನ್ನು ತೊರೆದು ಬಂದಿದ್ದರು. ದೇಶ ಪರ್ಯಟನೆಯಲ್ಲೇ ಹೆಚ್ಚಿನ ಕಾಲವ್ಯಯವಾಗುತ್ತಿದ್ದರೂ ತಾತ್ಕಾಲಿಕ ತಂಗುದಾಣವೊಂದು ಬೇಕಿತ್ತು. ವಾರ್ಧಾ ಪಟ್ಟಣ ಪ್ರದೇಶವಾಗಿದ್ದರಿಂದ ತಮ್ಮ ಅನುಯಾಯಿಗಳಿಗೆ ಹಳ್ಳಿಗೆ ಹೋಗಿ ಸೇವೆ ಮಾಡಲು ಹೇಳುತ್ತಿದ್ದರು. ಹತ್ತಿರದ ಶೆಗಾಂವ್ ಎಂಬ ಹಳ್ಳಿ ಕಾರ್ಯಕ್ಷೇತ್ರವಾಯಿತು. ಅದೇ ಸೇವಾಗ್ರಾಮವಾಯಿತು.

ಬಾಪೂಜಿಯವರಿಗೆ ಮತ್ತು ಕಸ್ತೂರಬಾ ಅವರಿಗೆ ಕುಟೀರವೊಂದನ್ನು ಕಟ್ಟಲು ಅನುಯಾಯಿಗಳು ಮುಂದಾದರು. ಬಾಪು ಅದನ್ನು ಕೇವಲ ನೂರು ರೂಪಾಯಿಗಳಲ್ಲಿ ನಿರ್ಮಿಸಬೇಕೆಂದು ಹೇಳಿದ್ದರು. ಅವರ ಆಶಯದಂತೆಯೇ ಸ್ಥಳೀಯವಾಗಿ ದೊರೆಯುವ ಸಾಮಗ್ರಿಗಳನ್ನು ಬಳಸಿಕೊಂಡು ಅತ್ಯಂತ ಸರಳವಾಗಿ ಕುಟೀರವೊಂದನ್ನು ಕಟ್ಟಲಾಯಿತು. ಅದೇ ಬಾಪುಕುಟಿ. ಬಿದಿರುಕೋಲುಗಳ ಸಾಲು ತಡಿಕೆಯಿಂದ ನಿರ್ಮಿಸಿದ ಬೇಲಿ, ಮಣ್ಣಿನ ನೆಲ, ಗೋಡೆ, ಕಾಡಿನ ತ್ಯಾಜ್ಯವೆನ್ನಬಹುದಾದಂತಹ ಮರಮುಟ್ಟುಗಳನ್ನು ಜೋಡಿಸಿ ನಾಡಹೆಂಚನ್ನು ಹೊದಿಸಿದ ಮಾಡು. ಹೆಚ್ಚೆಂದರೆ ನೂರು ವರ್ಷ ಬದುಕಿ ಮಣ್ಣಾಗುವ ಮನುಷ್ಯ ಶರೀರಕ್ಕೆ ಇದಕ್ಕಿಂತ ಹೆಚ್ಚಿಗೆ ಯಾಕೆ ಬೇಕು ಎಂದು ಬಾಪು ಕುಟಿ ನೋಡಿದ ಯಾರಿಗಾದರೂ ಅನ್ನಿಸದೇ ಇರದು. ಹಾಗೇ, ನಾಗರೀಕತೆಯ ಅನುದಿನದ ಪ್ರತಿಬಿಂಬದಂತೆ ಹುಟ್ಟುತ್ತಿರುವ ನಮ್ಮ ನಗರ ಶೈಲಿಯ ಮನೆಗಳು ಭದ್ರತೆಯ ಹೆಸರಿನಲ್ಲಿ ಕಟ್ಟಿಕೊಳ್ಳುವ ಕಾಂಕ್ರೀಟ್ ಪಂಜರದಂತಾಗಿವೆ ಎಂದೂ ಯಾರಿಗಾದರೂ ಅನ್ನಿಸದಿರದು.

ಆಶ್ರಮಕ್ಕೆ ಬಂದು ಹೋಗುವವರ ಸಂಖ್ಯೆ ಕ್ರಮೇಣ ಹೆಚ್ಚಾಗಿ ಕಸ್ತೂರಬಾ ಅವರಿಗೆ ಬಟ್ಟೆ ತೊಡುವ ಖಾಸಗಿತ್ವವೂ ಕಷ್ಟವೆನಿಸಿದಾಗ ಅವರಿಗಾಗಿ ಪಕ್ಕದಲ್ಲಿ ಮತ್ತೊಂದು ಕುಟೀರವನ್ನು ಕಟ್ಟಲಾಯಿತು. ಇದು 'ಬಾಕುಟಿ'. ಇದಲ್ಲದೆ ಇನ್ನೂ ಎರಡು ಕುಟೀರಗಳಿವೆ. ಮೀರಾಬೆನ್ ಮತ್ತು ಜಮನಾಲಾಲ್ ಬಜಾಜ್ ತಮಗಾಗಿ ಕಟ್ಟಿಕೊಂಡದ್ದು. ಈ ನಾಲ್ಕೂ ಕುಟೀರಗಳ ಮಧ್ಯದ ಅಂಗಳವೇ ಪ್ರಾರ್ಥನೆಯ ಸ್ಥಳ. ಇಲ್ಲಿ ಪ್ರತಿದಿನ ಸಂಜೆ ಆರು ಗಂಟೆಗೆ ತಪ್ಪದೆ ಪ್ರಾರ್ಥನೆ ನಡೆಯುತ್ತದೆ. ಈ ನಾಲ್ಕು ಕುಟೀರಗಳು ಸಾರ್ವಜನಿಕರ ವೀಕ್ಷಣೆಗೆ ತೆರೆದಿಡಲಾಗಿದ್ದು, ಈಗಿನ ಆಶ್ರಮವಾಸಿಗಳಿಗೆ ಪ್ರತ್ಯೇಕ ಕುಟೀರಗಳಿವೆ. ಹಿಂಭಾಗದಲ್ಲಿರುವ ಗೋಶಾಲೆಯಲ್ಲಿ ಸುಮಾರು ೨೫–೩೦ ದನಕರುಗಳಿವೆ. ಮಹಾರಾಷ್ಟ್ರದ ಎತ್ತರ ತಳಿಯ ಹಸುಗಳನ್ನು ನೋಡುವುದೇ ಒಂದು ಆನಂದ.

ಸಂಜೆಯ ಪ್ರಾರ್ಥನೆಯದ್ದೊಂದು ವಿಶಿಷ್ಟ ಅನುಭವ. ಪ್ರಾರ್ಥನೆಗೆ ಹತ್ತು ನಿಮಿಷ ಮುಂಚೆಯೇ ಆವರಣವನ್ನು ಸಿದ್ಧಗೊಳಿಸಲಾಗಿತ್ತು. ಪ್ರಾರ್ಥನೆಯ ಸ್ಥಳ ಮರಳಿನ ಅಂಗಳವೇ ಆಗಿದ್ದರೂ ಸುಮಾರು ೨೦ x ೨೦ ಅಡಿ ಜಾಗದ ಸುತ್ತಲೂ ಅರ್ಧ ಅಡಿ ಎತ್ತರ ಮರದ ಚೌಕಟ್ಟು ಹಾಕಿರುವುದರಿಂದ ಅದಕ್ಕೊಂದು ಪಾವಿತ್ರ್ಯ ಬಂದಂತಿತ್ತು. ನಾಲ್ಕು ಸಾಲು ಚಾಪೆಗಳನ್ನು ಹಾಸಿ ತಾಳ–ತಂಬೂರಿಗಳನ್ನು ಇಡಲಾಗಿತ್ತು. ಎದುರಿಗೆ ಗಾಂಧೀಜಿ ಕುಳಿತುಕೊಳ್ಳುತ್ತಿದ್ದ ಸ್ಥಳದಲ್ಲಿ ಅವರು ಕೂರುತ್ತಿದ್ದ ಖಾಲಿ ಆಸನವನ್ನು ಗೌರವಪೂರ್ವಕವಾಗಿ ಇಡಲಾಗಿತ್ತು.

ಸರಿಯಾಗಿ ಆರು ಗಂಟೆಗೆ ಶರ್ಮಾಜಿ ಎಂದು ಕರೆಯಲ್ಪಡುವ ಆಶ್ರಮದ ಮೇಲ್ವಿಚಾರಕರು ಬಂದರು. ನಮ್ಮನ್ನುದ್ದೇಶಿಸಿ, 'ಆಪ್ ಲೋಗ್ ಯಹಾ ಬೈಟ್ ಸಕ್ತೆ' ಎಂದು ಖಾಲಿ ಚಾಪೆಗಳತ್ತ ಕೈ ತೋರಿಸಿದರು. ಹಿಂದಿ ಭಜನೆಯೊಂದಿಗೆ ಪ್ರಾರ್ಥನೆ ಆರಂಭವಾಯಿತು. ಹಾಡು ಅಂತಹ ಸುಶ್ರಾವ್ಯವಾಗೇನೂ ಇರಲಿಲ್ಲ. ಹಾಡುವವರ ಸ್ವರ ಕೂಡ ಪರಸ್ಪರ ಹೊಂದಿಕೆಯಾಗುತ್ತಿರಲಿಲ್ಲ. ಅದೆಲ್ಲ ಅಷ್ಟೇನೂ ಮುಖ್ಯವಲ್ಲ ಎಂಬಂತೆ ಅವರ ಧೋರಣೆ ಇತ್ತು. ಈಶೋಪನಿಷತ್ತಿನ ಒಂದು ಶ್ಲೋಕ, ಭಗವದ್ಗೀತೆಯ ಎರಡು ಶ್ಲೋಕಗಳನ್ನು ಹೇಳಲಾಯಿತು. ಕುರಾನ್ ಮತ್ತು ಬೈಬಲ್‌ನ ಒಂದೊಂದು ನುಡಿಯನ್ನೂ ಹೇಳಲಾಯಿತು. ಈಗಲೂ ಅಗತ್ಯವಿರುವ ಸರ್ವಧರ್ಮ ಸಮನ್ವಯದ ಪ್ರಾರ್ಥನೆಯನ್ನು ಗಾಂಧೀಜಿ ಎಂದೋ ಆಚರಣೆಗೆ ತಂದಿದ್ದರು.

ನನಗೆ ಎಲ್ಲವೂ ಹೊಸತಾಗಿದ್ದರಿಂದ ಅವರೊಂದಿಗೆ ಧ್ವನಿಗೂಡಿಸಲೂ ಆಗದೆ ಸುಮ್ಮನೇ ಆಲಿಸತೊಡಗಿದ್ದೆ. ಕಣ್ಣೆದುರಿಗಿರುವ ಅಶ್ವತ್ಥ ಮರದ ಆಕೃತಿ ಸಂಜೆ ಬೆಳಕಿನಲ್ಲಿ ನಿಧಾನಕ್ಕೆ ಕಪ್ಪಾಗತೊಡಗಿದ ದೃಶ್ಯ ಪರಿಣಾಮಕಾರಿಯಾಗಿತ್ತು. ಪ್ರಾರ್ಥನೆಯ ಕೊನೆಯ ಭಾಗವಾಗಿ ಶರ್ಮಾಜಿ ಗಾಂಧೀಜಿಯವರಿಗೆ ಸಂಬಂಧಿಸಿದ ಹಿಂದಿ ಪುಸ್ತಕವೊಂದರ ಆಯ್ದ ಭಾಗವನ್ನು ಓದಿದರು. ಹಿಂದಿನ ದಿನವಷ್ಟೇ 'ಸಂವಾದ'ದಲ್ಲಿ ಪ್ರಕಟವಾಗಿದ್ದ ಡಿ.ಎಸ್. ನಾಗಭೂಷಣ ಅವರ 'ಗಾಂಧಿ ತತ್ವದ ಸರಳೀಕರಣದ ಅಪಾಯಗಳು' ಎಂಬ ಸುದೀರ್ಘ ಲೇಖನವನ್ನು ಓದಿದ್ದೆ. ದೇಶ ವಿಭಜನೆಯ ಸಂದರ್ಭದಲ್ಲಿ ಗಾಂಧೀಜಿಯವರ ಅಸಹಾಯಕತೆ ಹೇಗೆ ಅವರ ವ್ಯಕ್ತಿತ್ವದ ಪ್ರಭೆಯನ್ನು ಮಸುಕುಗೊಳಿಸಿತು ಎಂಬುದನ್ನು ವಿಶದವಾಗಿ ಚರ್ಚಿಸಿದ್ದರು. ಕಾಕತಾಳೀಯವೆಂಬಂತೆ ಇಲ್ಲೂ ಅದೇ ವಿಚಾರಕ್ಕೆ ಸಂಬಂಧಿಸಿದ ಭಾಗವನ್ನು ಓದಲಾಯಿತು. ಗಾಂಧೀಜಿ ದೇಶ ವಿಭಜನೆಯನ್ನು ತಮ್ಮ ಆಧ್ಯಾತ್ಮಿಕ ಸೋಲಾಗಿ ಕಂಡರೆಂದು ಪುಸ್ತಕದ ಲೇಖಕರು ಅಭಿಪ್ರಾಯಪಟ್ಟಿದ್ದರು.

೧೯೪೬ರಲ್ಲಿ ಗಾಂಧೀಜಿ ಆಶ್ರಮದಿಂದ ಹೋದವರು ಮತ್ತೆ ಇಲ್ಲಿಗೆ ಬರಲಿಲ್ಲ. ಅವರ ಕೊನೆಯ ಎರಡು ವರ್ಷಗಳು ಪ್ರಕ್ಷುಬ್ಧತೆಯಿಂದ ಕೂಡಿದ್ದವು. ಕಸ್ತೂರಬಾ ಕೂಡ ತೀರಿಕೊಂಡಿದ್ದರು. ಪುರಾನಾ ದಿಲ್ಲಿ ಮತ್ತು ಬಂಗಾಳದ ನೌಖಾಲಿಯಲ್ಲಿ ಕೋಮು ಗಲಭೆಯನ್ನು ಶಮನಗೊಳಿಸಲು ಅವಿರತವಾಗಿ ಶ್ರಮಿಸುತ್ತಿದ್ದರು. ೧೯೪೮ರ ಜನವರಿ ೩೦ ರಂದು ಅವರ ಹತ್ಯೆಯಾಯಿತು.

*

# ಆಧುನಿಕತೆ ಮತ್ತು ಹಿಂಸೆ: ಒಂದು ಚರ್ಚೆ



**ಈ ಪತ್ರಿಕೆಯ ಸಂಪಾದಕ ಬರೆದ 'ಗಾಂಧಿ ದರ್ಶನದ ಸರಳೀಕರಣದ ಅಪಾಯಗಳು' ಲೇಖನಕ್ಕೆ(ನೋಡಿ ಸಂವಾದ: ಅಕ್ಟೋ.೧೧೧೨: ಸಂ: ಇಂದೂಧರ ಹೊನ್ನಾಪುರ) ಹಿರಿಯ ಸಾಹಿತ್ಯ ವಿಮರ್ಶಕ ಮತ್ತು ಸಂಸ್ಕೃತಿಕ ಚಿಂತಕ ಡಾ. ಎಚ್.ಎಸ್. ರಾಘವೇಂದ್ರ ರಾವ್ ಅವರು ಬರೆದ ಒಂದು ವೈಯುಕ್ತಿಕ ಪ್ರತಿಕ್ರಿಯೆ, ಇಬ್ಬರ ನಡುವೆ ಆಧುನಕತೆ ಮತ್ತು ಹಿಂಸೆ ಕುರಿತಂತೆ ಒಂದು ಗಂಭೀರ ಚರ್ಚೆಗೆ ಕಾರಣವಾಯಿತು. ಈ ಅಪೂರ್ಣ ಚರ್ಚೆ ಇನ್ನಷ್ಟು ಜನರಿಂದ ವಿಸ್ತಾರವಾಗಬೇಕೆಂಬ ಉದ್ದೇಶದಿಂದ ಅದನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಆಸಕ್ತರು ಚರ್ಚೆಯನ್ನು ಮುಂದುವರೆಸಬಹುದು–ಸಂಪಾದಕ**

ಪ್ರಿಯರಾದ ನಾಗಭೂಷಣ ಅವರಿಗೆ,

ನಮಸ್ಕಾರ. ನಿಮ್ಮ ಲೇಖನ ಓದಿದೆ. ನಾನು ಇತ್ತೀಚಿನ ದಿನಗಳಲ್ಲಿ ನೋಡಿದ ಅತ್ಯಂತ ಧೀರ, ಪ್ರಾಮಾಣಿಕ ಮತ್ತು ಒಳನೋಟಗಳಿರುವ ಲೇಖನ. ನಾವು ಗೃಹೀತವೆಂದು ತಿಳಿದಿರುವ ಹಲವು ಸಂಗತಿಗಳ ಬಗ್ಗೆ ಮರುಆಲೋಚನೆ ಮಾಡಲು ತೊಡಗಿಸುತ್ತದೆ. ಹೊಗಳಿಕೆಯ ಮಾತುಗಳು ನಿಮಗೆ ಎಷ್ಟೊಂದು ಅಪಥ್ಯವೆಂದು ಗೊತ್ತಿರುವ ನಾನು ಅದನ್ನು ಬೆಳೆಸುವುದಿಲ್ಲ.

ನನ್ನ ಕುತೂಹಲವೆಂದರೆ ನೀವು ನ್ಯಾಯವಾಗಿಯೇ ಇಷ್ಟೊಂದು ವಿರೋಧಿಸುವ ಪಾಶ್ಚತ್ಯರಿಂದ ಬಂದ ಆಧುನಿಕತೆಯ ಆಗಮನಕ್ಕಿಂತ ಹಿಂದಿನ ದಿನಗಳ ಭಾರತೀಯ ಸಮಾಜದ (ಸಮುದಾಯಗಳ) ಸ್ಥಿತಿಗತಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ಅನ್ನುವುದು. ಆಧುನಿಕತೆಯ ಗೈರುಹಾಜರಿಯ ಆ ದಿನಗಳಲ್ಲಿ ಸಾಮಾಜಿಕ ಆರೋಗ್ಯವು ತಾನೇ ತಾನಾಗಿತ್ತೇ? ಗಾಂಧಿಯವರು ಗ್ರಹಿಸಿದ ಅದರ ಕೊರತೆಗಳು ಯಾವ ಮೂಲದಿಂದ ಬಂದವು ಅಥವಾ ಆಧುನಿಕತೆ ಎನ್ನುವುದು ಎಲ್ಲ ಕಾಲದ ಎಲ್ಲ ಮನುಷ್ಯರ ಮನದಾಳದ ಲಕ್ಷಣವೋ? ಅದರೊಂದಿಗಿನ ತುಮುಲವು ಗಾಂಧೀಜಿಯೂ ಸೇರಿದಂತೆ ಎಲ್ಲ ಕಾಲದ ಎಲ್ಲ ಹಿರಿಯರೂ ಅನುಭವಿಸಿರುವುದೇ ಇರಬಹುದೇ? ಇದಕ್ಕೆ ಉತ್ತರ ಗೊತ್ತೆಂಬ ಭ್ರಮೆ ನನಗೆ ಇಲ್ಲ. ಆದರೆ ಸಾಮಾಜಿಕ ಮನುಷ್ಯ ಮತ್ತು ಜೈವಿಕ ಮನುಷ್ಯರ ಸಂಬಂಧಗಳ ಸ್ವರೂಪ ಇಂದಿಗೂ ಕಾಡುತ್ತಿದೆ.

–ಎಚ್ಚೆಸಾರ್

ಪ್ರಿಯ ಎಚ್ಚೆಸ್ಸಾರ್,

ನಿಮ್ಮ ಅಭಿಪ್ರಾಯಕ್ಕಾಗಿ ವಂದನೆಗಳು. ಆಧುನಿಕತೆಯನ್ನು ಕುರಿತ ನಿಮ್ಮ ಪ್ರಶ್ನೆ ಪ್ರಾಮಾಣಿಕವಾಗಿದ್ದರೂ, ಅದು ಈವರೆಗೆ ಉತ್ತರಿಸಲ್ಪಡದಿರುವ ಪ್ರಶ್ನೆಯೇನೂ ಅಲ್ಲ. ನನ್ನ ಹಲವು ಲೇಖನಗಳಲ್ಲಿ ಇದಕ್ಕೆ ಉತ್ತರಿಸುವ (ಈ ಉತ್ತರ ಮೂಲತಃ ನನ್ನದೇನೂ ಅಲ್ಲದಿದ್ದರೂ) ಪ್ರಯತ್ನ ಮಾಡಿರುವೆ. ಆದರೆ (ವಿಶ್ವವಿದ್ಯಾಲಯಗಳ ಪಂಡಿತ ವೃತ್ತಕ್ಕೆ ಸೇರದ ಮತ್ತು ಆ ವೃತ್ತವನ್ನು ಆಗಾಗ್ಗೆ ತರಾಟೆಗೆ ತೆಗೆದುಕೊಳ್ಳುವ) ನಮ್ಮಂತಹವರ ಲೇಖನಗಳನ್ನು, ಪುಸ್ತಕಗಳನ್ನು ಯಾರು ಓದುತ್ತಾರೆ? ಓದಿದರೂ ಚರ್ಚಿಸ ಬಯಸುತ್ತಾರೆ?

ಆದುನಿಕತೆ ಎನ್ನುವುದೇ ಒಂದು ಸಿದ್ಧ ಅರ್ಥದ ಎರಕಕ್ಕೆ ಸಿಕ್ಕಿ, ಅದರ ವಿಮರ್ಶೆ ಸಗಟಾದ ಪರ ಅಥವಾ ವಿರೋಧ –ಈ ಎರಡೇ ನೆಲೆಗಳಲ್ಲಿ ಇದೆ ಎಂಬ ಸಾಮಾನ್ಯ ನಂಬಿಕೆ ಉಂಟಾಗಿದೆ. ಹಾಗಾಗಿ ಮೊದಲು ನಾವು ಆಧುನಿಕತೆಯನ್ನು ಅದಕ್ಕೆ ರಚನಾತ್ಮಕ ಅರ್ಥ(ಅಥವಾ ಮುಖ) ಮಾತ್ರವಿದೆ ಅಥವಾ ಅದು ಮಾನವ ನಾಗರೀಕತೆಯ ಮೈಲಿಗಲ್ಲು(ಅಂದರೆ ಎಲ್ಲವನ್ನೂ ಅದರ ಒರೆಗಲ್ಲಿನಲ್ಲೇ ನೋಡಬೇಕು) ಎಂಬ ಮಾನಸಿಕ ರಚನೆಯಿಂದ ಹೊರಬಂದು ಯೋಚಿಸಬೇಕಿದೆ. ಒಂದೇ ಮಾತಿನಲ್ಲಿ – ಅದು ಗಾಂಧಿ ಯಂತ್ರ ಸಂಸ್ಕೃತಿಗೆ ಸಂಬಂಧಿಸಿದಂತೆ ಆಡಿದ ಮಾತು–ಹೇಳುವುದಾದರೆ, ಪದವೊಂದರಿಂದ ಅಲ್ಲ, ಅದರ ಭ್ರಾಂತಿಯಿಂದ ಹೊರಬಂದರೆ ಮಾತ್ರ ಮುಂದಿನ ಹೆಜ್ಜೆ ಸ್ಪಷ್ಟವಾಗುತ್ತದೆ. ಅದು ಬಿಟ್ಟು ಭ್ರಾಂತಿಗೆ ಒಳಗಾಗಿ ದಾಪುಗಾಲು ಹಾಕಿದಾಗ, ನೀವು ಪ್ರಾಮಾಣಿಕವಾಗಿದ್ದರೆ ಗೊಂದಲ ಆರಂಭವಾಗುವುದು ನಿಶ್ಚಿತ.

ಇನ್ನೊಂದು ಮಾತು: ಜೈವಿಕ ಮನುಷ್ಯ, ಸಾಮಾಜಿಕ ಮನುಷ್ಯ ಬೇರೆ ಬೇರೆಯಾಗಿರಲಾರರು. ಆ ಬೇರ್ಪಡಿಕೆ ಕಾಣತೊಡಗುವುದು (ವಸಾಹತುಶಾಹಿ ಅಥವಾ ಜಾಗತೀಕರಣ ಉಂಟು ಮಾಡುವಂತಹ)ಸಾಂಸ್ಕೃತಿಕ ಪಲ್ಲಟಗಳ ಸಂದರ್ಭಗಳಲ್ಲಿ. ಇದಕ್ಕೆ ಸಂಬಂಧಿಸಿದಂತೆ ಹೆಚ್ಚು ಅಧ್ಯಯನಗಳು ನಡೆದಂತಿಲ್ಲ.

ಇದೆಲ್ಲ ದೀರ್ಘ ನಿರೂಪಣೆ, ಚರ್ಚೆಗಳನ್ನು ಬೇಡುವಂತಹುದು. ಇದೇ ಅಕ್ಟೋಬರ್ ೨೦ ಹಾಗೂ ೨೧ರಂದು ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಕುಪ್ಪಳ್ಳಿಯಲ್ಲಿ ಆಯೋಜಿಸುತ್ತಿರುವ 'ಗಾಂಧಿ ಮತ್ತು ಸಮಾಜವಾದ' ಕುರಿತ ಅಧ್ಯಯನ ಶಿಬಿರಕ್ಕೆ ಬನ್ನಿ, ಮಾತನಾಡೋಣ.

–ಡಿಎಸ್ಸೆನ್

**ಎಚ್ಚೆಸ್ಸಾರ್ ಶಿಬಿರಕ್ಕೆ ಬರಲಿಲ್ಲ. ಆದರೆ ನವ ಮಾನವದ ಅಕ್ಟೋಬರ್ ಸಂಚಿಕೆಗಾಗಿ 'ಹಿಂಸೆ: ಕೆಲವು ಬಿಡಿ ಆಲೋಚನೆಗಳು' ಎಂಬ ಲೇಖನ ಬರೆದರು. ಅದೊಂದು ನೆಪವಾಗಿ, ಈ ಚರ್ಚೆ ಮುಂದುವರೆಯಿತು :**

ಪ್ರಿಯ ಎಚ್ಚೆಸ್ಸಾರ್,

ನವ ಮಾನವಕ್ಕಾಗಿ ನೀವು ಬರೆದ ಹಿಂಸೆ ಕುರಿತ ಲೇಖನದ ಬಗ್ಗೆ ತಕ್ಷಣ ನಾನು ಪ್ರತಿಕ್ರಿಯಿಸಲಾಗಲಿಲ್ಲ. ಪತ್ರಿಕೆಯನ್ನು ಸಿದ್ಧಪಡಿಸಿ ನಿರ್ದಿಷ್ಟ ದಿನದಂದು ಅದನ್ನು ಮುದ್ರಣಕ್ಕೆ ಕೊಡುವ ಒತ್ತಡ ಇದಕ್ಕೆ ಕಾರಣ. ಈಗ ಬರೆಯಬೇಕಿನ್ನಿಸಿದೆ ಬರೆಯುತ್ತಿರುವೆ. ತಡ ಮಾಡಿದ್ದು ಒಳ್ಳೆಯದೇ ಆಯಿತೇನೋ! ಏಕೆಂದರೆ ನಿಮ್ಮ ಈ ಲೇಖನ ಒಂದು ನೆಲೆಯಲ್ಲಿ, ಗಾಂದಿ ದರ್ಶನ ಕುರಿತ ನನ್ನ ಲೇಖನದ ಬಗ್ಗೆ ನೀವು



ಎತ್ತಿದ ಕೆಲವು ಪ್ರಶ್ನೆಗಳ ಬಗ್ಗೆ ನಾನು ನೀಡಿದ ವಿವರಣೆಗೆ ನೀವೀಗ ಪ್ರತಿಕ್ರಿಯಿಸಿರುವ ರೂಪದಲ್ಲೂ ಕಾಣಿಸುತ್ತಿದೆ. ಆದುದದರಿಂದ ಈ ಬಗ್ಗೆ ಕೂಡ ನನಗೆ ಅನ್ನಿಸಿದ್ದನ್ನು ವಿವರವಾಗಿ ಹೇಳಲು ಇದು ಅವಕಾಶ ಕಲ್ಪಿಸಿದೆ.

ಹಿಂಸೆ ಕುರಿತ ನಿಮ್ಮ ಲೇಖನ ವಾಸ್ತವಿಕತೆಯಿಂದ ಕೂಡಿದೆ. ಸ್ವಲ್ಪ ruthless ಎಂದರೂ ನಡೆದೀತು. ಇಂದಿನ ವಾಸ್ತವವೂ ಹಾಗೇ ಇದೆಯಲ್ಲ? ಈ ದೃಷ್ಟಿಯಿಂದ ನಿಮ್ಮ ವಿಶ್ಲೇಷಣೆ ಗಟ್ಟಿ ನೆಲದ ಮೇಲೇ ನಿಂತಿದೆ. ಹಾಗೇ ಹಿಂಸೆ–ಅಹಿಂಸೆಗಳನ್ನು ದ್ವಿದಳವಾಗಿ ಗ್ರಹಿಸಿ ಬಹು ಎಚ್ಚರಿಕೆಯಿಂದ ನಿಮ್ಮ ವಾದವನ್ನು ಎರಡೂ ಕಡೆ ಸರಿದೂಗಿಸಲ ನೀವು ಇತಿಹಾಸದ ಗ್ಯಾರೇಜಿನಿಂದ ಎತ್ತಿಕೊಂಡು ಬಳಸಿರುವ ತೂಕದ ಬಟ್ಟುಗಳನ್ನು ನೋಡಿದಾಗ ನನಗೆ ಆಶ್ಚರ್ಯವೂ ಆಗುತ್ತದೆ, ಸಾಹಿತ್ಯದ ವಿದ್ಯಾರ್ಥಿಯಾದ ನೀವೂ ಇತಿಹಾಸಕ್ಕೆ ಅಧಿಕೃತವಾಗಿ ಇಷ್ಟು ಬದ್ಧವಾದಂತೆ ಕಾಣುತ್ತಾರಲ್ಲಾ ಎಂದು. ಅಷ್ಟೇ ಅಲ್ಲ, ಈ ಇತಿಹಾಸವನ್ನು ಮುಂದುವರೆಸುವ ಬಯಕೆಯಲ್ಲದಿದ್ದರೂ, ಅನವಾರ್ಯತೆಯನ್ನು ಒಪ್ಪಿಕೊಂಡ ಮನಸ್ಸು ಈ ಲೇಖನದ ಹಿಂದೆ ಕ್ರಿಯಾಶೀಲವಾದಂತೆಯೂ ಕಾಣುತ್ತದೆ. ಬಹುಶಃ ಇಲ್ಲೇ ನಿಮ್ಮ ಲೇಖನ ಅಥವಾ ಆಲೋಚನಾ ಕ್ರಮದ ಬಗ್ಗೆ ನನ್ನ ಮೂಲ ತಕರಾರು ಇರುವುದು. ಮನುಷ್ಯನನ್ನು ಇತಿಹಾಸ ಭಾಗವಾಗಿ ನೋಡುವ ಕ್ರಮವಿದು. ಇದನ್ನು ವಿವರಿಸುವುದಾರೆ–

ಇತಿಹಾಸದ ಕಲ್ಪನೆಯನ್ನು ನಾವು ನಿರ್ವಚಿಸಿಕೊಂಡಿರುವ ರೀತಿ ಅದನ್ನು ಅದರ ಸಾರಾಂಶ ರೂಪದಲ್ಲಷ್ಟೇ ನೋಡುವ ಒತ್ತಾಯವನ್ನು ನಮ್ಮ ಮೇಲೆ ಹೇರುತ್ತದೆ ಎಂದು ನನಗನ್ನಸಿದೆ. ಅದು ಸದಾ ಮನುಷ್ಯನನ್ನು 'ವರ್ತಮಾನ'ದ ಸೇವೆಗೆ ಕಟ್ಟಿಹಾಕಿ ಅವನ ನೋಟ ವಿಸ್ತಾರವನ್ನು ಮಿತಗೊಳಿಸಿ ಉಸಿರುಗಟ್ಟಿಸುತ್ತದೆ ಎಂದೇ ನಾನು ಭಾವಿಸಿದ್ದೇನೆ. ಆಧುನಿಕತೆಯ ಮೂಲ ದುಷ್ಟತನ ಇದೇ. ಕಾಲವನ್ನು ಅಳತೆಗೊಳಪಡಿಸಿ, ನಮ್ಮ ಮನಸ್ಸನ್ನು ಒಡೆದಿಟ್ಟಿರುವುದು. ಅಳತೆ, ಅಳತೆಯ ಮೂರ್ತೀಕರಣ ಮತ್ತು ಅಳತೆಯ ನಿರಪಕ್ಷೀಕರಣ( ಐನ್‌ಸ್ಟೀನನ ಸಾಪೇಕ್ಷ ಸಿದ್ಧಾಂತದ ನಂತರವೂ–ಅದನ್ನು Special theory of relativity ಎಂದು ಕರೆದು–ನೋಟದ ಇಡಿತನದಿಂದ ಅದನ್ನು ಬೇರ್ಪಡಿಸಿದ್ದು) ಆಧುನಿಕತೆಯ ಕೊಡುಗೆ. ಚಿಕ್ಕದು, ದೊಡ್ಡದು, ಕಡಿಮೆ, ಹೆಚ್ಚು ಇವುಗಳನ್ನು (ಭಾವಿಸುವ ಅಲ್ಲ–)ಹೊರಗಿಂದ ಹೊರ ಉಪಕರಣಗಳ ಮೂಲಕ ಅಳೆಯುವ (Quantum mechanics ನೆನಪಿಗೆ ಬರುತ್ತದೆಯೇ?) ಮತ್ತು ಆ ಮೂಲಕ ಅವನನ್ನು ಸದಾ ಆಕ್ರಾಂತನನ್ನಾಗಿ ಮಾಡಿರುವ ಆಧುನಿಕತೆ( 'I think, so I am!) ತಾನಿಡುತ್ತಾ ಬಂದ ಒಂದೊಂದೇ ಹೆಜ್ಜೆಯಲ್ಲಿ ಮನುಷ್ಯನನ್ನು ಮೂಲತಃ ತಾನೇನು(ಅಳತೆಗೆ ಸಿಗುವವನೇ?) ಎಂಬ ಅರಿವಿನಿಂದಲೇ ದೂರ ಮಾಡುತ್ತಾ ಬಂದಿದೆ. ಆಧುನಿಕತೆಯನ್ನು ಲಿಂಗನಮಕ್ಕಿ ರೂಪದಲ್ಲಿ ನೋಡಿ ತೀರ್ಮಾನ ಕೈಗೊಳ್ಳಬೇಕಾದಂತಹ ಒತ್ತಾಯಗಳನ್ನು ನಮ್ಮ ಮೇಲೆ ಹೇರಿದೆ.

ಹಿಂಸೆ ಆಧುನಿಕತೆಯ–ಅಸ್ತಿತ್ವವನ್ನು ಒಡೆದು ನೋಡುವುದನ್ನು ಮನಸ್ಸಿನ ಸೀಮಿತ ಉದ್ದೇಶದ ಒಂದು 'ಆಟ' ಮಾತ್ರ ಎಂಬ ಸ್ವಪ್ರಜ್ಞೆಯನ್ನು ಕಳೆದುಕೊಂಡು, ಅದೇ ಅದನ್ನು ಅರ್ಥ ಮಾಡಿಕೊಳ್ಳುವ ನಿಜ ಕ್ರಮ ಎಂಬ ನಂಬಿಕೆಯ ರೂಪದಲ್ಲಿ–ಗಾಳಿಯಲ್ಲೇ ಇದೆ. ಹಾಗಾಗಿಯೇ ಭವಿಷ್ಯವನ್ನೂ, ಅಷ್ಟೇಕೆ ಅನಂತವನ್ನೂ ವರ್ತಮಾನದ ಸೇವೆಗಾಗಿ ಬಳಲಿಚ್ಚಿಸುವ(ಆಧುನಕ ಗುರುಗಳು!) ಇಂದಿನ ಮನಸ್ಸು, ಹಿಂಸೆ ಸಹಜ ಅಥವಾ ಹೆಚ್ಚೆಂದರೆ ಅನಿವಾರ್ಯ ಎಂದು ತರ್ಕಿಸುತ್ತದೆ. ಅಹಿಂಸೆಯನ್ನು ಹಿಂಸೆಯ ಪ್ರತಿಕಲ್ಪನೆಯಾಗಿ ರಚಿಸಿಕೊಂಡು ಅದು ವರ್ತಮಾನದ ಬಿಕ್ಕಟ್ಟುಗಳಿಗೆ ವ್ಯಾವಹಾರಿಕ ಪರಿಹಾರವಾಗಲಾರದು ಎಂದು ವಾದಿಸುತ್ತದೆ. ಇದು ಇತಿಹಾಸ ಕಲ್ಪನೆಯಿಂದ ಬಂಧಿತವಾದ ಮನಸ್ಸಿನ (ಯಶಸ್ವೀ)ತರ್ಕ.

ಈ ತರ್ಕ ಸರಿಯೇ ಆಗಿದ್ದರೆ, ಅಥವಾ ಗಾಂಧಿಯ ಮಾತುಗಳಲ್ಲೇ ಹೇಳುವುದಾರೆ, ಕಣ್ಣಿಗೆ ಕಣ್ಣು ಎಂಬುದೇ ಮನುಷ್ಯ ಜೀವನದ ಅಳಿವು–ಅಳಿವನ್ನು ನಿರ್ಧರಿಸುವ ತರ್ಕವಾಗಿದ್ದರೆ ಈ ಜತ್ತಿನ ತುಂಬಾ ಕುರುಡರೇ ಇರಬೇಕಾಗಿತ್ತು! ಆದರೆ ಮನುಷ್ಯ ಕೇವಲ ವ್ಯಾವಹಾರಿಕನಾಗಿ, ಅಳತೆಯ ಮಧ್ಯೆಯೇ ಇರಲೊಲ್ಲ. ಅಳತೆಗಳು ಹುಟ್ಟುವ




ಮುನ್ನವೇ ಅವನು ಹುಟ್ಟಿ ಸಾಕಷ್ಟು ಬೆಳೆದಿದ್ದ! ಅವನು ತನ್ನ ರಸ ಕ್ಷಣಗಳೆಂಬುವನ್ನು ಕಂಡುಕೊಂಡದ್ದೇ ಇತಿಹಾಸವನ್ನು ಧಿಕ್ಕರಿಸಿದಾಗ. ಬುದ್ಧ, ಏಸು, ಗಾಂಧಿ ಅಂತಹ ರಸ ಕ್ಷಣಗಳು. ಅವರು ಈಗಲೂ ನಮ್ಮ ಬದುಕಿನಲ್ಲಿ ಉಸಿರಾಡುತ್ತಿರುವುದೂ ಈ ಕಾರಣದಿಂದಾಗಿಯೇ. ಅವರನ್ನು ಇತಿಹಾಸದ ಅಳತೆಯಲ್ಲಿರಿಸಿ ಅವರು ಸೋತಿದ್ದಾರೆ ಎಂಬ ತೀರ್ಪು ನೀಡಿ ಅಥವಾ ಅವರ ಸೋಲೂ ಭವ್ಯವೇ ಎಂಬ ಜಾಣ ಮಾತು ಆಡಿ ಮುಂದೆ ಹೋಗುವುದು ಆತ್ಮ ವಂಚನೆ ಮಾತ್ರ ಎನಿಸಿಕೊಂಡೀತು. ಮನುಷ್ಯ ಏನಾಗಿದ್ದಾನೆ ಎಂಬುದು ಅರ್ಧ ಸತ್ಯ ಮಾತ್ರ. ಏನಾಗಬಯಸಿದ್ದಾನೆ ಎಂಬ ಇನ್ನರ್ಧ ಸೇರಿದಾಗ ಅವನು ಪೂರ್ಣವಾಗುವುದು. ಬುದ್ಧ, ಏಸು, ಗಾಂಧಿ ಇಂತಹ ಪೂರ್ಣತೆಯ ಹಂಬಲದ ಸಂಕೇತಗಳು. ಅವು ಇನ್ನೂ ಜಗತ್ತಿನಲ್ಲಿ ಕ್ರಿಯಾಶೀಲವಾಗಿವೆ ಎಂಬುದು ಏನನ್ನು ಸೂಚಿಸುತ್ತದೆ?

ಇನ್ನು ನೀವು ಪ್ರಸ್ತಾಪಿಸಿರುವ ಜೈವಿಕ ಮತ್ತು ಸಾಮಾಜಿಕ ಮನುಷ್ಯನ ನಡುವಿನ ಒಡಕಿನ ಬಗ್ಗೆ. ಮನುಷ್ಯನ ಅಸ್ತಿತ್ವಕ್ಕೆ ಇರುವುದು ಇವೆರಡೇ ಸ್ತರಗಳಲ್ಲ ಎಂಬುದನ್ನು ಅರಿತರೆ, ಈ ಒಡಕಿನ ಪ್ರಶ್ನೆ ಬೇರೆ ರೂಪ ಪಡೆದೀತು. ಇವರೆಡೂ ಹುಟ್ಟಿ ಪರಸ್ಪರ ಎದುರಾಗಿರುವುದೇ ನಾವು ಕಟ್ಟಿಕೊಂಡಿರುವ 'ಪ್ರಭುತ್ವ'ದ ರೀತಿ–ನೀತಿಗಳಲ್ಲಿ. ನಾವು ಕೆಲವರು ಗಾಂಧಿ ನೆಹ್ರೂ ಚರ್ಚೆಗೆ ಅಷ್ಟು ಒತ್ತು ಕೊಡುವುದು ಈ ಹಿನ್ನೆಲೆಯಲ್ಲೇ. ಗಾಂಧಿ ತಮ್ಮ ಸ್ವರಾಜ್ಯ ಕಲ್ಪನೆಯಲ್ಲಿ ಆಧುನಿಕತೆ ಸೃಷ್ಟಿಸಿರುವ ಈ ಜೈವಿಕ ಮತ್ತು ಸಾಮಾಜಿಕಗಳ ನಡುವಣ ಬಿಗುವನ್ನು ಕ್ರಮೇಣ ಇಲ್ಲವಾಗಿಸುವ ಹೊಸ ರಾಜಕಾರಣದ ಹೊಳಹು ನೀಡಿದ್ದರು. ಆದರೆ ನೆಹ್ರೂ ಕಣ್ಣಿಗೆ ಅದು 'ಹಾಸ್ಯಾಸ್ಪದ' ಮತ್ತು 'ಅವ್ಯವಾಹರಿಕ'ವಾಗಿ ಕಂಡಿತ್ತು. ಏಕೆಂದರೆ ಅವರಿಗೆ ಆಧುನಿಕತೆ ಎಂಬುದು ಉಸಿರಾಡುವ ಗಾಳಿಯೇ ಆಗಿಬಿಟ್ಟಿತ್ತು. ಅವರು ಇತಿಹಾಸದ ಶಿಶುವಾಗಿದ್ದರು. ಅವರಿಗೆ ಬೇರೆ ಸಾಧ್ಯತೆಗಳೇ ಕಾಣದೇ ಹೋಗಿದ್ದವು. ಅದರ ಫಲವನ್ನು ನಾವಿಂದು ಅನುಭವಿಸುತ್ತಿದ್ದೇವೆ.

ಹಾಗಾಗಿ, ಈ ಅನುಭವ ಕೆಟ್ಟದಾಗಿದೆ, ನಮ್ಮನ್ನು ಆಳವಾಗಿ ಕಾಡುವಂತಿದೆ ಎಂದು ಭಾವಿಸುವವರು ಗಾಂಧಿ ರಾಜಕಾರಣವನ್ನು, (ನಾನು ಮೇಲೆ ವಿವರಿಸಿದ ಅರ್ಥದಲ್ಲಿನ) ಆಧುನಿಕತೆಯಿಂದ ಒಂದರೆ ಕ್ಷಣವಾದರೂ ಹೊರಬಂದು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕಿದೆ. ಮನುಷ್ಯ ಆಧುನಿಕತೆಯ ವಿಸ್ಮೃತಿಯಿಂದ ಹೊರಬಂದು ತನ್ನ ಜೈವಿಕತೆ ಮತ್ತು ಸಾಮಾಜಿಕತೆಗಳಾಚಚೆಯೂ ಇರುವ ತನ್ನ ಅಸ್ತಿತ್ವದ ಸ್ತರಗಳನ್ನು feel ಮಾಡುವ ಸಾಧ್ಯತೆಗಳನ್ನು ಪರಿಶೀಲಿಸಬೇಕಾಗುತ್ತದೆ. ಮನುಷ್ಯ ತಾನು ಉಪಕರಣ ಮಾತ್ರವಲ್ಲ, ಗುರಿಯೂ ಹೌದು ಎಂಬುದನ್ನು ಕಂಡುಕೊಳ್ಳುವ ಹೊಸ ರಾಜಕಾರಣದ ಅವಶ್ಯಕತೆಯನ್ನು ಮನಗಾಣಬೇಕಾಗುತ್ತದೆ.

ಬಹುಶಃ ಆಗ ಲಿಂಗನಮಕ್ಕೆ ಇಲ್ಲದ ದಿನಗಳ ಕಲ್ಪನೆಯೇ ಅಸಂಬದ್ಧ ಎಂಬುದು ಗೊತ್ತಾಗಬಹುದು. ಈ ಅಸಂಬದ್ಧತೆಯನ್ನು ಒಪ್ಪಿಕೊಂಡೂ ಕಲ್ಪನೆ ಮಾಡಿಕೊಂಡು ಹೇಳುವುದಾರೆ, ಆ ದಿನಗಳು ಈ ದಿನಗಳಿಗಿಂತ ಹೆಚ್ಚು ಹಿಂಸಾತ್ಮಕವಾಗಿ(ಹಿಂಸೆಯ ನಿಮ್ಮ ಅರ್ಥಗಳಲ್ಲೇ) ಇದ್ದಿರಲಾರದು(ಈ ವಾಕ್ಯದ ಕ್ರಿಯಾ ರೂಪಕ್ಕಾಗಿ ಯಾವ ಕಾಲವನ್ನು ಬಳಸಬೇಕೆಂದು ಗೊತ್ತಾಗದಿರುವುದೇ ಇಂತಹ ಊಹೆಯ ಅಸಂಬದ್ಧತೆಯನ್ನು ಸಾಬೀತುಪಡಿಸೀತು!) ಎಂದೇ ನನಗನ್ನಿಸುತ್ತದೆ. ಆಧುನಿಕತೆಯನ್ನು ಪ್ರತಿನಿಧಿಸುವ ವಿದ್ಯುಚ್ಛಕ್ತಿಯ ಪರಿಣಾಮಗಳಾದ ಬೆಳಕು ಮತ್ತು ಶಕ್ತಿ ಎಂಬುವು ಬೆಳಕು ಮತ್ತು ಶಕ್ತಿ ಎಂಬ ಪರಿಕಲ್ಪನೆಗಳ ಒಂದು ನಿರ್ದಿಷ್ಟ ರೂಪಗಳಷ್ಟೇ. ಆದರೆ ಆಧುನಿಕತೆಯ ರಾಜಕಾರಣ

ಇವೇ ಅವುಗಳ ನಿರಪೇಕ್ಷ(ಅಥವಾ ಏಕೈಕ) ರೂಪಗಳೆಂದು ನಮ್ಮ ತಲೆಗೆ ತುಂಬಿದೆ. ಹಾಗಾಗಿ ಇಂತಹ ಊಹೆಯ ಅಸಂಬದ್ಧ ಸವಾಲು!

ಆಧುನಿಕತೆಯನ್ನು ವಿರೋಧಿಸುವುದೆಂದರೆ, ಮನುಷ್ಯನ ಕ್ರಿಯಾಶೀಲತೆಯನ್ನು, ನಾಗರೀಕತೆಯ ನಡಿಗೆಯನ್ನು ವಿರೋಧಿಸುವುದೆಂದಲ್ಲ. ಆದರೆ ಅದೊಂದೇ ಬದುಕಿನ ಸಾರ್ಥಕ್ಯವನ್ನು ಕಂಡುಕೊಳ್ಳುವ 'ಮಾರ್ಗವಲ್ಲ ಎಂಬುದನ್ನು ಅರಿಯುವ ವಿವೇಕ, ಹೊಳಹು, ಒಳಧ್ವನಿ. ಆಧುನಿಕತೆ ಮನುಷ್ಯನ ಕೇಂದ್ರವನ್ನೇ ಕಳೆದಿದೆ. ಒಳಧ್ವನಿ ಎಂಬುದೇ ಬತ್ತಿ ಹೋಗಿದೆ. ಎಲ್ಲ ಅಪರಿಹಾರ್ಯ ಹಿಂಸೆಯ ಮೂಲ ಇರುವುದು (ಹಾಗೇ, ಹಿಂಸೆ–ಅಹಿಂಸೆಯ ದ್ವಿದಳತೆಯ ಮತ್ತು ಆ ಕುರಿತ ಚರ್ಚಾಸ್ಪರ್ಧೆಯ ಮೂಲ ಇರುವುದೂ) ಇಲ್ಲೇ. ಗಾಂಧಿ ಈ ಬಗ್ಗೆ ಎಚ್ಚರಿಸಿದರಷ್ಟೇ. ಆ ಎಚ್ಚರಿಕೆಯ ಧ್ವನಿಯಾಗಿ ಅಹಿಂಸೆಯ ಪರಿಕಲ್ಪನೆಯನ್ನು ಪುನರನ್ವೇಷಿಸಿ ನೀಡಿದರು. ಅದು ಹಿಂಸೆಯ ವಿರುದ್ಧದ ಹತಾರ ಅಲ್ಲ. ಆಧುನಕತೆ ಎಂಬ ಹುಚ್ಚಿಗೆ/ಭ್ರಾಂತಿಗೆ ಸೂಚಿಸಿದ ಹಿತ್ತಲ ಮದ್ದು ಅದು.

ವಂದನೆಗಳೊಂದಿಗೆ,

೨೯.೯.೨೦೧೨ **ಡಿ.ಎಸ್. ನಾಗಭೂಷಣ**

ಪ್ರಿಯರಾದ ನಾಗಭೂಷಣ ಅವರಿಗೆ,

ನಿಮ್ಮ ಅನಿಸಿಕೆಗಳು ಬಹಳ ಸಂಕೀರ್ಣವೂ ಸತ್ಯಸಮೀಪವೂ ಆಗಿವೆ. ಅವುಗಳೊಡನೆ ತೀವ್ರವಾದ ವಾದದಲ್ಲಿ ತೊಡಗುವ ಅಗತ್ಯ ನನಗೆ ತೋರುತ್ತಿಲ್ಲ. ನಿಮ್ಮ ಮಾತುಗಳ ಸಾರಾಂಶ ಇರುವುದು 'ಚಾರಿತ್ರಿಕ ಮನುಷ್ಯ', 'ಸಾಮಾಜಿಕ ಮನುಷ್ಯ' ಮತ್ತು 'ಜೈವಿಕ ಮನುಷ್ಯ' ಎಂಬ ಕೆಟಗರಿಗಳಿಂದ ಭಿನ್ನವಾದ ಬೇರೊಬ್ಬ ಮನುಷ್ಯನನ್ನು ಕಾಣುವ ಮತ್ತು ಕಂಡರಿಸುವ ಪ್ರಯತ್ನದ ಕಡೆಗೆ. ಈ ಮನುಷ್ಯ ಮತ್ತು ಇಂಥವರ ಪರಸ್ಪರ ಸಂಬಂಧಗಳಿಂದ ಹುಟ್ಟಿಕೊಳ್ಳುವ ಸಮುದಾಯವು ಶಾಂತಿಪ್ರಿಯವೂ, ಪರಸ್ಪರ ಸಹಕಾರಿಯೂ ಆಗಿ ಉಳಿಯುತ್ತದೆ ಎನ್ನುವದು ನಿಮ್ಮ ನಿಲುವು. ಆಧುನಕತೆಯ ಆಗಮನಕ್ಕಿಂತ ಮುನ್ನ ಒಟ್ಟು ಸನ್ನಿವೇಶವೂ ಕಡಿಮೆ ಹಿಂಸಾತ್ಮಕವಾಗಿತ್ತು ಎಂದು ನಿಮಗೆ ತೋರಿದೆ.

ಇದೆಲ್ಲವೂ ಸರಿಯೇ. ನಮ್ಮ ಸಮುದಾಯಗಳು ತಮ್ಮ ದಿನದಿನದ ಬದುಕಿನಲ್ಲಿ ಹೀಗೆಯೇ ಇರುತ್ತಿದ್ದರು ಮತ್ತು ಈಗಲೂ ಇರುತ್ತಾರೆ ಎನ್ನುವುದು ನಿಜ. ಇಂಥ ಕಡೆ ಸ್ವಾರ್ಥ ಮತ್ತು ಸಹಕಾರಗಳು ಒಡನಾಟದಲ್ಲಿ ಇರುತ್ತವೆ. ಆದರೆ, ಈ 'ಅಬ್ಸಲ್ಯೂಟ್' ಮನುಷ್ಯನು, 'ಸಾಮಾಜಿಕ' ಮತ್ತು 'ಚಾರಿತ್ರಿಕ' ಆಯಾಮಗಳನ್ನು ಹೊಂದಿರುವ ಅನಿವಾರ್ಯತೆಯನ್ನು ಮೊದಲಿನಿಂದಲೂ ಹೊಂದಿದ್ದಾನೆ. ಅವು ಅವನನ್ನು ಕಲುಷಿತಗೊಳಿಸಬಹುದು, ಆದರೆ ಉಪಾಯವಿಲ್ಲ. ನಿಮಗೆ ಚೆನ್ನಾಗಿಯೇ ಗೊತ್ತಿರುವಂತೆ, ತಿಳಿದಿರುವಂತೆ ಮನುಷ್ಯರ ಮತ್ತು ಅವರ ವಶದಲ್ಲಿರುವ ಸಂಪನ್ಮೂಲಗಳ ಅಸಮಾನತೆಯಿಂದ ಹುಟ್ಟಿಕೊಂಡ ವರ್ಣ/ವರ್ಗಗಳು ಮತ್ತು ಲಿಂಗಗಳು ಈ ಸನ್ನಿವೇಶವನ್ನು ಎಲ್ಲ ಕಾಲದಲ್ಲಿಯೂ ಹದಗೆಡಿಸಿವೆ. ಇದು ಆಧುನಕ ಆವಿಷ್ಕಾರಗಳಿಗಿಂತ ಮುಂಚೆಯೂ ಇದ್ದ ನಿಜ.

ಸಾಹಿತ್ಯವು 'ನಿರ್ದಿಷ್ಟತೆ'ಗೆ (Particularity) ಕೊಡುವ ಮಹತ್ವವನ್ನು ಒಪ್ಪಿಕೊಂಡಾಗಲೂ ಅದು ಕೂಡ ದೇಶ–ಕಾಲ–ಸಂದರ್ಭಗಳನ್ನು ಮೀರಿಲ್ಲವೆಂದೇ ಹೇಳುವವನು ನಾನು. ಇಷ್ಟಕ್ಕೂ ಎಷ್ಟೋ ನೂರು ವರ್ಷಗಳ ಹಿಂದೆ ಇದ್ದಿರಬಹುದಾದ ಮನುಷ್ಯನನ್ನು ಮರುಸೃಷ್ಟಿಸಲು ಸಾಧ್ಯವೆಂದು ನೀವಾದರೂ ನಂಬುವಿರಾ? ಹಾಗೆ ನಂಬಿದ ಹಿರಿಯರು, ಇಂದಿನ ಅರ್ಥದಲ್ಲಿ 'ಲಿಂಗನಮಕ್ಕಿ'ಯ ಕನಸೂ ಇಲ್ಲದಿದ್ದ ಬುದ್ಧನ ಕಾಲದಿಂದಲೂ ನಿರಾಶೆಯನ್ನೇ ಅನುಭವಿಸಿದ್ದಾರೆ. ನನ್ನ ನೆನಪು ಸರಿಯಿರುವುದಾದರೆ, ಬುದ್ಧನ ಕಾಲದಲ್ಲಿಯೂ ನದಿಗಳ ನೀರಿಗಾಗಿ ಜಗಳಗಳು ನಡೆಯುತ್ತಿದ್ದವು. ಇತಿಹಾಸದಿಂದ ಬಿಡಿಸಿಕೊಂಡ ಅಥವಾ ಅದರ ಕರಾಳತೆಯಿಂದ ಪ್ರಭಾವಿತನಾದ ಮನುಷ್ಯನ 'ಅಸ್ತಿತ್ವ'ವು ನೀವು ಹೇಳುವಂತೆ ಕೆಲವರ ಕನಸು ಮತ್ತು ಹಲವರ 'ಭ್ರಮನಿರಸನ'.

ಮನುಷ್ಯನ ಅಸ್ತಿತ್ವದಲ್ಲಿಯೇ ಇರುವ 'ಜೈವಿಕ ಮನುಷ್ಯ' ಮತ್ತು 'ಸಾಮಾಜಿಕ ಮನುಷ್ಯ'ನ ಆಚೆಗೆ ಇರುವ ಇತರ ಆಯಾಮಗಳ ಬಗ್ಗೆ ನಾನಿನ್ನೂ ತಿಳಿಯಬೇಕು. ನನ್ನ ಪ್ರಕಾರ ಭಾವನೆಗಳ ಲೋಕವೂ ಜೈವಿಕ ಮನುಷ್ಯನ ಭಾಗವೇ ಆಗಿದೆ. 'ಹಿಂಸೆ–ಪ್ರೀತಿ' ಮತ್ತು 'ಕ್ರೌರ್ಯ–ಕರುಣೆ'ಗಳನ್ನು ಹುಟ್ಟಿಸುವ ಭಾವನೆಗಳೂ ಸೇರಿದಂತೆ.

ಅಂದಹಾಗೆ, ಗಾಂಧಿ ಮತ್ತು ನೆಹರೂ ಅವರ ನಡುವೆ ತುಲನೆ ಮಾಡುವ ನೀವು ಇವರ ನಡುವೆ ಲೋಹಿಯಾ(ಅಂಬೇಡ್ಕರ್) ಅವರನ್ನು ಎಲ್ಲಿ ಇಡುತ್ತೀರಿ ಎನ್ನುವುದೂ ಮುಖ್ಯವೇ. ಅವರು, ಇತಿಹಾಸ, ಸಮಾಜ ಮತ್ತು ಮನುಷ್ಯರನ್ನು ಗಮನದಲ್ಲಿಟ್ಟು ಕೊಂಡರೆಂದೇ ನಾನು ತಿಳಿದಿದ್ದೇನೆ. ಈ ಬಗ್ಗೆ ನೀವು ಬೇರೆ ಎಲ್ಲಿಯೋ ಹೇಳಿರುವಿರಿ ಎನ್ನುವುದೂ ನನಗೆ ಗೊತ್ತು. ನನಗೆ ಹಲವು ಬಗೆಯ ಹೊಸ ತಿಳಿವಳಿಕೆಗಳನ್ನು ಕೊಟ್ಟ, ಆಲೋಚಿಸಲು ತೊಡಗಿಸಿದ ನಿಮಗೆ ವಂದನೆಗಳು. ಆದಷ್ಟು ಮಟ್ಟಿಗೆ ಮುಕ್ತವಾಗಿರೋಣ. 'ಕನ್ವಿಕ್ಷನ್' ಮತ್ತು 'ಓಪನ್‌ನೆಸ್' ಎರಡೂ ಒಂದೇ ನಾಣ್ಯದ ಎರಡು ಮುಖಗಳೆಂದು ನಾನು ತಿಳಿದಿದ್ದೇನೆ.

ಪ್ರೀತಿಯೊಂದಿಗೆ

ನಿಮ್ಮ

**ಎಚ್.ಎಸ್.ಆರ್**

# ಇದು ಭಾರತ! ಇದು ಭಾರತ!

### ಡಿಸೆಂಬರ್ ೬, ೨೦೧೨ರ ಎರಡು ಪತ್ರಿಕಾ ವರದಿಗಳು:

**ಜೋಧಪುರ**: ಇಲ್ಲಿನ ಕೆಳ ನ್ಯಾಯಾಲಯವೊಂದು ೧೯೯೮ರಲ್ಲಿ ಹಿಂದಿ ನಟ ಸಲ್ಮಾನ್ ಖಾನ, ಸೈಫ್ ಅಲಿ ಖಾನ್, ತಬು, ನೀಲಂ, ಸೊನಾಲಿ ಬೇಂದ್ರೆ ಸೇರಿದಂತೆ ಆರು ಜನರ ವಿರುದ್ಧ ಜೋಧಪುರ ಸುತ್ತಮುತ್ತಲ ಅರಣ್ಯದಲ್ಲಿ *ಚಿಂಕಾರ* ಎಂಬ ವಿಶೇಷ ತಳಿಯ ಜಿಂಕೆಗಳನ್ನು ಶಿಕಾರಿ ಮಾಡಿದ್ದಕ್ಕಾಗಿ ಹೂಡಿದ್ದ ಮೊಕದ್ದಮೆಯ ಬಗ್ಗೆ ಇಂದು ವಿಚಾರಣೆ ಮುಂದುವರೆಸಿ ಮತ್ತೆ **೨೦೧೩ರ ಫೆಬ್ರುವರಿ ೬ರಂದು** ತನ್ನ ಮುಂದೆ ಹಾಜರಾಗುವಂತೆ ಆದೇಶ ನೀಡಿತು

**ನವ ದೆಹಲಿ:** ೧೯೯೨ರಲ್ಲಿ ಅಯೋಧ್ಯೆಯ ಬಾಬ್ರಿ ಮಸೀದಿ ಉರುಳಿಸಿದ್ದಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕ ಎಲ್.ಕೆ. ಅದ್ವಾನಿ ಮತ್ತು ಇತರ ಅನೇಕರ ಮೇಲೆ ರಾಯ್ ಬರೇಲಿ ನ್ಯಾಯಾಲಯದಲ್ಲಿ ನಡೆಯುತ್ತಿರುವ ಮೊಕದ್ದಮೆಯನ್ನು **ತ್ವರಿತಗೊಳಿಸುವಂತೆ** ಕ್ರಮ ಕೈಗೊಳ್ಳಲು ಇಂದು ಸುಪ್ರೀಂ ಕೋರ್ಟು ಅಲಹಾಬಾದ್ ಹೈಕೋರ್ಟ್ ಪೀಠಕ್ಕೆ ಸೂಚನೆ ನೀಡಿ ಈ ಸಂಬಂಧ ಸಲ್ಲಿಸಲಾಗಿರುವ ಅರ್ಜಿಯ ಮುಂದಿನ ವಿಚಾರಣೆಯನ್ನು **ಎಂಟು ವಾರಗಳ ಕಾಲ** ಮುಂದೂಡಿತು

### 'ವಾಲ್‌ಮಾರ್ಟ್' ಸಂಸ್ಕೃತಿಯನ್ನು ನೀವೇಕೆ ಆಮದು ಮಾಡಿಕೊಳ್ಳುವಿರಿ?: ಜೋಸೆಫ್ ಸ್ಟಿಗ್ಲಿಟ್ಜ್ ಪ್ರಶ್ನೆ

ಅರ್ಥ ಶಾಸ್ತ್ರಕ್ಕಾಗಿ ನೊಬೆಲ್ ಪ್ರಶಸ್ತಿ ಪಡೆದವರೂ ಮತ್ತು ವಿಶ್ವಬ್ಯಾಂಕಿನ ಈ ಹಿಂದಿನ ಮುಖ್ಯ ಆರ್ಥಿಕ ಸಲಹಾಗಾರರೂ ಆದ ಜೋಸೆಫ್ ಸ್ಟಿಗ್ಲಿಟ್ಜ್ ಭಾರತಕ್ಕೆ 'ವಾಲ್‌ಮಾರ್ಟ್' ಬೇಕಿಲ್ಲ ಎಂದು ಅಭಿಪ್ರಾಯಪಟ್ಟರು. ಅವರು ಇತ್ತೀಚೆಗೆ ಭಾರತಕ್ಕೆ ನೀಡಿದ್ದ ಭೇಟಿಯ ಸಂದರ್ಭದಲ್ಲಿ *ಔಟ್‌ಲುಕ್* ಪತ್ರಿಕೆ ನೀಡಿದ ಸಂದರ್ಶನದಲ್ಲಿ ಭಾರತದಲ್ಲಿ ಸಣ್ಣ ಉದ್ಯಮಶೀಲರು ಮತ್ತು ಉಳಿತಾಯದ ಹಣ ಎರಡೂ ಸಾಕಷ್ಟು ಪ್ರಮಾಣದಲ್ಲಿದ್ದು, ಚಿಲ್ಲರೆ ಮಾರಾಟ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಕುರಿತು ಭಾರತ ಸರ್ಕಾರ ಕೈಗೊಂಡಿರುವ ನಿರ್ಧಾರಕ್ಕೆ ಯಾವುದೇ ಸಮರ್ಥನೆ ಇಲ್ಲ ಎಂದರು.

'ವಾಲ್‌ಮಾರ್ಟ್' ಬೆಲೆಗಳನ್ನು ಅಸ್ಥಿರಗೊಳಿಸಿ ಮಾರುಕಟ್ಟೆಯಿಂದ ಸ್ಥಳೀಯ ಪೂರೈಕೆದಾರರನ್ನು ಹೊರದೂಡುವುದಲ್ಲದೆ ತನ್ನ ಅಪಾರ ಬಂಡವಾಳದ ಪ್ರಭಾವ ಬಳಸಿ ಭ್ರಷ್ಟ ವ್ಯಾಪಾರ ಮಾರ್ಗಗಳನ್ನು ಪರಿಚಯ ಮಾಡುತ್ತಾ ಸರ್ಕಾರದ ನೀತಿಗಳ ಮೇಲೂ ನಿಯಂತ್ರಣ ಹೊಂದುವ ಸಂಭವವಿದೆ ಎಂದೂ ಅವರು ಹೇಳಿದರು. ಇದು ಮೆಕ್ಸಿಕೋದಲ್ಲಿ ಸಾಬೀತಾಗಿದ್ದು ಈಗ 'ವಾಲ್‌ಮಾರ್ಟ್'ನ ಆಡಳಿತ ಸಿಬ್ಬಂದಿಯ ವಿರುದ್ಧ ನಾಲ್ಕಾರು ಕಡೆ ತನಿಖೆಗಳು ನಡೆಯುತ್ತಿವೆ ಎಂದೂ ಅವರು ವಿವರಿಸಿದರು.

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ-೨

–ಇಂದಿರಾ ಬಿ. ಕೃಷ್ಣಪ್ಪ

## ಮದುವೆಯೆಂಬ ಆ ಭೂಕಂಪ, ಆ ತಲ್ಲಣ...

**ನಾ**ವು ಮದುವೆಯಾದ ಆ ಆತಂಕದ ದಿನಗಳನ್ನು ನಾವಿಬ್ಬರೂ ಆಗಾಗ್ಗೆ ಮೆಲುಕು ಹಾಕಿಕೊಳ್ಳುತ್ತಿದ್ದೆವು. ಒಂದು ದಿನ ಕೃಷ್ಣಪ್ಪ ನನ್ನನ್ನು ಕೇಳಿದರು: "ನೀನು ಆ ದಿನ ಮನೆ ಬಿಟ್ಟು ಹೇಗೆ ಬಂದೆ? ಮನಸ್ಸಿನಲ್ಲಿ ಏನೆಲ್ಲಾ ಯೋಚಿಸುತ್ತಿದ್ದೆ?"

ನಮ್ಮ ಮುಂದಿನ ಮಾತುಕತೆ ಹೀಗೆ ಮುಂದುವರೆದಿತ್ತು:

**ಇಂದಿರಾ:** ನಾನು ಮನೆಯಿಂದ ಹೊರಡುವಾಗ ನನ್ನ ತಂಗಿಯರಿಗೆ, ಗೆಳತಿ ಗಾಯಿತ್ರಿ ಮನೆಗೆ ಹೋಗಿ ಬರುವುದಾಗಿ ಹೇಳಿ ಹೊರಟೆ. ಕಡೆ ಬಾರಿಯೆಂದು ಮನೆಯಲ್ಲಾ ಓಡಾಡಿದೆ. ಹಾಕಿದ್ದ ಸರ, ಬಳೆ, ಓಲೆ ಎಲ್ಲ ಬಿಚ್ಚಿಟ್ಟು ಕೈಗೊಂದು ಸಾದಾ ಗಾಜಿನ ಬಳೆ, ಕಿವಿಗೊಂದು ರೋಲ್ಡ್‌ಗೋಲ್ಡ್ ರಿಂಗ್ ಹಾಕಿಕೊಂಡು ಸಾಧಾರಣದ ಕಾಟನ್ ಸೀರೆಯುಟ್ಟುಕೊಂಡು ಹೊಸಿಲ ದಾಟಿದೆ. ನೀವೇ ತಿಳಿಸಿದ್ದರಲ್ಲಾ, ನಿರ್ಮಲಾ ಆಸ್ಪತ್ರೆ ಮುಂಭಾಗಕ್ಕೆ ಬರಬೇಕೆಂದು. ನಾನು ರಸ್ತೆಗೆ ಬಂದಾಗ ಎಂ.ಎಸ್. ನಾಗರಾಜ ರಸ್ತೆಯಲ್ಲಿ ಕಾಯುತ್ತಿದ್ದುದನ್ನು ಕಂಡೆ. ಅವನು ನೇರ ರಸ್ತೆಗೆ ಹೋದರೂ ನಾನು ಅವನನ್ನು ಹಿಂಬಾಲಿಸಿದೆ. ನಿಮ್ಮ ಬಳಿ ಬರಲೂ ಏನೋ ಆತಂಕ ನನ್ನನ್ನು ವಿಲಿವಿಲಿ ಒದ್ದಾಡಿಸುತ್ತಿತ್ತು. ಭಯ ಮಿಶ್ರಿತ ಉದ್ವೇಗ, ಮನೆಬಿಟ್ಟ ನೋವು, ಭವಿಷ್ಯದ ಚಿಂತೆ ನನ್ನ ಮನದಲ್ಲಿ ಭೂಕಂಪನವೇ ನಡೆದಿತ್ತು.. ಕಣ್ಣೀರು ಮುಂದಾಗಿ, ಬಾಯಿ ಬತ್ತಿ ಹೋಗಿ, ಎದೆಬಡಿತ ಜೋರಾಗಿ, ನಿಗದಿತ ರಸ್ತೆಗೆ ಹೋಗದೆ, ಬೇರೆ ರಸ್ತೆಯಲ್ಲಿ ನಡೆದಿದ್ದೆ.

**ಕೃಷ್ಣಪ್ಪ:** ಅದೇ ನೋಡು, ನಿಮ್ಮ ಮನೆಯಿಂದ ನೀನು ಹೊರಟು ಬರಲು ಕಾಲು ಗಂಟೆ ಸಾಕು ಎಂದು ನಾವು ಲೆಕ್ಕಾಚಾರ ಹಾಕಿಕೊಂಡಿದ್ದೆವು. ನೀನು ಅರ್ಧಗಂಟೆಯಾದರೂ ಬಾರದ್ದನ್ನು ಕಂಡು, ಆತಂಕಗಳು ಶುರುವಾದವು ಏಕೆ ? ಏನಾಯಿತು ?

**ಇಂದಿರಾ:** ನನಗೆ ತುಂಬಾ ಭಯ. ಆ ತಳಮಳದಲ್ಲಿ ನಾನು, ನಾಗರಾಜನನ್ನು ಕಂಡರೂ, ಅವನು ಹೋದ ನೇರ ರಸ್ತೆಯನ್ನು ಬಿಟ್ಟು ನಮ್ಮ ಮನೆಯ ಎದುರು ರಸ್ತೆಯಲ್ಲಿನ ಪರಿಚಿತ ಲೇಡಿ ಡಾಕ್ಟರ್ ಮನೆಗೆ ಹೋದೆ. ಐದು ನಿಮಿಷ ಅವರಲ್ಲಿ ಮಾತನಾಡಿ ಹೊರಬಂದೆ. ನಂತರ ಇನ್ನೊಂದು ಬಳಸು ದಾರಿಯಿಂದ, ನನ್ನ ಗೆಳತಿ ಗಾಯಿತ್ರಿ ಮನೆಗೆ ಹೋಗಿ, ಅವರ ತಾಯಿಯವರನ್ನು ಮಾತನಾಡಿಸಿದೆ. ಆಗಲೂ ಮನಸ್ಸಿನ ದುಗುಡಗಳೇನು ಕಡಿಮೆಯಾಗಿರಲಿಲ್ಲ. ಅದಕ್ಕೇ ವಿಳಂಬವಾಗಿದ್ದು.

**ಕೃಷ್ಣಪ್ಪ:** ನೀನು ಬರುವುದನ್ನು, ಅಲ್ಲಲ್ಲೇ ನಿಂತಿದ್ದ ನಮ್ಮ ಸಮಾಜವಾದಿ ಯುವಜನಸಭಾ ಗೆಳೆಯರು ನನಗೆ ತಿಳಿಸುತ್ತಿದ್ದರು. ನಾನು ರಾಜಣ್ಣನ ಮನೆಯಲ್ಲಿ ಕುಳಿತು ನಿನ್ನ ಬರುವಿಗಾಗಿ ಕಾಯುತ್ತಿದ್ದೆ.

**ಇಂದಿರಾ:** ಮನೆ ಬಿಟ್ಟ ಗಳಿಗೆಯಲ್ಲಿ ಮನದಲ್ಲಿ ಮಡುಗಟ್ಟಿದ್ದ ದುಃಖ, ಗಾಯಿತ್ರಿ ಮನೆಯಿಂದಾಚೆ ಹೊರಬಂದಾಗ ಒತ್ತರಿಸಿ ಕಣ್ಣೀರಧಾರೆ ಹರಿಯುತ್ತಿತ್ತು. ಅಲ್ಲಿ ಪುನಃ ಎಂ.ಎಸ್. ನಾಗರಾಜ ನಿಂತು ಕಾಯುತ್ತಿದ್ದುದ್ದನ್ನು ಕಂಡು ಮುಂದೆ ನಡೆದೆ. ನಿಮ್ಮನ್ನು ನೋಡುವವರೆಗೂ ನನಗೆ ಆತಂಕಗಳು ಕಡಿಮೆಯಾಗಿರಲಿಲ್ಲ ನಿಮ್ಮನ್ನು ಕಂಡಾಕ್ಷಣ ದುಖಃ ಉಮ್ಮಳಿಸಿ ಅಳು ಉಕ್ಕಿ ಬಂದಿತ್ತು.

**ಕೃಷ್ಣಪ್ಪ:** ನಿನಗೆ ಆಗಲೂ, ನನ್ನ ಮೇಲೆ ನಂಬಿಕೆ ಇರಲಿಲ್ಲವೇ ?

**ಇಂದಿರಾ :**ನಿಮ್ಮ ಮೇಲಿನ ಅಪಾರ ಪ್ರೀತಿಯೇ ನನ್ನ ಮನೆಯ ಹೊಸಿಲನ್ನು ದಾಟಿಸಿದ್ದು. ಆದರೆ ನಿಮ್ಮ ಪೂರ್ವಾಪರಗಳನ್ನು ನಾನೇನು ತಿಳಿಯಲು ಹೋಗಿರಲಿಲ್ಲವಲ್ಲ! ಅವರಿವರು ಹೇಳಿದ ಮಾತುಗಳು, ಕೆಟ್ಟ ಕತೆಗಳು ಮನದ ಮೂಲೆಯಿಂದೆದ್ದು ನರ್ತಿಸುತ್ತಿದ್ದವು. ನೀವೇನಾದರೂ ಕೈ ಬಿಟ್ಟರೆ, ನಾನು ಹಿಂತಿರುಗಿ ಮನೆಗೆ ಹೋಗುವಂತಿಲ್ಲ ಮುಂದೇನು ಮಾಡಬೇಕು? ಎಂಬ ದುಗುಡ ತಲೆಯಲ್ಲಿ ಗುಂಯ್‌ಗುಡುತಿತ್ತು. ನಿಮ್ಮನ್ನು ಕಂಡ ನಂತರ ಮನದ ಆತಂಕಗಳಿಗೆ ಕಡಿವಾಣ ಬಿದ್ದಿತ್ತು.



**ಗೆಳೆಯರ ಬಳಗದೊಂದಿಗೆ ತರುಣ ಬಿ. ಕೃಷ್ಣಪ್ಪನವರು (ಎಡದಿಂದ ಮೂರನೆಯವರು, ಬಿಳಿ ಉಡುಪಿನಲ್ಲಿ)**

**ಕೃಷ್ಣಪ್ಪ :** ಎಷ್ಟೊಂದು ಅಪನಂಬಿಕೆಗಳು, ತಲ್ಲಣಗಳನ್ನು ತುಂಬಿಕೊಂಡು ನೀನು ಬಂದೆಯಲ್ಲಾ! ಒಂದು ಹೆಣ್ಣನ್ನು ನನ್ನ ಬಾಳಸಂಗಾತಿಯನ್ನಾಗಿ ಆರಿಸಿಕೊಂಡು ಮುಂದಿನ ಜೀವನ ಕಟ್ಟಿಕೊಳ್ಳುವ ನನಗೆಷ್ಟು ತುಮುಲಗಳು ಇದ್ದವೆಂದು ನೀನೇನು ಬಲ್ಲೆ ? ಬಂಧು ಬಳಗ, ಸಮಾಜವನ್ನೆದುರಿಸಿ, ಯಾವುದೇ ಅವಘಡಗಳಿಲ್ಲದೆ ಮದುವೆಯಾಗಲು ಎಷ್ಟೊಂದು ಮಾನಸಿಕ ಸಿದ್ಧತೆ, ಭೌತಿಕ ತಯಾರಿಗಳು ಬೇಕು! ನನ್ನ ಸಮಾಜವಾದಿ ಗೆಳೆಯರಾದ ಬಿ. ರಾಜಣ್ಣ, ನಿಸಾರ್ ಅಹ್ಮದ್, ನಾಗೇಂದ್ರರಾವ್, ರಂಗೇಗೌಡ, ಸಿದ್ದಯ್ಯ, ಶಿವಪ್ರಸಾದ್ ಇವರೆಲ್ಲರೂ ನನ್ನೊಡನೆ ಇರಿದಿದ್ದರೆ, ನಾನು ನೀನು ಅಡೆತಡೆಗಳಿಲ್ಲದೆ ಮದುವೆ ಆಗಲೂ ಸಾಧ್ಯವೇ ಇರುತ್ತಿರಲಿಲ್ಲ. ನಾನು ರಾಜಣ್ಣನ ಮನೆಯಲ್ಲಿ ಕುಳಿತಿದ್ದೆ. ನೀನು ಬರುವ ದಾರಿಯಲ್ಲಿ ಅಲ್ಲಲ್ಲಿ ನಿಂತಿದ್ದ ಗೆಳೆಯರು, ನನಗೆ ಆಗಾಗ ಸುದ್ದಿ ಕಳುಹಿಸುತ್ತಿದ್ದರು. ಅಲ್ಲೇ ಒಂದು ಕಾರು ನಿಲ್ಲಿಸಿಕೊಂಡಿದ್ದೆವು. ನೀನು ಅಲ್ಲಿ ಹತ್ತಿರ ಬಂದಾಗ ನಿಸಾರ್ ಅಹ್ಮದ್ ವಿಷಯ ನನಗೆ ಮುಟ್ಟಿಸಿದರು. ನಾನು ಆಗ ಹೊರಬಂದು ನೋಡ್ತೀನ ನೀನು ಬೆದರಿದ ಹರಿಣಿಯಂತೆ ಬರುತ್ತಿರುವೆ... ಮುಖವೆಲ್ಲಾ ಕೆಂಪಾಗಿತ್ತು. ಕೈಯಲ್ಲಿದ್ದ ಕರ್ಚೀಫು ಕಣ್ಣುಗಳನ್ನೊತ್ತುತ್ತಿತ್ತು.

**ಇಂದಿರಾ:** ನಿಮ್ಮ ತಂದೆ ತಾಯಿಗೆ ನಮ್ಮ ಮದುವೆ ವಿಷಯ ಹೇಳಿದ್ದಿರಾ?

**ಕೃಷ್ಣಪ್ಪ:** ಇಲ್ಲ, ಅವರಿಗೇನೂ ತಿಳಿದಿರಲಿಲ್ಲ. ನಾವು ಕಡೂರಿಗೆ ತಲುಪಿದರೂ ನೀನೊಂದೂ ಮಾತನಾಡದೆ ತಲೆ ಬಗ್ಗಿಸಿ ಅಳುತ್ತಲೇ ಇದ್ದೆ. ಯಾವೊಂದು ಮಾತನಾಡುತ್ತಲೇ ಇಲ್ಲ. ಇವಳು ಸಮಾಧಾನ ಚಿತ್ತಳಾಗಿ, ಮದುವೆ ಮುಗಿಯುವವರೆಗೆ ನೆಗೆಟಿವ್ ಆಗಿ ಯೋಚನೆ ಮಾಡದೆ ಇರಲಿ ಎಂದು ನನ್ನ ಮನಸ್ಸು ಬಯಸುತ್ತಿತ್ತು. ಆ ಆತಂಕದ ಕ್ಷಣಗಳಲ್ಲಿ, ನೋಡು, ಕಡೂರಿನಲ್ಲಿ ಉಧೋ... ಎಂದು ಮಳೆ ಸುರಿಯುತ್ತಿತ್ತು. ಎಲ್ಲೆಲ್ಲೂ ಕಗ್ಗತ್ತಲು, ಇದೇನು ಹೀಗಾಯಿತು ? ಎಂದು ಯೋಚಿಸಿತ್ತಿರುವಂತೆ ಕಡೂರಿನ ಮೇಷ್ಟ್ರ ಮನೆ ಬಂದೇ ಬಿಟ್ಟಿತು.

**ಇಂದಿರಾ:** ನನಗೆ ನಿದ್ದೇನೇ ಬರಲಿಲ್ಲ. ಕಣ್ಣುಬಿಟ್ಟು ನೋಡಿದರೆ ಏನು ಕಾಣಿಸದ ಗಾಢಾಂಧಕಾರ, ಎಂ.ಎಸ್. ನಾಗರಾಜನ ಗೊರಕೆ ಹಾಗೂ ನಿಮ್ಮ ನಿಟ್ಟುಸಿರುಗಳು ಮಾತ್ರ ಕೇಳುತ್ತಿವೆ. ನಿಮ್ಮ ಬಗ್ಗೆ ಹೇಳುತ್ತಿದ್ದ ಅಪವಾದದ ಮಾತುಗಳು ಸತ್ಯವೇ? ಅವರಿಗೆ ಈಗಾಗಲೇ ಮದುವೆಯಾಗಿ, ಹೆಂಡತಿ ಇದ್ದಾಳೆಯೇ? ಅಥವ ಬಿಟ್ಟಿದ್ದಾರೆಯೇ? ಹಾಗಾಗಿದ್ದರೆ ನಾನೇನು ಮಾಡುವುದು? ಮನೆಗೆ ಹಿಂತಿರುಗುವಂತಿಲ್ಲ. ಎಲ್ಲೋ ಪಾಠ ಹೇಳಿಯಾದರೂ, ಮನೆಕೆಲಸ ಮಾಡಿಯಾದರೂ ಬದುಕುವುದೇ ಸೈ, ಆದರೆ ನಿಮ್ಮ ಸಹಚರ್ಯದಲ್ಲಿ ಆ ತರಹದ ಶಂಕೆಗೆ ಕಾರಣಗಳೇ ಕಾಣಿಸುತ್ತಿಲ್ಲವಲ್ಲ... ಮುಂದೇನು? ಎಂಬ ಯೋಚನೆಯಲ್ಲೇ ಬೆಳಕರಿಯಿತು.

* * * * *

ತದನಂತರ ನಾವು ಕಡೂರಿನಲ್ಲೇ ಕೆಲ ದಿನ ಉಳಿದುಕೊಂಡು, ನಾಗರಾಜನನ್ನು ಭದ್ರಾವತಿಗೆ ಕಳುಹಿಸಿದೆವು. ಕೃಷ್ಣಪ್ಪನವರ ಶಿಷ್ಯ ಈ ನಾಗರಾಜನ ಸುಪರ್ದಿಯಲ್ಲೇ ನಮ್ಮ ಮದುವೆ ನಡೆದದ್ದು.. ಅವನು ಭದ್ರಾವತಿಗೆ ಹೋದ ವೇಗದಲ್ಲೇ ಹಿಂತಿರುಗಿ ಕಡೂರಿಗೆ ಮತ್ತೆ ಬಂದೇಬಿಟ್ಟ. ತುಂಬಾ ಗಾಬರಿಯಲ್ಲಿದ್ದ ಅವನನ್ನು ವಿಚಾರಿಸಿದಾಗ, ನಮ್ಮ ತಂದೆ ಮನೆಗೆ ಕರೆಯಿಸಿ, ಬೈದಾಡಿದರೆಂದೂ, ಯಾವ ಕ್ಷಣದಲ್ಲಾದರೂ ಇಲ್ಲಿಗೆ ಬರಬಹುದೆಂದೂ ತಕ್ಷಣ ನಾವು ಕಡೂರನ್ನು ಬಿಡಬೇಕೆಂದು ತಿಳಿಸಿದ. ನಾವು ಆ ಕ್ಷಣ ಚಿಕ್ಕಮಗಳೂರಿಗೆ ಬಸ್ ಹತ್ತಿದೆವು. ಮದುವೆಯಾಯಿತಲ್ಲಾ ಎಂಬ ತುಸು ಖುಷಿಯ ಕ್ಷಣ ಅಲ್ಲೇ ಮುಗಿದೋಯಿತು. ಅವರು ನನ್ನನ್ನು ಪುನಃ ಎಳೆದುಕೊಂಡು ಹೋದರೆ ಏನು ಮಾಡುವುದು? ಹಾಗೆ ನಾನು ಹೋಗಿದ್ದೇ ಆದರೆ ಉಳಿಗಾಲವಿಲ್ಲ? ಎಂಬ ಭಯ ಶುರುವಾಗಿತ್ತು ನನಗೆ.

ಚಿಕ್ಕಮಗಳೂರಿನಲ್ಲಿ ಕೃಷ್ಣಪ್ಪನವರ ಗೆಳೆಯರಾದ ಸೋಮಶೇಖರ್‌ರವರು ಸಮಾಜ ಕಲ್ಯಾಣ ಇಲಾಖಾಧಿಕಾರಿಗಳಾಗಿದ್ದರು. ಅವರ ಮನೆಗೆ ಹೋದೆವು. ಅವರ ಮನೆಯವರೆಲ್ಲಾ ಊರಿಗೆ ಹೋಗಿದ್ದು, ನಮಗೇ ಬೀಗದ ಕೀ ಕೊಟ್ಟು, ಅವರೂ ಸಹ ಊರಿಗೆ ಹೊರಟರು. ಅಲ್ಲಿ ಕಳೆದ ನಾಲ್ಕು ದಿನಗಳು ಮನಕ್ಕೆ ಮುದ ನೀಡಿತ್ತು. ಅಲ್ಲಿಂದ ನಾವು ಮೂಡಿಗೆರೆಯ ಪೂರ್ಣಚಂದ್ರ ತೇಜಸ್ವಿಯವರ ಎಸ್ಟೇಟ್ ಮನೆಗೆ ಬಂದೆವು. ಪ್ರಕೃತಿಯ ಮಡಿಲಲ್ಲಿ ಸುತ್ತಿದ್ದು, ತೇಜಸ್ವಿಯವರ ಪತ್ನಿ ರಾಜೇಶ್ವರಿಯವರ ಅಡುಗೆಯ ಸವಿ, ದಂಪತಿಗಳಿಬ್ಬರ ಆತಿಥ್ಯ ಮನದ ಭಾರಗಳನ್ನು ಇಳಿಸಿತ್ತು. ಕೃಷ್ಣಪ್ಪನವರಿಗೆ ಭದ್ರಾವತಿಯಲ್ಲಿನ ಪರಿಸ್ಥಿತಿ ಬಗ್ಗೆ ದೂರವಾಣಿ ಮುಖಾಂತರ ಮಾಹಿತಿಗಳು ಬರುತ್ತಿದ್ದವು. ಪೋಲೀಸ್ ಕಂಪ್ಲೇಂಟ್ ಮಾಡಿಲ್ಲವೆಂದೂ, ಸ್ಥಳೀಯ ಪತ್ರಿಕೆಗಳು ವ್ಯತಿರಿಕ್ತ ವರದಿಗಳೇನೂ ಮಾಡಿಲ್ಲವೆಂದೂ, ಆದರೆ ಒಳಗೊಳಗೆ ಆರ್‌ಎಸ್‌ಎಸ್‌ನವರೂ, ಹಲ್ಲೆಗೆ ಸಂಚು ನಡೆಸಿದ್ದಾರೆಂದೂ ಮೆಸ್ ಲೈನ್‌ನಲ್ಲಿದ್ದ ಮನೆಗೆ ಕಲ್ಲು ಹೊಡೆದಿದ್ದಾರೆಂದೂ, ತಿಳಿಸಿದ್ದರು.

ಅದಾದ ಒಂದು ವಾರದ ನಂತರ ಭದ್ರಾವತಿಯಿಂದ ಹಸಿರು ನಿಶಾನೆ ಸಿಕ್ಕ ಮೇಲೆ ನಾವು ರಾತ್ರಿ ಮನೆಗೆ ಬಂದು ಸೇರಿದೆವು. ಮರು ದಿನದಿಂದ ನಮ್ಮ ಮನೆ, ಸಂಸಾರ ಶುರುವಾಯಿತು. ಅಕ್ಕ ಪಕ್ಕ, ಎದುರು ಮನೆಗಳವರು ಹಣಕಿ ಇಣುಕಿ ನೋಡಲಾರಂಭಿಸಿದರು. ಕುತೂಹಲಿಗಳು ಇನ್ನಲ್ಲದ ನೆವ ಹೇಳಿಕೊಂಡು ಮನೆಗೆ ಬರಲಾರಂಭಿಸಿದರು. ಹರಿಹರದಿಂದ, ಕೃಷ್ಣಪ್ಪನವರ ಕೊನೆಯ ತಮ್ಮ ಮಾರುತಿ ಬಂದು ನೋಡಿಕೊಂಡು ಹೋದ ನಂತರ ಕೃಷ್ಣಪ್ಪನವರ ಸಹೋದರಿ ಹಾಲಮ್ಮ ಮಗಳೊಂದಿಗೆ ಬಂದು ನನ್ನೊಡನೆ ಮಾತನಾಡಿ ಹೋದರು. **(ಮುಂದುವರೆಯುವುದು)**

# ಜನಾಂದೋಲನ ನೈಸರ್ಗಿಕವಾಗಿ ಬರಬೇಕು : ಎಸ್.ಆರ್. ಹಿರೇಮಠ



**ಅಕ್ರಮ ಗಣಿಗಾರಿಕೆ ಮತ್ತು ಭ್ರಷ್ಟಾಚಾರದ ವಿರುದ್ಧ ಕಾನೂನಾತ್ಮಕ ಹೋರಾಟ ನಡೆಸಿ ಅದಕ್ಕೆ ಕಡಿವಾಣ ಹಾಕುವಲ್ಲಿ ಮಹತ್ವದ ಸಾಧನೆ ಮಾಡಿರುವ ಧಾರವಾಡದ ಸಮಾಜ ಪರಿವರ್ತನಾ ಸಮುದಾಯ ಸಂಸ್ಥೆಯ ಎಸ್.ಆರ್ ಹಿರೇಮಠ ಸಹಜವಾಗಿಯೇ ಇತ್ತೀಚಿನ ದಿನಗಳಲ್ಲಿ ಸುದ್ದಿಯಲ್ಲಿರುವ ವ್ಯಕ್ತಿಯಾಗಿದ್ದಾರೆ. ಅವರು ಇತ್ತೀಚೆಗೆ ಶಿವಮೊಗ್ಗ ಮತ್ತು ತೀರ್ಥಹಳ್ಳಿಯ ಎರಡು ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಲು ಬಂದಿದ್ದರು. ಈ ಸಂದರ್ಭದಲ್ಲಿ ಪತ್ರಿಕೆಯ ಪರವಾಗಿ ಅವರನ್ನು ಸಂದರ್ಶಿಸಲಾಯಿತು.. ನಮ್ಮ ಕೆಲವು ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳು ಇಲ್ಲಿವೆ:**

**ಪ್ರಶ್ನೆ:** *ನೀವು ನ್ಯಾಯಾಲಯಗಳಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಭ್ರಷ್ಟಾಚಾರದ ವಿರುದ್ಧ ಹಾಕಿರುವ ದಾವೆಗಳು ಸದ್ಯದಲ್ಲಿಯೇ ತೀರ್ಮಾನವಾಗುವ ಸಾಧ್ಯತೆಗಳು ಎಷ್ಟು?*

**ಹಿರೇಮಠ :** ಮಹಾತ್ಮಾ ಗಾಂಧಿ, ಭಗತ್ ಸಿಂಗ್ ರಂತಹ ನೂರಾರು ಜನರ ತ್ಯಾಗ ಬಲಿದಾನಗಳಿಂದ , ಇವರೆಲ್ಲರು ನಡೆಸಿದ ಸುದೀರ್ಘ ಸ್ವಾತಂತ್ರ್ಯ ಸಂಗ್ರಾಮದ ಫಲವಾಗಿ ನಮಗೆ ಸ್ವಾತಂತ್ರ್ಯ ಲಭಿಸಿತು. ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂದಿತು. ಈ ನೆಲದ ವಾಸ್ತವವನ್ನು ಬಲ್ಲ ಅಂಬೆಡ್ಕರ್ ಅವರ ಪ್ರತಿಭೆ, ದೂರದೃಷ್ಟಿಯಿಂದಾಗಿ ಸಂವಿಧಾನ ರಚನೆಯಾಯಿತು. ಈ ಮೂಲಕವೇ ಶಾಸಕಾಂಗ , ಕಾರ್ಯಾಂಗ ಮತ್ತು ನ್ಯಾಯಾಂಗವ್ಯವಸ್ಥೆ ರೂಪಿಸಲ್ಪಟ್ಟಿತು. ನ್ಯಾಯಾಲಯಗಳು ದಿಟ್ಟತನದ ಕೆಲವು ತೀರ್ಪುಗಳನ್ನು ನೀಡಿದಾಗ ನ್ಯಾಯಾಂಗ ಇಲ್ಲಿನ ಹದಗೆಟ್ಟ ವ್ಯವಸ್ಥೆಯನ್ನು ಬದಲಿಸಿಬಿಡುತ್ತದೆ ಎಂಬ ಭ್ರಮೆಗೆ ನಾವು ಒಳಗಾಗುತ್ತೇವೆ. ವಾಸ್ತವ ಹಾಗಿಲ್ಲ. ನಮ್ಮ ಪ್ರಜಾಪ್ರಭುತ್ವದಲ್ಲಿ ನ್ಯಾಯಾಲಯದ ವ್ಯಾಪ್ತಿ ಸೀಮಿತವಾಗಿದೆ. ಶಾಸಕಾಂಗ , ಕಾರ್ಯಾಂಗ ಮತ್ತು ನ್ಯಾಯಾಂಗಗಳು ಒಂದನ್ನು ಬಿಟ್ಟು ಇನ್ನೊಂದು ಕೆಲಸ ನಿರ್ವಹಿಸಲು ಸಾಧ್ಯವಿಲ್ಲ. ನ್ಯಾಯಾಂಗ ಶಾಸಕಾಂಗ ಮತ್ತು ಕಾರ್ಯಾಂಗಗಳ ಕೆಲಸ ಮಾಡಲು ಸಾಧ್ಯವಿಲ್ಲ. ನಾವು ನ್ಯಾಯಾಲಯದಲ್ಲಿ ಹಾಕಿದ ದಾವೆಗಳು ಹೋರಾಟದ ಒಂದು ಭಾಗ ಮಾತ್ರ. ಇವುಗಳಿಂದಲೇ ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತವೆ ಎಂಬ ನಂಬಿಕೆ ನಮಗೂ ಇಲ್ಲ. ಪರ್ಯಾಯ ರಾಜಕೀಯ ವ್ಯವಸ್ಥೆ ರೂಪುಗೊಳ್ಳದೆ ಈ ಭ್ರಷ್ಟ ವ್ಯವಸ್ಥೆಯನ್ನು ಸರಿ ಮಾಡಲು ಸಾಧ್ಯವಿಲ್ಲ. ಪರ್ಯಾಯ ರಾಜಕೀಯ ವ್ಯವಸ್ಥೆ ಎಂದರೆ ಪಕ್ಷ ರಾಜಕಾರಣ ಮಾತ್ರವಲ್ಲ. ಮಾಹಿತಿ ಹಕ್ಕು ಕಾಯ್ದೆಯನ್ನು ಸರಿಯಾಗಿ ಬಳಸಿಕೊಳ್ಳಬೇಕು. ಭ್ರಷ್ಟರನ್ನು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. *ಜನಸಂಗ್ರಾಮ ಪರಿಷತ್* ಮತ್ತು *ಗ್ರಾಮ ಗಣರಾಜ್ಯ* ವೇದಿಕೆಗಳು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ.

**ಪ್ರಶ್ನೆ:** *ಅಕ್ರಮ ಗಣಿಗಾರಿಕೆ ಮತ್ತು ಭ್ರಷ್ಟಾಚಾರದ ವಿರುದ್ಧ ನಿರೀಕ್ಷಿತ ಜನಾಂದೋಲನ ಏಕೆ ರೂಪುಗೊಳ್ಳುತ್ತಿಲ್ಲ?*

**ಹಿರೇಮಠ :** ಅಕ್ರಮ ಗಣಿಗಾರಿಕೆ ಮತ್ತು ಭ್ರಷ್ಟಾಚಾರದ ವಿರುದ್ಧ ಜನಾಂದೋಲನ ರೂಪುಗೊಳ್ಳುತ್ತಿಲ್ಲ ಎನ್ನಲಾಗದು. ನನ್ನದೇ ಒಂದು ಸಣ್ಣ ಉದಾಹರಣೆ ನೀಡಬಹುದಾದರೆ ಜನಸಂಗ್ರಾಮ ಪರಿಷತ್ತಿನ ನಮ್ಮ ಹೋರಾಟವನ್ನು ಬೆಂಬಲಿಸಿ ನನಗೆ ರಾಜ್ಯಾದ್ಯಂತ ದಿನಂಪ್ರತಿ ೩೦–೪೦ ದೂರವಾಣಿ ಕರೆಗಳು ಬರುತ್ತವೆ. ಇವರೆಲ್ಲರಿಗೂ ಸೂಕ್ತವಾಗಿ ಸ್ಪಂದಿಸಲು ಮತ್ತು ಅವರಲ್ಲಿ ಕೆಲವರನ್ನಾದರೂ ಹೋರಾಟದಲ್ಲಿ ತೊಡಗಿಸಿಕೊಳ್ಳಲು ನನಗೆ ವೇಳೆ ಕೊಡಲೇ ಸಾಧ್ಯವಾಗುತ್ತಿಲ್ಲ. 'ಎರಡೂವರೆ ಜನರನ್ನಿಟ್ಟುಕೊಂಡು ಹೋರಾಟ ಆರಂಭಿಸಿದಿವಿ' ಎಂದು ಮಾವೋ ಒಂದು ಕಡೆ ಹೇಳುತ್ತಾನೆ. ಆತನ ಈ ಮಾತುಗಳೇ ನಮಗೆ ಸ್ಫೂರ್ತಿ. ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಕೆಲಸ ಮಾಡುವುದು ಮುಖ್ಯ ಜನಜಾಗೃತಿ ಆಗಲು ತನ್ನದೇ ಆದ ಸಮಯ ಹಿಡಿಯುತ್ತದೆ. ಜನಾಂದೋಲನ ನೈಸರ್ಗಿಕವಾಗಿ ಬರಬೇಕು. ಇದು ವ್ಯಾಪಕವಾಗಿ ಹರಡಲು ನಾವೆಲ್ಲರೂ ವೇಗವರ್ಧಕದಂತೆ ಕೆಲಸ ಮಾಡಬೇಕು.

**ಪ್ರಶ್ನೆ:** *ಗಣಿಗಾರಿಕೆ ಒಪ್ಪಿತ ಎನಿಸುವ ಸರಕು ಸಂಸ್ಕೃತಿಯ ಜೀವನಕ್ರಮ ಇಂತಹ ಜನಾಂದೋಲನ ರೂಪುಗೊಳ್ಳದೇ ಇರಲು ಎಷ್ಟರಮಟ್ಟಿಗೆ ಕಾರಣವಾಗಿದೆ?*

**ಹಿರೇಮಠ:** ಸರಕು ಸಂಸ್ಕೃತಿಯ ಜೀವನಕ್ರಮ ನಮ್ಮ ಜೀವನ ಮೌಲ್ಯಗಳನ್ನು ಪಲ್ಲಟಗೊಳಿಸಿದೆ ಎನ್ನುವುದು ನಿಜ. ಆದರೆ ಸರಕುಸಂಸ್ಕೃತಿಯ ಜೀವನಕ್ರಮಕ್ಕೆ ಒಳಗಾದವರೆಲ್ಲ ಗಣಿಗಾರಿಕೆಯ ಪರವಾಗಿದ್ದಾರೆ ಎನ್ನಲಾಗದು. ನನ್ನ ಅನುಭವದ ಪ್ರಕಾರ ನಮ್ಮ ಸಮಾಜಕ್ಕೆ ಈಗ ಅನಿರ್ಬಂಧಿತ ಗಣಿಗಾರಿಕೆಯ ಅಪಾಯ ಅರಿವಾಗಿದೆ. ನಿಧಾನವಾಗಿಯಾದರೂ ಭ್ರಷ್ಟಾಚಾರ ಮತ್ತು ಗಣಿಗಾರಿಕೆಯ ವಿರುದ್ಧ ಜನಾಂದೋಲನ ರೂಪುಗೊಳ್ಳುತ್ತದೆ ಎನ್ನುವ ವಿಶ್ವಾಸ ನನಗಿದೆ.


(ಸಂದರ್ಶನ: **ಸರ್ಜಾಶಂಕರ ಹರಳಿಮಠ**)

# ತಿಂಗಳ ವಿಶೇಷ ಧರ್ಮ ಮತ್ತು ರಾಜಕಾರಣ

ಧರ್ಮ ಮತ್ತು ರಾಜಕಾರಣಗಳನ್ನು ಪ್ರತ್ಯೇಕಗೊಳಿಸಿದ 'ಸೆಕ್ಯಲರಿಸಂ'(ಧರ್ಮಇರಪೇಕ್ಷತೆ?) ಆಧುನಿಕ ಕಾಲದಲ್ಲಿ ಚಾಲ್ತಿಗೆ ಬಂದ ಒಂದು ತತ್ವ. ಐರೋಪ್ಯ ಪುನರುಜ್ಜೀವನ ಯುಗದ ಮೌಲ್ಯಗಳ ಪ್ರಭಾವದಲ್ಲಿ ಕ್ರಿಶ್ಚಿಯನ್ ಧರ್ಮದಲ್ಲಿ ಲೌಕಿಕ ಪಂಥೀಯತೆ ಸೃಷ್ಟಿಯಾಯಿತು. ಇದು ವಿಜ್ಞಾನ ಮತ್ತು ಧರ್ಮಗಳ ನಡುವೆ ಉಂಟು ಮಾಡತೊಡಗಿದ ಘರ್ಷಣೆಗಳನ್ನು ಪ್ರಗತಿಪರ ಸಮಾಜದ ನಿರ್ಮಾಣದ ದೃಷ್ಟಿಯಿಂದ ತಪ್ಪಿಸಲು ಯೂರೋಪಿನ ರಾಜಕೀಯ ಮತ್ತು ಧರ್ಮಶಾಸ್ತ್ರಜ್ಞರ ನಡುವೆ ಆದ ಒಪ್ಪಂದದ ಪರಿಣಾಮವದು. ಅದಕ್ಕೆ ಮುನ್ನ ಜಗತ್ತಿನಾದ್ಯಂತ ರಾಜಕಾರಣ ಮತ್ತು ಧರ್ಮಗಳು ಬೇರೆಬೇರೆಯಲ್ಲವೆಂಬಂತೆ ರಾಜ್ಯಾಡಳಿತ ತನ್ನದೇ ಒಂದು ಹದದಲ್ಲಿ ನಡೆಯುತ್ತಿತ್ತು. ಇದರ ವಾಸನೆ ಈಗಲೂ ಹಲವು ಧರ್ಮ ಮತ್ತು ರಾಜ್ಯ ವ್ಯವಸ್ಥೆಗಳಲ್ಲಿ ಉಳಿದಿದ್ದು ಹಲವು ರೀತಿಯ ಘರ್ಷಣೆಗಳಿಗೆ ಕಾರಣವಾಗುತ್ತಲೇ ಇದೆ. ವಿಶೇಷವಾಗಿ, ಮೂಲತಃ ರಾಜಕೀಯ ಧರ್ಮವೇ ಆಗಿರುವ ಇಸ್ಲಾಂ, ಆಧುನಿಕ ಕಾಲದ ಪ್ರಜಾಪ್ರಭುತ್ವವಾದಿ ಧರ್ಮನಿರಪೇಕ್ಷ ರಾಜ್ಯವ್ಯವಸ್ಥೆಗೆ ಹೊಂದಿಕೊಳ್ಳುವಲ್ಲಿ ತನ್ನದೇ ಆದ ಆಂತರಿಕ ತಳಮಳಗಳಿಗೆ ಸಿಕ್ಕಿದೆ. ಈ ಸಂದಿಗ್ಧತೆಯಲ್ಲಿ ಅದು ಪ್ರಜಾಪ್ರಭುತ್ವವಾದದ ಹೆಸರಿನಲ್ಲಿ ನಡೆಯುತ್ತಿರುವ ಜಾಗತಿಕ ಶಕ್ತಿ ರಾಜಕಾರಣದ ಚದುರಂಗದಾಟದಲ್ಲಿ ಆಟಿಕೆಯಾಗಿ ಹಲವು ಸಂಕಷ್ಟ ಮತ್ತು ಆರೋಪಗಳಿಗೆ ಈಡಾಗುವ ಪರಿಸ್ಥಿತಿ ಉಂಟಾಗಿದೆ. ಇದರ ಪರಿಣಾಮವಾಗಿ, ಭಾರತದಂತಹ ಇಸ್ಲಾಂ ಸೇರಿದಂತೆ ಬಹುಧರ್ಮೀಯವಾಗಿರುವ ಧರ್ಮನಿರಪೇಕ್ಷ ರಾಷ್ಟ್ರವು ಹಲವು ಕ್ಲಿಷ್ಟ ಸವಾಲುಗಳನ್ನು ಎದುರಿಸಬೇಕಾಗಿ ಬಂದಿದ್ದು, ಈ ಸಂದರ್ಭದಲ್ಲಿ ಧರ್ಮ ನಿರಪೇಕ್ಷತೆಯ ಪರಿಕಲ್ಪನೆ ಕುರಿತಂತೆ ಹಲವು ನೆಲೆಗಳ ಚರ್ಚೆಗಳಿಗೆ ಕಾರಣವಾಗಿದೆ. ಇಂತಹ ಒಂದು ಚರ್ಚೆಯ ಎರಡು ಪ್ರಾತಿನಿಧಿಕ ಬರಹಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿ ಅವನ್ನು ನಮ್ಮ ಓದುಗರ ಅಭಿಪ್ರಾಯಗಳಿಗೆ ತೆರೆದಿಡುತ್ತಿದ್ದೇವೆ. –ಸಂಪಾದಕ

## ಅಮೆರಿಕಾದ ಸಾಮ್ರಾಜ್ಯಶಾಹಿಯೂ, 'ಇಸ್ಲಾಮಿಕ್' ಭಯೋತ್ಪಾದನೆಯೂ...

**–ಜಿ. ರಾಜಶೇಖರ**




**ಯು**–ಟ್ಯೂಬ್‌ನಲ್ಲಿ ಈಜಿಪ್ಟ್‌ನ ಮಾಜಿ ಅಧ್ಯಕ್ಷ ಗಮಾಲ್ ಅಬ್ದೆಲ್ ನಾಸೆರ್, ೧೯೫೩ರಲ್ಲಿ ಮಾಡಿದ ಭಾಷಣದ ಎರಡು ನಿಮಿಷಗಳ ಒಂದು ಆಕರ್ಷಕ ವಿಡಿಯೋ ಸಿಗುತ್ತದೆ. ಈಜಿಪ್ಟ್‌ನ ಮೂಲಭೂತವಾದಿ ಇಸ್ಲಾಮಿಕ್ ಸಂಘಟನೆ, ಮುಸ್ಲಿಮ್ ಬ್ರದರ್‌ಹುಡ್ ಸಾರ್ವಜನಿಕ ಸ್ಥಳಗಳಲ್ಲಿ ಹೆಂಗಸರಿಗೆ ಹಿಜಬ್ ಮತ್ತು ತರ್‍ಬಾ (ಶಿರೋವಸ್ತ್ರ) ಕಡ್ಡಾಯಗೊಳಿಸಿದರೆ, ತಮ್ಮ ಸಂಘಟನೆ ಸರಕಾರವನ್ನು ಬೆಂಬಲಿಸುವುದಾಗಿ ಘೋಷಿಸುತ್ತದೆ. ನಾಸೆರ್ ತನ್ನ ಭಾಷಣದಲ್ಲಿ "ಅದು ಎಂದಿಗೂ ಸಾಧ್ಯವಿಲ್ಲ; ನಿಮ್ಮ ಮನೆಯಲ್ಲಿ ನೀವು ಬೇಕಾದ ರೂಲ್ಸ್ ಮಾಡಿಕೊಳ್ಳಿ. ಆದರೆ ಸಾರ್ವಜನಕ ಸ್ಥಳಗಳಲ್ಲಿ ಅಂತಹದ್ದನ್ನೆಲ್ಲ ಕಡ್ಡಾಯಗೊಳಿಸಲು ಬರುವುದಿಲ್ಲ. ವೈದ್ಯಕೀಯ ವಿದ್ಯಾರ್ಥಿಯಾಗಿರುವ ಮುಸ್ಲಿಮ್ ಬ್ರದರ್ ಹುಡ್‌ನ ಅಧ್ಯಕ್ಷರ ಮಗಳೇ ತರ್‍ಬಾ ಧರಿಸುವುದಿಲ್ಲ. ಅವರು ಎಲ್ಲ ಹೆಂಗಸರಿಗೂ ತರ್‍ಬಾವನ್ನು ಕಡ್ಡಾಯಗೊಳಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ" ಎಂದು ಹೇಳುತ್ತಿದ್ದಂತೆಯೇ, ಒಬ್ಬ ಸಭಿಕ ಏರು ದನಿಯಲ್ಲಿ "ಅವನೇ ಅದನ್ನು ಹಾಕಿಕೊಳ್ಳಲಿ" ಎನ್ನುತ್ತಾನೆ. ಎಲ್ಲರೂ ಜೋರಾಗಿ ನಗುತ್ತಾರೆ. ೧೯೫೩ರಿಂದ ೧೯೭೦ರ ವರೆಗೆ ಈಜಿಪ್ಟ್‌ನ ಅಧ್ಯಕ್ಷನಾಗಿದ್ದ ನಾಸೆರ್, ಅರಬ್ ಜಗತ್ತಿನ ನಾಯಕ ಎಂದು ಪರಿಗಣಿಸಲ್ಪಟ್ಟಿದ್ದ. ಭಾರತದ ಮೊದಲ ಪ್ರಧಾನ ಜವಹರಲಾಲ್ ನೆಹರೂಗೆ ಆಪ್ತನಾಗಿದ್ದ ನಾಸೆರ್ ಅಧಿಕಾರಾವಧಿಯಲ್ಲಿ ಈಜಿಪ್ಟ್ ಅಲಿಪ್ತ ರಾಷ್ಟ್ರಗಳ ಒಕ್ಕೂಟದ ಸದಸ್ಯ ರಾಷ್ಟ್ರವಾಗಿದ್ದಿತು.



ಪಶ್ಚಿಮದ ವಸಾಹತುಶಾಹಿ ಮತ್ತು ಅಮೇರಿಕದ ಸಾಮ್ರಾಜ್ಯಶಾಹಿಯನ್ನು ಎದುರಿಸಿದ ತೃತೀಯ ಜಗತ್ತಿನ ಜನನಾಯಕರಲ್ಲಿ ನಾಸೆರ್ ಕೂಡ ಒಬ್ಬರಾಗಿದ್ದರು. ಈಜಿಪ್ಟ್‌ನ ಭೂಪ್ರದೇಶದಲ್ಲಿ ಹಿಂದು ಮಹಾಸಾಗರವನ್ನು ಅಟ್ಲಾಂಟಿಕ್ ಸಾಗರದ ಜೊತೆ ಜೋಡಿಸುವ ಸೂಯೆಜ್ ಕಾಲುವೆಯನ್ನು ಅವರು ಬ್ರಿಟನ್ ಮತ್ತು ಫ್ರಾನ್ಸ್‌ಗಳ ವಿರೋಧದ ನಡುವೆಯೇ ರಾಷ್ಟ್ರೀಕರಿಸುವ ಧೈರ್ಯ ತೋರಿದರು. ಫ್ರೆಂಚ್ ಎಂಜಿನಿಯರುಗಳು ನಿರ್ಮಿಸಿದ ಸೂಯೆಜ್ ಕಾಲುವೆ ಆಂಗ್ಲೋ ಫ್ರೆಂಚ್ ಒಡೆತನದಲ್ಲಿತ್ತು. ಬ್ರಿಟನ್ ಮತ್ತು ಫ್ರಾನ್ಸ್, ಈಜಿಪ್ಟ್‌ನ ವಿರುದ್ಧ ದಂಡೆತ್ತಿ ಹೋಗಲು ಸಜ್ಜಾಗಿದ್ದವು. ಆಗ ನಾಸೆರ್‌ನ ಬೆಂಬಲಕ್ಕೆ ಗಟ್ಟಿಯಾಗಿ ನಿಂತಿದ್ದು ನೆಹರೂ. "ಬ್ರಿಟನ್ ಮತ್ತು ಫ್ರಾನ್ಸ್ ತಮ್ಮನ್ನು ತಾವು ಜಗತ್ತಿನ ಪೋಲಿಸರು ಎಂದು ಭಾವಿಸಿಕೊಂಡಿದ್ದಾವೆಯೇ"? ಎಂದು ನೆಹರೂ ಛೇಡಿಸಿದರು. ತಮ್ಮ ಆಕ್ರಮಣದ ಯೋಜನೆಯನ್ನು ಆ ಎರಡು ರಾಷ್ಟ್ರಗಳು ಕೈಬಿಡಲೇ ಬೇಕಾಯಿತು. ಆದರೆ ನಾಸೆರ್‌ನ ಉದ್ಧಟತನವನ್ನು ಪಶ್ಚಿಮದ ಈ ಎರಡು ಪ್ರಮುಖ ಐರೋಪ್ಯ ವಸಾಹತು ಶಾಹಿ ರಾಷ್ಟ್ರಗಳು ಮತ್ತು ಅವುಗಳ ಮಿತ್ರ ರಾಷ್ಟ್ರ ಅಮೇರಿಕ ಮರೆಯಲೂ ಇಲ್ಲ. ಕ್ಷಮಿಸಲೂ ಇಲ್ಲ.

ನಾಸೆರ್ ನೆಹರೂರಂತೆ ವಸಾಹತು ಶಾಹಿಯನ್ನು ವಿರೋಧಿಸಿದ್ದರು; ಆದರೆ ಆಧುನಿಕ ಯುರೋಪ್‌ನ ಮಾನವತಾವಾದದ ಮಹಾ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಕೋನಗಳನ್ನು ಈಜಿಪ್ಟ್ ತನ್ನದಾಗಿಸಿಕೊಳ್ಳಬೇಕು ಎಂದು ತೀವ್ರವಾಗಿ ಹಂಬಲಿಸಿದ್ದರು. ಆದರೆ ಈ ಹಂಬಲಗಳನ್ನು ಸಾಕಾರಗೊಳಿಸಲು ನಾಸೆರ್‌ಗೆ ಸಾಧ್ಯವಾಗಲೇ ಇಲ್ಲ. ೧೯೭೦ರಲ್ಲಿ ಅವರ ೫೨ರ ಹರೆಯದಲ್ಲಿ, ಅವರನ್ನು ಅಮೇರಿಕದ ಗೂಢಚಾರ ಪಡೆ, ಸಿ.ಐ.ಎ. ಕೊಲ್ಲಿಸಿ, ಅನ್ವರ್‌ಸಾದತ್ ಎಂಬ ತನ್ನ ಬಾಲಬಡುಕ ಸೇನಾಧಿಕಾರಿಯೊಬ್ಬನನ್ನು ಅವರ ಸ್ಥಾನದಲ್ಲಿ ಕುಳ್ಳಿರಿಸಿತು. ೧೯೮೧ರಲ್ಲಿ ಅನ್ವರ್ ಸಾದತ್ ಕೂಡ ಸೇನಾಧಿಕಾರಿಗಳಿಂದ ಕೊಲೆಯಾದ ನಂತರ ಹೊಸ್ನಿ ಮುಬಾರಕ್ ಎಂಬ ಇನ್ನೊಬ್ಬ ಅಮೇರಿಕದ ಬಾಲಬಡುಕ ಈಜಿಪ್ಟ್‌ನ ಅಧ್ಯಕ್ಷನಾದ. ಮಹಾಭ್ರಷ್ಟನಾಗಿದ್ದ ಮುಬಾರಕ್, ಅಮೇರಿಕಕ್ಕೆ

### ಈಜಿಪ್ಟ್‌ನ ಅಮೆರಿಕಾದ ಕೈಗೊಂಬೆ ಅಧ್ಯಕ್ಷರುಗಳು



ಅನ್ವರ್ ಸಾದತ್ ಹೊಸ್ನಿ ಮುಬಾರಕ್ ಮೊಹಮ್ಮದ್ ಮೋರ್ಸಿ

ಮಾತ್ರ ಕೊನೆಯವರೆಗೂ ನಿಷ್ಠೆಯಿಂದ ನಡೆದುಕೊಂಡ. ಇವನ ವಿಧೇಯ ನಡವಳಿಕೆಗೆ ಬಹುಮಾನವಾಗಿ ಅಮೇರಿಕ ಇವನಿಗೆ ಯಥೇಚ್ಛ ಡಾಲರುಗಳನ್ನು ಶಸ್ತ್ರಾಸ್ತ್ರಗಳನ್ನು ಪೂರೈಸಿತು. ನಾಸೆರ್‌ನ ಆದರ್ಶಗಳನ್ನು ಈಜಿಪ್ಟ್ ಸಂಪೂರ್ಣವಾಗಿ ಕೈಬಿಟ್ಟಿತ್ತು. ಹೊಸ್ನಿ ಮುಬಾರಕ್‌ನ ಕ್ರೂರ ಹಾಗೂ ನಿರಂಕುಶ ಆಳ್ವಿಕೆಯ ವಿರುದ್ಧ ೨೦೧೧ರಲ್ಲಿ ದೇಶದಲ್ಲಿ ನಡೆದ ಜನಾಂದೋಲನದಲ್ಲಿ ಆತ ಪದಚ್ಯುತಿಗೊಂಡು ಸೆರೆಮನೆ ಸೇರಿದ. ಆದರೆ ಅಧಿಕಾರ ಆಗಲೂ ಸೇನೆಯದ್ದೇ ಆಗಿತ್ತು. ಮುಸ್ಲಿಮ್ ಬ್ರದರ್‌ಹುಡ್ ದೇಶದ ರಾಜಕೀಯದಲ್ಲಿ ನಿರ್ಣಾಯಕ ಶಕ್ತಿಯಾಗಿ ಬೆಳೆದು ಅದರ ನಾಯಕ ಮೊಹಮ್ಮದ್ ಮೋರ್ಸಿ ಈಗ ಅದರ ಅಧ್ಯಕ್ಷನಾಗಿದ್ದಾನೆ. ಈತನೂ ಈಗ ಜನತೆಯ ವಿರೋಧ ಎದುರಿಸುತ್ತಿದ್ದಾನೆ. ಮುಬಾರಕ್‌ನ ವಿರುದ್ಧ ನಡೆದ ಆಂದೋಲನಕ್ಕೆ ಈತನ ಮೂಲಭೂತವಾದಿ ಸಂಘಟನೆಯ ಕೊಡುಗೆಯೂ ದೊಡ್ಡದಾಗಿತ್ತು.

ತನ್ನ ಹಿತಾಸಕ್ತಿಗಳಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವ ಸರಕಾರಗಳನ್ನು ಅಮೇರಿಕ ಕಿತ್ತೆಸೆದದ್ದು ಇದೇನು ಮೊದಲ ಬಾರಿ ಅಲ್ಲ; ಕೊನೆಯ ಬಾರಿಯೂ ಅಲ್ಲ. ದಕ್ಷಿಣ ಅಮೇರಿಕ ಖಂಡವನ್ನು ತನ್ನ ಹಿತ್ತಲು ಎಂದೇ ಭಾವಿಸಿರುವ ಅಮೇರಿಕ, ೨೦ನೆಯ ಶತಮಾನದ ಪ್ರಾರಂಭದಿಂದಲೂ ಅಲ್ಲಿನ ಆಂತರಿಕ ರಾಜಕೀಯದಲ್ಲಿ ಮಧ್ಯಪ್ರವೇಶಿಸಿ, ತನ್ನ ಮಾತನ್ನು ಮೀರಿ ನಡೆಯುವ ಸರಕಾರಗಳನ್ನು ಉರುಳಿಸಿ, ತನಗೆ ವಿಧೇಯವಾಗಿರುವ ಕೈಗೊಂಬೆ ಸರಕಾರಗಳನ್ನು ನೇಮಿಸುತ್ತಲೆ ಬಂದಿದೆ. ದಕ್ಷಿಣ ಅಮೇರಿಕ ಖಂಡದ ಅಪಾರ ಖನಿಜ ಹಾಗೂ ಅರಣ್ಯ ಸಂಪತ್ತನ್ನು ನಿಯಂತ್ರಿಸುವುದಕ್ಕೆ ಅಮೇರಿಕ ಲಾಗಾಯ್ತಿನಿಂದ ಈ ದುಂಡಾವರ್ತಿಯ ವಿಧಾನವನ್ನು ಅನುಸರಿಸುತ್ತಿದೆ. ಪಶ್ಚಿಮ ಏಷ್ಯದಲ್ಲಿ ತೈಲ ನಿಕ್ಷೇಪಗಳು ಪತ್ತೆಯಾದ ನಂತರ, ೧೯ನೆಯ ಶತಮಾನದಲ್ಲಿ ಯುರೋಪ್ ಮತ್ತು ೨೦ನೆಯ ಶತಮಾನದಲ್ಲಿ ಅಮೇರಿಕ ಇಲ್ಲಿಯೂ ತಮ್ಮ ಹಸ್ತಕ್ಷೇಪ, ಬಲಪ್ರಯೋಗ ಹಾಗೂ ನಿಯಂತ್ರಣಗಳ ವಿಧಾನವನ್ನೇ ಅನುಸರಿಸಿದವು. ಉದಾಹರಣೆಗೆ ಪಶ್ಚಿಮ ಏಷ್ಯದಲ್ಲೇ ಅತಿ ಹೆಚ್ಚು ತೈಲ ನಿಕ್ಷೇಪಗಳು ಇರುವ ದೇಶ, ಇರಾನ್. ಅಲ್ಲಿ ೧೯೫೧ರಲ್ಲಿ ನಡೆದ ಚುನಾವಣೆಯಲ್ಲಿ ಕಮ್ಯುನಿಸ್ಟ್ ಮತ್ತು ಸಮಾಜವಾದಿ ಪಕ್ಷಗಳ ಒಕ್ಕೂಟ ಬಹುಮತ ಪಡೆದು ಮೊಹಮ್ಮದ್ ಮೊಸಾಡೆಗ್ ನೇತೃತ್ವದಲ್ಲಿ ಸರಕಾರ ರಚಿಸಿತು. ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮೊಸಾಡೆಗ್ ಮಾಡಿದ ಮೊದಲ ಕೆಲಸವೆಂದರೆ, ಇರಾನ್‌ನ ತೈಲ ಬಾವಿಗಳಿಂದ ಬ್ರಿಟಿಷ್

### ಇರಾನ್‌ನಲ್ಲಿ ಅಮೆರಿಕಾ ರಾಜಕಾರಣದ ಕೈವಾಡ



ಮೊಸಡೆಗ್ ರೇಜಾ ಶಹಾಪಹ್ಲವಿ ಖೊಮೇನಿ


ಕಂಪೆನಿಗಳು ಹೊರ ತೆಗೆಯುತ್ತಿದ್ದ ಕಚ್ಚಾ ತೈಲದ ರಾಜಧನವನ್ನು ಹೆಚ್ಚಿಸಿದ್ದು. ಅದುವರೆಗೆ ಈ ಕಂಪೆನಿಗಳು ಇರಾನ್‌ಸರಕಾರಕ್ಕೆ ಹಾಸ್ಯಾಸ್ಪದವೆನ್ನಿಸುವಷ್ಟು ಕಡಿಮೆ ದರದ ರಾಜಧನವನ್ನು ಪಾವತಿಸುತ್ತಿದ್ದವು. ಆ ನಂತರ ಮೊಸಾಡೆಗ್ ಸರಕಾರ ತೈಲ ಬಾವಿಗಳನ್ನು ರಾಷ್ಟ್ರೀಕರಿಸಿತು.

ಬ್ರಿಟನ್ ಮತ್ತು ಅಮೇರಿಕ, ಮೊಸಾಡೆಗ್ ಸರಕಾರದ ಈ ಉದ್ಧಟತನವನ್ನು ಚೂರೂ ಸಹಿಸಲಿಲ್ಲ. ಅಮೇರಿಕದ ಸಿ.ಐ.ಎ. ಮತ್ತು ಬ್ರಿಟನ್‌ನ ಎಂ–೧೬ ಒಟ್ಟಾಗಿ ಮೊಸಾಡೆಗ್ ಸರಕಾರದ ವಿರುದ್ಧ ಒಳಸಂಚು ನಡೆಸಿದವು. ಅದಕ್ಕೆ ಇರಾನ್‌ನ ಸೈನ್ಯದ ಅಧಿಕಾರಿಗಳು ಹಾಗೂ ಇಸ್ಲಾಮ್‌ನ ಶಿಯಾ ಪಂಥದ ಧರ್ಮಗುರುಗಳ ಸಹಕಾರವೂ ಇತ್ತು. ಪ್ರಧಾನ ಮಂತ್ರಿ ಮೊಸಾಡೆಗ್‌ರನ್ನು ಸೆರೆಯಲ್ಲಿರಿಸಿ, ಅವರ ಸ್ಥಾನಕ್ಕೆ, ಇರಾನ್‌ನ ಅಳಿದುಳಿದ ರಾಜ ಮನೆತನಕ್ಕೆ ಸೇರಿದ ರೇಜಾ ಶಹಾಪಹ್ಲವಿ ಎಂಬ ಯಾರೂ ಕೇಳರಿಯದ ವ್ಯಕ್ತಿಯೊಬ್ಬನನ್ನು ನೇಮಿಸಲಾಯಿತು. ಹೀಗೆ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ಎಂಬ ಹೆಗ್ಗಳಿಕೆಯ ಅಮೇರಿಕ, ಇರಾನ್‌ನಲ್ಲಿ ಚುನಾಯಿತ ಸರಕಾರವೊಂದನ್ನು ಉರುಳಿಸಿ, ರಾಜನ ಆಳ್ವಿಕೆಯನ್ನು ಬಲಪ್ರಯೋಗದ ಮುಖಾಂತರ ಜ್ಯಾರಿಗೆ ತಂದಿತು. ಈ ರಾಜ ಮುಂದೆ ೧೯೭೯ರವರೆಗೆ ಅಮೇರಿಕ ಮತ್ತು ಬ್ರಿಟನ್‌ಗಳು ಹೇರಳವಾಗಿ ಸರಬರಾಜು ಮಾಡಿದ ಶಸ್ತ್ರಾಸ್ತ್ರ ಮತ್ತು ಆರ್ಥಿಕ ನೆರವಿನಿಂದ ನಿರಂಕುಶ ಆಳ್ವಿಕೆ ನಡೆಸಿದ. ತನ್ನ ರಾಜಕೀಯದ ವಿರೋಧಿಗಳನ್ನು ಅತ್ಯಂತ ಕ್ರೂರ ವಿಧಾನಗಳಿಂದ ಶಿಕ್ಷಿಸುವುದರಲ್ಲಿಯೂ ರೇಜಾ ಶಹಾಪಹ್ಲವಿ ಇರಾನ್‌ನಲ್ಲಿ ಒಂದು ದಾಖಲೆಯನ್ನೇ ನಿರ್ಮಿಸಿದ.

೧೯೭೯ರಲ್ಲಿ ಶಿಯಾ ಪಂಥದ ಅತ್ಯುನ್ನತ ಧರ್ಮಗುರು, ಆಯಾತೊಲ್ಲ ಖೊಮೇನಿ ನೇತೃತ್ವದಲ್ಲಿ ಪಹ್ಲವಿ ಆಳ್ವಿಕೆಯ ವಿರುದ್ಧ ಭಾರಿ ಜನಾಂದೋಲನ ನಡೆದು ಇರಾನ್‌ನಲ್ಲಿ ರಾಜವಂಶದ ಆಳ್ವಿಕೆ ಕೊನೆಗೊಂಡಿತು. ರೇಜಾ ಶಹಾಪಹ್ಲವಿ ದೇಶಬಿಟ್ಟು ಪಲಾಯನ ಮಾಡಿದ; ಧರ್ಮಗುರುಗಳ ಧಾರ್ಮಿಕಶಾಹಿಯ ನಿರಂಕುಶ ಆಳ್ವಿಕೆ ಪ್ರಾರಂಭವಾಯಿತು. ಪಹ್ಲವಿ ಆಳ್ವಿಕೆ ಜನ ವಿರೋಧಿಯಾಗಿತ್ತು. ಆದರೆ ಅಮೇರಿಕಕ್ಕೆ ನಿಷ್ಠೆ ಹೊಂದಿತ್ತು. ಈಗ ಇರಾನ್‌ನಲ್ಲಿ ಹೆಸರಿಗೆ ಒಂದು ಚುನಾಯಿತ ಸರಕಾರವಿದ್ದರೂ ಧರ್ಮಗುರುಗಳು ಪ್ರಭುತ್ವ ಮತ್ತು ನಾಗರಿಕ ಸಮಾಜಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುತ್ತಿದ್ದಾರೆ. ಆಳುವ ವ್ಯವಸ್ಥೆ ಮೊದಲಿನಷ್ಟೇ ಜನ ವಿರೋಧಿಯಾಗಿದೆ.

ಪಶ್ಚಿಮ ಏಷ್ಯದ ಇಸ್ಲಾಮಿಕ್ ದೇಶಗಳನ್ನು ಮಿಡ್ಲ್ ಈಸ್ಟ್ ಅಥವಾ ಮಧ್ಯಪ್ರಾಚ್ಯ ಎಂದು ಕರೆಯುವುದು ರೂಢಿಯಾಗಿದೆ. ಇದೊಂದು ವಸಾಹತುಶಾಹಿ ಬಳುವಳಿ. ಪಶ್ಚಿಮ ಏಷ್ಯ, ಮಧ್ಯ ಪ್ರಾಚ್ಯವಾಗಿರುವುದು ಲಂಡನ್, ಪ್ಯಾರಿಸ್ ಮತ್ತು ನ್ಯೂಯಾರ್ಕ್‌ಗಳಿಗೆ ಮಾತ್ರ. ಆದರೆ ಆ ನಮೂನೆಯ ಭಾಷೆಯ ಬಳಕೆ, ಈಗ ಇಂಗ್ಲೀಷ್ ಮೂಲಕ ಎಲ್ಲೆಡೆ ಚಲಾವಣೆಯಲ್ಲಿದೆ. ಅದು ಇರಾನ್ ಹೊರತು ಪಡಿಸಿ ಪಶ್ಚಿಮ ಏಷ್ಯದ ಇತರ ದೇಶಗಳನ್ನು ಮಾತ್ರವಲ್ಲ, ನಮ್ಮೆಲ್ಲರ ಯೋಚನಾಕ್ರಮಗಳನ್ನು ಸಹ ಅಮೇರಿಕ ನಿಯಂತ್ರಿಸುತ್ತಿರುವುದರ ಒಂದು ಸಣ್ಣ ವಿವರ ಮಾತ್ರ. ಈ ತಥಾಕಥಿತ "ಮಧ್ಯಪ್ರಾಚ್ಯ"ದ ತೈಲ ನಿಕ್ಷೇಪಗಳಿಂದ ತೈಲ ಹೊರತೆಗೆಯುವುದು, ಅದನ್ನು ಸಂಸ್ಕರಿಸುವುದು ಮತ್ತು ಅದರ ಉತ್ಪನ್ನಗಳನ್ನು ಜಗತ್ತಿನ ವಿವಿಧ ದೇಶಗಳಿಗೆ ಮಾರುವುದು– ಈ ಇಡೀ ಉದ್ಯಮ ಇಂದಿಗೂ ಅಮೇರಿಕ, ಇಂಗ್ಲೆಂಡ್ ಮತ್ತು ಸ್ವಲ್ಪಮಟ್ಟಿಗೆ ಪಶ್ಚಿಮ ಯುರೋಪ್‌ನ ಇತರ ದೇಶಗಳ ಬಹುರಾಷ್ಟ್ರೀಯ ಕಂಪೆನಿಗಳ ನಿಯಂತ್ರಣದಲ್ಲಿದೆ.


ಉದಾಹರಣೆಗೆ ತೈಲ ನಿಕ್ಷೇಪಗಳ ಮಟ್ಟಿಗೆ, ಪಶ್ಚಿಮ ಏಷ್ಯದಲ್ಲಿ ಇನ್ನೊಂದು ಸಂಪದ್ಭರಿತ ರಾಷ್ಟ್ರ ಸೌದಿ ಅರೇಬಿಯಾ. ಅಲ್ಲಿನ ಇಡೀ ತೈಲ ಉದ್ಯಮ ಆರಾಮ್‌ಕೊ ಎಂಬ ಅಮೇರಿಕದ ಕಂಪೆನಿಯ ಒಡೆತನದಲ್ಲಿದೆ. ಅದಕ್ಕೆ ಅನುವಾಗುವಂತೆ ಅಮೇರಿಕದ ಸರಕಾರ, ಸೌದಿ ಅರೇಬಿಯಾದಲ್ಲಿ ತನಗೆ ನಿಷ್ಟೆಯಿಂದ ನಡೆದುಕೊಳ್ಳುವ



## ಅಮೆರಿಕಾಕ್ಕೆ ತಿರುಗಿ ಬಿದ್ದು ಹತರಾದ ನಾಯಕರು



ಲಾಡೆನ್



ಸದ್ದಾಂ



ಗಡಾಫಿ

ರಾಜಮನೆತನದ ಸರಕಾರವನ್ನು ಸ್ಥಾಪಿಸಿದೆ. ಯಥಾ ಪ್ರಕಾರ ಅದಕ್ಕೆ ಹೇರಳವಾದ ಶಸ್ತ್ರಾಸ್ತ್ರಗಳನ್ನೂ, ತನ್ನ ಪ್ರಜೆಗಳ ವಿರುದ್ಧವೇ ಬೇಹುಗಾರಿಕೆ ನಡೆಸಲು ಬೇಕಾದ ಅತ್ಯಾಧುನಿಕ ಸಲಕರಣೆಗಳನ್ನೂ ಅಮೇರಿಕ ಒದಗಿಸಿದೆ. ಮುಸ್ಲಿಮರಿಗೆ ಪರಮ ಪವಿತ್ರ ಕ್ಷೇತ್ರಗಳಾದ ಮಕ್ಕಾ ಮತ್ತು ಮದೀನಾ ಸೌದಿ ಅರೇಬಿಯಾದಲ್ಲಿಯೇ ಇದ್ದುಅವುಗಳ ಉಸ್ತುವಾರಿಯನ್ನು ಸಹ ಈ ಸರ್ಕಾರನಡೆಸುತ್ತದೆ. ಇದರಿಂದ ಸೌದಿ ರಾಜ ಮನೆತನಕ್ಕೆ ಇಸ್ಲಾಮ್‌ನ ಹೆಸರಿನಲ್ಲಿ ಪ್ರಜೆಗಳಿಗೆ ಕನಿಷ್ಟ ಮಾನವ ಹಕ್ಕುಗಳನ್ನೂ ನಿರಾಕರಿಸಲು ಅನುಕೂಲವಾಗಿದೆ.

ಸೌದಿ ರಾಜಮನೆತನ, ಮಾಡುತ್ತಿರುವ ಇನ್ನೊಂದು ಕೆಟ್ಟ ಕೆಲಸವೆಂದರೆ ವಹಾಬಿ ಇಸ್ಲಾಮ್‌ನ ಉಚಿತ ರಫ್ತು. ಕಳೆದ ಹಲವು ದಶಕಗಳಿಂದ ತನ್ನಲ್ಲಿ ಹೇರಳವಾಗಿ ಸಂಗ್ರಹವಾದ ಪೆಟ್ರೋ ಡಾಲರುಗಳ ಒಂದು ಭಾಗವನ್ನು ಸೌದಿ ಅರೇಬಿಯಾ ಉಗ್ರ ಮೂಲಭೂತವಾದಿ ಪಂಥವಾದ ವಹಾಬಿ ಇಸ್ಲಾಮ್‌ನ ಪ್ರಸಾರಕ್ಕೆ ವಿನಯೋಗಿಸುತ್ತಿದೆ. ಇದು ಮಹಾ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಾದ ಇಂಗ್ಲೆಂಡ್ ಮತ್ತು ಅಮೇರಿಕಗಳ ಕಣ್ಗಾವಲಿನಲ್ಲೇ ನಡೆಯುತ್ತಿದೆ. ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ನೆವದಲ್ಲಿ ಇರಾಕ್‌ನಲ್ಲಿ ಸದ್ದಾಂ ಹುಸೇನ್ ಮತ್ತು ಲಿಬಿಯದಲ್ಲಿ ಗಡ್ಡಾಫಿ ಸರಕಾರಗಳನ್ನು ಉರುಳಿಸಿದ ಅಮೇರಿಕ, ಸೌದಿ ಅರೇಬಿಯಾ, ಬಹ್ರೈನ್ ಮುಂತಾದ ತನ್ನ ಮಿತ್ರ ದೇಶಗಳ ದಬ್ಬಾಳಿಕೆಯ ಸರಕಾರಗಳನ್ನು ರಕ್ಷಿಸುತ್ತಿದೆ.

ಸದ್ದಾಂ ಹುಸೇನ್ ಮತ್ತು ಗಡ್ಡಾಫಿ ಅಮೇರಿಕಕ್ಕೆ ತಿರುಗಿ ಬೀಳುವ ಮೊದಲು ಅದರ ಚೇಲಾಗಳೇ ಆಗಿದ್ದರು. ಸದ್ದಾಂ ಹುಸೇನ್ ಆಳ್ವಿಕೆಯ ಅವಧಿಯಲ್ಲಿ ಇರಾನ್ ವಿರುದ್ಧ ೧೦ ವರ್ಷಗಳ ಸುದೀರ್ಘ ಯುದ್ಧ ನಡೆಸಲು ಇರಾಕ್‌ಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟದ್ದು ಅಮೇರಿಕವೇ. ಅಮೇರಿಕದ ಮಿತ್ರರಾಗಿದ್ದಾಗಲೂ ಸದ್ದಾಂ ಹುಸೇನ್ ಮತ್ತು ಗಡ್ಡಾಫಿ ತಮ್ಮ ತಮ್ಮ ದೇಶಗಳ ಪ್ರಜೆಗಳ ಮಟ್ಟಿಗೆ ರಾಕ್ಷಸಪ್ರಾಯರೇ ಆಗಿದ್ದರು. ಆದರೆ ಯಾವಾಗ ಅವರಿಬ್ಬರೂ ಅಮೇರಿಕಕ್ಕೆ ತಿರುಗಿ ಬಿದ್ದರೋ, ಆಗ ಒಮ್ಮಿಂದೊಮ್ಮೆಗೇ ಅವರು ಖಳನಾಯಕರಾಗಿಬಿಟ್ಟರು! ಇದೇ ರೀತಿಯಲ್ಲಿ ಈಗ ಅಮೇರಿಕ ಮತ್ತು ಪಶ್ಚಿಮ ಯುರೋಪ್‌ನ ಪ್ರಚಾರ ಯಂತ್ರದ ಬಿಗಿ ಮುಷ್ಠಿಯಲ್ಲಿರುವ ಜಾಗತಿಕ ಮಾಧ್ಯಮ ಅಪಘಾನಿಸ್ತಾನ ಮೂಲದ ಇಸ್ಲಾಮಿಕ್ ಮೂಲಭೂತವಾದಿ ಸಂಘಟನೆಗಳಾದ ಅಲ್‌ಖಯಿದಾ ಮತ್ತು ತಾಲಿಬಾನ್‌ಗಳನ್ನು ಮನುಕುಲದ ಶತ್ರು ಎಂಬಂತೆ ಚಿತ್ರಿಸುತ್ತಿದೆ. ಅವೆರಡೂ ಕಣ್ಣು, ಕಿವಿ, ಬುದ್ದಿ, ಹೃದಯ ಯಾವುದೂ ಇಲ್ಲದ ಕೊಲೆಗಡುಕ ಸಂಘಟನೆಗಳು ಎಂಬುದು ನಿಜ. ಆದರೆ ಅವನ್ನು ಹುಟ್ಟು ಹಾಕಿ, ಹೇರಳ ಹಣ ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸಿ, ಆ ಪರಿ ಬೆಳೆಸಿದ್ದು ಅಮೇರಿಕದ ಸಿ.ಐ.ಎ. ಅಫಘಾನಿಸ್ತಾನದಿಂದ ೧೯೮೦ರ ದಶಕದಲ್ಲಿ ಸೋವಿಯತ್ ಆಕ್ರಮಣವನ್ನು ತೆರವುಗೊಳಿಸಲು ಅಮೇರಿಕಕ್ಕೆ ಅಲ್‌ಖಯಿದಾ, ತಾಲಿಬಾನ್, ಪಾಕಿಸ್ತಾನದ ಗೂಡಚರ್ಯೆಯ ಸಂಸ್ಥೆ ಐ.ಎಸ್.ಐ. ಇವೆಲ್ಲವುಗಳ ನೆರವು ಬೇಕಾಯಿತು. ಈಗ ಈ ಮೂರೂ ಅಮೇರಿಕಕ್ಕೆ ಕಂಟಕಪ್ರಾಯವಾಗಿವೆ.

ಯಾವ ಇಸ್ಲಾಮಿಕ್ ದೇಶದಲ್ಲೂ ಪ್ರಜಾಪ್ರಭುತ್ವ ತಲೆ ಎತ್ತದಂತೆ ಮಾಡುವುದರ ಜೊತೆಗೆ ಅಮೇರಿಕ, ಬ್ರಿಟನ್ ಮತ್ತು ಪಶ್ಚಿಮ ಯುರೋಪ್‌ನ ರಾಷ್ಟ್ರಗಳು ಒಟ್ಟಾಗಿ ಪಶ್ಚಿಮ ಏಷ್ಯದಲ್ಲಿ ಎಸಗಿದ ಇನ್ನೊಂದು ಘೋರ ಅಕೃತ್ಯವೆಂದರೆ ಇಸ್ರೇಲ್ ರಾಷ್ಟ್ರದ ಸ್ಥಾಪನೆ. ದ್ವಿತೀಯ ಮಹಾಯುದ್ಧದ ನಂತರ ಪಶ್ಚಿಮ ಏಷ್ಯದ ಪ್ಯಾಲೆಸ್ತೀನ್‌ನಲ್ಲಿ ಇಸ್ರೇಲ್ ಎಂಬ ಹೊಸ ರಾಷ್ಟ್ರವೊಂದನ್ನು ಬಲಪ್ರಯೋಗದ ಮೂಲಕ ಸ್ಥಾಪಿಸಲಾಯಿತು. ಇದರಲ್ಲಿ ಪ್ರಮುಖ ಪಾತ್ರವಹಿಸಿದ ಎರಡು ರಾಷ್ಟ್ರಗಳೆಂದರೆ ಅಮೇರಿಕ ಮತ್ತು ಬ್ರಿಟನ್. ನೂರಾರು ವರ್ಷಗಳಿಂದ, ಜಗತ್ತಿನ ಹಲವೆಡೆ ಮುಖ್ಯವಾಗಿ ಯುರೋಪ್‌ನ ವಿವಿಧ ದೇಶಗಳಲ್ಲಿ ಹರಿದು ಹಂಚಿ ಹೋಗಿದ್ದ ಯಹೂದಿಗಳು, ೨೦೦೦ ವರ್ಷಗಳ ಹಿಂದೆ ಅಂದರೆ ಕ್ರಿಸ್ತಪೂರ್ವದಲ್ಲಿ ತಾವು ತೊರೆದು ಹೋದ ಪ್ಯಾಲೆಸ್ತೀನ್‌ನಲ್ಲಿ ಮತ್ತೆ ನೆಲೆಗೊಂಡು, ಒಂದು ರಾಷ್ಟ್ರ ಪ್ರಭುತ್ವವಾಗಿ ರೂಪುಗೊಳ್ಳಬೇಕು ಎಂಬ ಚಳವಳಿ ೧೯ನೆಯ ಶತಮಾನದಲ್ಲಿ ಯುರೋಪ್‌ನ ವಿವಿಧ ದೇಶಗಳ ಯಹೂದಿ ಸಮುದಾಯಗಳಲ್ಲಿ ಹುಟ್ಟಿಕೊಂಡಿತು. ಝಿಯೋನಿಸಂ ಎಂದು ಕರೆಯಲಾಗುವ ಈ ಚಳುವಳಿಗೆ ರಾಷ್ಟ್ರ ನಿರ್ಮಾಣದ ಕನಸೇನೋ ಇತ್ತು. ಅದರ ಕಾರ್ಯಯೋಜನೆ ಇರಲಿಲ್ಲ. ಆದರೆ ೨೦ನೆಯ ಶತಮಾನದಲ್ಲಿ ದ್ವಿತೀಯ ಮಹಾಯುದ್ಧದ ನಂತರ ನಿರ್ಮಾಣಗೊಂಡ ಇಸ್ರೇಲ್, ಪ್ಯಾಲೆಸ್ತೀನ್‌ನಲ್ಲಿ ನೂರಾರು ವರ್ಷಗಳಿಂದ ವಾಸವಾಗಿದ್ದ ಅರಬ್ಬರು ಮತ್ತು ಕ್ರೈಸ್ತರನ್ನು ಬಲಪ್ರಯೋಗದಿಂದ ರಾತ್ರೋರಾತ್ರಿ ಒಕ್ಕಲೆಬ್ಬಿಸಿ, ಗಡೀಪಾರು ಮಾಡಿತು.

ಹೀಗೆ ೧೯ನೆಯ ಶತಮಾನದ ಒಂದು ಕನಸು, ೨೦ನೆಯ ಶತಮಾನದಲ್ಲಿ ಅತ್ಯಂತ ಹಿಂಸ್ರ ವಿಧಾನಗಳಿಂದ ಲಕ್ಷಾಂತರ ಜನರನ್ನು ನಿರಾಶ್ರಿತರನ್ನಾಗಿ ಮಾಡಿ ಐರೋಪ್ಯ ಮಾದರಿಯ ರಾಷ್ಟ್ರ ನಿರ್ಮಾಣದೊಂದಿಗೆ ಸಾಕಾರಗೊಂಡಿತು. ೧೯೪೮ರಲ್ಲಿ ಇಸ್ರೇಲ್ ಎಂಬ ಹೊಸ ರಾಷ್ಟ್ರ ಪ್ರಭುತ್ವ ಅಸ್ತಿತ್ವಕ್ಕೆ ಬಂದನಂತರ ಇವತ್ತಿನವರೆಗೆ ಸುಮಾರು ೧೦ಲಕ್ಷ ಪ್ಯಾಲೆಸ್ತೀನ್‌ನ ಮೂಲ ಅರಬ್‌ನವಾಸಿಗಳು, ನೆರೆಯ ಜೋರ್ಡನ್, ಸಿರಿಯ, ಈಜಿಪ್ಟ್, ಲೆಬನಾನ್ ಮುಂತಾದ ದೇಶಗಳ ನಿರಾಶ್ರಿತ ಶಿಬಿರಗಳಲ್ಲಿ ವಾಸಿಸುತ್ತಿದ್ದಾರೆ. ಸಾಲದ್ದಕ್ಕೆ, ಇಸ್ರೇಲ್ ನಿರಂತರವಾಗಿ ತನ್ನ ಗಡಿಗಳನ್ನು ಏಕಪಕ್ಷೀಯವಾಗಿ ವಿಸ್ತರಿಸುತ್ತ ಪ್ಯಾಲೆಸ್ತೀನ್‌ನ ಭೂಪ್ರದೇಶಗಳನ್ನು ಆಕ್ರಮಿಸುತ್ತಲೇ ಇದೆ. ನಿರಾಶ್ರಿತರ ಸಂಖ್ಯೆಯೂ ಬೆಳೆಯುತ್ತಿದೆ. ಅಸ್ತಿತ್ವಕ್ಕೆ ಬಂದಾಗಿನಿಂದಲೂ ಇಸ್ರೇಲ್‌ಗೆ ಅಮೇರಿಕ ಗರಿಷ್ಟ ಪ್ರಮಾಣದ ಆರ್ಥಿಕ ಹಾಗೂ ಮಿಲಿಟರಿ ನೆರವನ್ನು ಕೊಡುತ್ತಿದೆ. ಇಸ್ರೇಲ್ ಇಂದು ಪಶ್ಚಿಮ ಏಷ್ಯದಲ್ಲಿ ಅಣು ಅಸ್ತ್ರಗಳನ್ನು ಹೊಂದಿರುವ ಏಕೈಕ ರಾಷ್ಟ್ರ. ಆದರೆ ಇಸ್ರೇಲ್‌ಗೆ ಕಣ್ಣು ಮುಚ್ಚಿ ಬೆಂಬಲ ಕೊಡುವ ಅಮೇರಿಕ, ಇರಾನ್‌ನ ಅಣು ಕಾರ್ಯಕ್ರಮವನ್ನು ಮಾತ್ರ ಉಗ್ರವಾಗಿ ವಿರೋಧಿಸುತ್ತಿದೆ ಮಾತ್ರವಲ್ಲ; ಆ ದೇಶದ ವಿರುದ್ಧ ವಾಣಿಜ್ಯ ಮಿರ್ಬಂಧವನ್ನೂ ಜ್ಯಾರಿಗೊಳಿಸಿದೆ.

ಪ್ರಜಾಪ್ರಭುತ್ವ, ಮಾನವ 'ಹಕ್ಕು, ಹಿಂಸೆ, ಭಯೋತ್ಪಾದನೆ ಇತ್ಯಾದಿ ವಿಚಾರ ಹಾಗೂ ವಿದ್ಯಮಾನಗಳ ಬಗ್ಗೆ ಇವತ್ತು ಅಮೇರಿಕದ ನಿರೂಪಣೆಗಳು ಇಡೀ ಜಗತ್ತನ್ನೇ ಆಳುತ್ತಿವೆ. ನಮ್ಮ ದೇಶದ ಮಾಧ್ಯಮಗಳಿಗೂ ಈಗ ಅಮೇರಿಕವೇ ಹಿರಿಯಣ್ಣ. ಪ್ರಜಾಪ್ರಭುತ್ವ, ಮಾನವ ಹಕ್ಕು ಇತ್ಯಾದಿಗಳ ಬಗ್ಗೆ ಅಮೇರಿಕದ ಸ್ವಘೋಷಿತ ಬದ್ಧತೆಯನ್ನು ಒಪ್ಪಿಕೊಳ್ಳುವ ಮೊದಲು ೧೯ನೆಯ ಶತಮಾನದ ಯುರೋಪ್‌ನ ವಸಾಹತುಶಾಹಿ ಮತ್ತು ೨೦ನೆಯ ಶತಮಾನದಲ್ಲಿ ಅದರದ್ದೇ ಮುಂದುವರಿಕೆಯಾಗಿರುವ ಅಮೇರಿಕದ ಸಾಮ್ರಾಜ್ಯಶಾಹಿ, ಏಷ್ಯ, ಆಫ್ರಿಕ



ಗಾಜಾದಲ್ಲಿ ಇಸ್ರೇಲಿ ಬಾಂಬ್ ದಾಳಿಯ ದಾರುಣ ಚಿತ್ರ


ಮತ್ತು ದಕ್ಷಿಣ ಅಮೇರಿಕ ಖಂಡಗಳಲ್ಲಿ ನಡೆಸಿರುವ ಘೋರ ಹಿಂಸೆಯ ಕೆಲವು ಮುಖ್ಯ ವಿವರಗಳನ್ನಾದರೂ ಗಮನಿಸಲೇಬೇಕು. ಬ್ರಿಟನ್, ಫ್ರಾನ್ಸ್, ಸ್ಪೇನ್ ಮುಂತಾದ ಯುರೋಪ್‌ನ ರಾಷ್ಟ್ರಗಳ ವಸಾಹತುಶಾಹಿ ತನ್ನ ವಸಾಹತುಗಳಲ್ಲಿ ನಡೆಸಿದ ದುರಾಡಳಿತ ಕ್ರೌರ್ಯ ಮತ್ತು ನರಮೇಧಗಳ ಪೂರ್ತ ವಿವರಗಳು ಈಗಲೂ ಹೊರಬಿದ್ದಿಲ್ಲ. ಉದಾಹರಣೆಗೆ ಆಫ್ರಿಕ ಖಂಡದ ಕೀನ್ಯಾ ಮತ್ತು ತನ್ನ ಇತರ ವಸಾಹತುಗಳಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು, ಬ್ರಿಟನ್ ನಡೆಸಿದ ನರಮೇಧದ ವಿವರಗಳು ಇತ್ತೀಚೆಗಷ್ಟೆ–ಅದು ಕೂಡ ಬ್ರಿಟನ್‌ನ ವರಿಷ್ಠ ನ್ಯಾಯಾಲಯದ ಆಜ್ಞೆಯ ಮೇರೆಗೆ–ಬಹಿರಂಗಗೊಂಡಿವೆ.

೨೦ನೆಯ ಶತಮಾನದಲ್ಲಿ ಅಮೇರಿಕದ ಸಾಮ್ರಾಜ್ಯಶಾಹಿ, ಯುರೋಪ್‌ನ ವಸಾಹತು ಶಾಹಿಯ ಕ್ರೌರ್ಯ ಮತ್ತು ನರಮೇಧಗಳ ಪರಂಪರೆಯನ್ನೇ ಮುಂದುವರಿಸಿದೆ. ಇವತ್ತಿಗೂ ಜಗತ್ತಿನಲ್ಲಿ ನಾಗರಿಕರ ನೆಲೆಗಳ ಮೇಲೆ ಅಣುಅಸ್ತ್ರವನ್ನು–ಅದು ಕೂಡ ಅನವಶ್ಯಕವಾಗಿ– ಪ್ರಯೋಗಿಸಿ ಲಕ್ಷಾಂತರ ಜನರನ್ನು ಕೊಂದು ಹಾಕಿರುವ ಏಕೈಕ ರಾಷ್ಟ್ರ ಅಮೇರಿಕ. ೧೯೬೫–೬೬ರ ಅವಧಿಯಲ್ಲಿ ಅಮೇರಿಕ ಇಂಡೋನೇಷಿಯಾದಲ್ಲಿ ಅಲ್ಲಿನ ಕಮ್ಯುನಿಸ್ಟ್ ಚಳವಳಿಯನ್ನು ಹತ್ತಿಕ್ಕಲು, ೫ ಲಕ್ಷಜನ ಬಡ ರೈತರನ್ನು ಕೊಲ್ಲಿಸಿತು. ಆನಂತರ ಅಲ್ಲಿ ಆಳ್ವಿಕೆ ನಡೆಸಿದ ಅಮೇರಿಕದ ಕೈಗೊಂಬೆ ಸರಕಾರ, ಜನರಲ್ ಸುಹರ್ತೊ ಎಂಬ ಸೇನಾಧಿಕಾರಿಯ ನಾಯಕತ್ವದಲ್ಲಿ ೩೨ ವರ್ಷಕಾಲ ಆಳ್ವಿಕೆ ನಡೆಸಿತು. ಆಗ್ನೇಯ ಏಷ್ಯದ ಇನ್ನೊಂದು ಸಣ್ಣ ದೇಶ ವಿಯೆಟ್‌ನಾಮ್ ಮೇಲೆ ಅಮೇರಿಕ ಹಲವು ದಶಕಗಳ ಕಾಲ ನಿರಂತರವಾಗಿ ನಡೆಸಿದ ಯುದ್ಧದಲ್ಲಿ ೨೦ ಲಕ್ಷ ಸಾಮಾನ್ಯ ವಿಯೆಟ್‌ನಾಮಿ ಪ್ರಜೆಗಳನ್ನು ಕೊಂದಿತು. ತನ್ನ ೫೬೦೦೦ ಸೈನಿಕರನ್ನೂ ಆ ಯುದ್ಧದಲ್ಲಿ ಬಲಿಕೊಟ್ಟಿತು. ೧೯೯೧ರಿಂದ ಇರಾಕ್ ಮೇಲೆ ಸತತವಾಗಿ ನಡೆಸಿದ ಯುದ್ಧದಲ್ಲಿ ಅಮೇರಿಕ ಸುಮಾರು ೧೧ ಲಕ್ಷ ಜನ ಇರಾಕಿ ಪ್ರಜೆಗಳನ್ನು ಕೊಂದು ಹಾಕಿದೆ. ತನ್ನದೇ ಆದ **"ಪ್ರಭುತ್ವದ ಕಾರಣಗಳಿಗಾಗಿ"** *(ಫಾರ್ ದಿ ರೀಸನ್ಸ್ ಆಫ್ ದಿ ಸ್ಟೇಟ್– ಇದು ನೋಮ್ ಚೋಮ್‌ಸ್ಕಿಯವರ ಒಂದು ಪುಸ್ತಕದ ಶೀರ್ಷಿಕೆ).*


ಇತರ ದೇಶಗಳ ಪ್ರಜೆಗಳನ್ನು ಕೊಲ್ಲಲು ಹಿಂದೆ ಮುಂದೆ ನೋಡದ ಅಮೇರಿಕ ೨೦೦೧ರ ಸೆಪ್ಟೆಂಬರ್ ೧೧ರಂದು ಉಗ್ರಗಾಮಿಗಳು ನ್ಯೂಯಾರ್ಕ್‌ನ ವಾಣಿಜ್ಯ ಕೇಂದ್ರ ಮತ್ತು ಇತರ ಸ್ಥಾವರಗಳ ಮೇಲೆ ನಡೆಸಿದ ಬಾಂಬ್ ದಾಳಿಗಳನ್ನು ಜಗತ್ತು ಇದುವರೆಗೆ ಕಂಡು ಕೇಳರಿಯದ ದುಷ್ಕೃತ್ಯವೆಂದು ಬಣ್ಣಿಸುತ್ತದೆ ಮತ್ತು ಅದಕ್ಕೆ ಇಸ್ಲಾಮಿಕ್ ಭಯೋತ್ಪಾದನೆ ಎಂದು ನಾಮಕರಣ ಸಹ ಮಾಡಿದೆ. ಆದರೆ ಇನ್ನೊಂದು ಸೆಪ್ಟೆಂಬರ್ ೧೧ರಂದು ತಾವು ನಡೆಸಿದ ಘೋರ ಕೃತ್ಯವೊಂದು ಅಮೇರಿಕದ ಆಳುವವರಿಗೆ ಮರೆತು ಹೋಗಿದೆ. ೧೯೭೩ರ ಸೆಪ್ಟೆಂಬರ್ ೧೧ರಂದು ದಕ್ಷಿಣ ಅಮೇರಿಕದ ಚಿಲಿಯಲ್ಲಿ ಸಾಲ್ವೆಡೋರ್ ಅಲೆಂಡೆಯವರ(ನೊಬೆಲ್ ಪ್ರಶಸ್ತಿ ಪುರಸ್ಕೃತ ಕವಿ ಪ್ಯಾಬ್ಲೋ ನೆರೂಡಾನ ಆಪ್ತ ಮಿತ್ರ) ಚುನಾಯಿತ ಎಡಪಂಥೀಯ ಸರಕಾರವನ್ನು ಅಮೇರಿಕದ ಸಿ.ಐ.ಎ. ಉರುಳಿಸಿ, ದೇಶದಲ್ಲಿ ತನ್ನ ಕೈಗೊಂಬೆ ಜ॥ ಪಿನೋಶಿಟ್‌ನ ನೇತೃತ್ವದ ಸೈನ್ಯದ ಆಡಳಿತವನ್ನು ಸ್ಥಾಪಿಸಿತು. ಅಲೆಂಡೆಯವರನ್ನು ಗುಂಡಿಟ್ಟು ಕೊಲ್ಲಲಾಯಿತು. ಚಿಲಿಯ ರಾಜಧಾನಿ ಸಾಂಟಿಯಾಗೋದ ಫುಟ್‌ಬಾಲ್ ಸ್ಟೇಡಿಯಂ ಒಂದನ್ನು ಬಯಲು ಬಂಧೀಖಾನೆಯನ್ನಾಗಿ ಮಾಡಿ ಸಾವಿರಾರು ಪ್ರಜೆಗಳನ್ನು ಅಲ್ಲಿಗೆ ಸೈನಿಕರು ಎಳೆದೊಯ್ದರು. ಆ ಸೇನಾ ದಂಗೆಯಲ್ಲಿ ೬೦ ಸಾವಿರ ಜನ ಕೊಲೆಯಾದರು. ೨೦೦೧ ಸೆಪ್ಟೆಂಬರ್ ೧೧ರ ವೈಮಾನಿಕ ದಾಳಿಯಲ್ಲಿ ಸಾವಿಗೀಡಾದ ಅಮೇರಿಕನ್ ಪ್ರಜೆಗಳ ಜೀವ ಮಾತ್ರ ಅಮೂಲ್ಯವಾದದ್ದು; ಆದರೆ ತೃತೀಯ ಜಗತ್ತಿನ ದೇಶಗಳಲ್ಲಿ ತಾನು ನಡೆಸಿದ ರಾಜಕೀಯ ಹಸ್ತಕ್ಷೇಪಗಳಲ್ಲಿ ಬಲಿಯಾದವರು ಮನುಷ್ಯ ಜೀವಗಳೇ ಅಲ್ಲ ಎಂಬಂತೆ ಅಮೇರಿಕ ವರ್ತಿಸುತ್ತದೆ; ಪ್ರಜಾಪ್ರಭುತ್ವ, ಮಾನವಹಕ್ಕು, ಸ್ವಾತಂತ್ರ್ಯ ಮುಂತಾದ ವಿಚಾರಗಳ ಬಗ್ಗೆ ಅದರ ವಿವರಣೆಗಳಿಗೂ ವಾಸ್ತವದ ಜಗತ್ತಿನಲ್ಲಿ ಅದು ನಡೆದುಕೊಳ್ಳುತ್ತಿರುವ ರೀತಿಗೂ ಅರ್ಥಾರ್ಥ ಸಂಬಂಧವೇ ಇಲ್ಲ.



**ಚಿಲಿಯಲ್ಲಿ ಸೇನಾ ಸರ್ವಾಧಿಕಾರ ಸ್ಥಾಪನೆ**



**ಅಧ್ಯಕ್ಷ ಅಲೆಂಡೆ**



**ಕವಿ ನೆರೂಡಾ**



**ಜ॥ ಪಿನೊಶಿಟ್**

ಅಮೇರಿಕದ ರಾಜಕಾರಣದ ಈ ಕ್ರೌರ್ಯ ಮತ್ತು ಅದರ ಆದರ್ಶಗಳ ಸೋಗಲಾಡಿತನ ಅಲ್ಲಿನ ಆಳುವ ವರ್ಗದ ಇರಸ್ತಿಕೆಗೆ ಅನಿವಾರ್ಯವಾಗಿದೆ. ಆದರೆ ಭಾರತದಂತಹ ಹೇಳಿ ಕೇಳಿ ಮೂರನೆಯ ಜಗತ್ತಿನ ಬಡದೇಶದ ಮಾಧ್ಯಮಗಳು ಮತ್ತು ಇಲ್ಲಿನ ಆಳುವ ವರ್ಗ, ಅಮೇರಿಕದ ಚಮಚಾಗಿರಿ ನಡೆಸುವುದರ ಮರ್ಮವೇನು? ೨೦೦೧ ಸೆಪ್ಟೆಂಬರ್ ೧೧ರಂದು ನಡೆದದ್ದು ಇಸ್ಲಾಮಿಕ್ ಭಯೋತ್ಪಾದಕ ಕೃತ್ಯವೇ ಹೌದಾದರೆ, ಕಳೆದ ಎರಡು ಶತಮಾನಗಳಲ್ಲಿ ಯುರೋಪ್ ಮತ್ತು ಅಮೇರಿಕ ಜಗತ್ತಿನಾದ್ಯಂತ ನಡೆಸಿದ ಹಿಂಸೆಯನ್ನು ಯಾವುದರ ಜೊತೆಗೆ ತಳಕು ಹಾಕುವುದು? ಭಯೋತ್ಪಾದನೆ ಎಂಬ ಸಮಸ್ಯೆಯೇ ಇಲ್ಲ ಎಂಬುದು ಯಾರ ವಾದವೂ ಅಲ್ಲ; ಅದನ್ನು ವಹಿಸಿಕೊಂಡು ಮಾತಾಡಲೂ ಕೂಡದು. ಹಾಗೆಯೇ ಸೆಪ್ಟೆಂಬರ್ ೧೧, ೨೦೦೧ ರಂದು ತೀರಿಕೊಂಡ ಜೀವಗಳ ಅನನ್ಯತೆ ಮತ್ತು ಅಮೂಲ್ಯತೆಗಳನ್ನು ಸಹ ನಾವು ಎಂದಿಗೂ ಕಡೆಗಣಿಸಕೂಡದು. ಆದರೆ ನಮ್ಮ ಸಂತಾಪ, ಆಧುನಿಕ ಯುಗದಲ್ಲಿ ಅಮೇರಿಕ ಮತ್ತು ಪಶ್ಚಿಮ ಯುರೋಪ್ ಇಸ್ಲಾಮಿಕ್ ದೇಶಗಳೂ ಸೇರಿದಂತೆ ಜಗತ್ತಿನಾದ್ಯಂತ ನಡೆಸಿದ ಅನ್ಯಾಯ, ಅಕ್ರಮ ಹಾಗೂ ಜೀವಹಿಂಸೆಗಳನ್ನು ಮರೆಮಾಚುವಂತಾಗಬಾರದು. ಜೊತೆಗೆ ಭಯೋತ್ಪಾದನೆಯನ್ನು ಇಸ್ಲಾಮ್‌ಗೆ ಜೊತೆ ತಳಕು ಹಾಕುವುದೇ ಆದರೆ ಅದನ್ನು ಕ್ರೈಸ್ತ, ಹಿಂದೂ, ಯಹೂದಿ ಮತ್ತು ಬೌದ್ಧ ಧರ್ಮಗಳ ಜೊತೆ ಜೋಡಿಸುವುದಕ್ಕೂ ಅಷ್ಟೇ ಒಳ್ಳೆಯ ಕಾರಣಗಳಿವೆ ಎಂಬುದನ್ನೂ ಸಹ ನಾವು ಒಪ್ಪಿಕೊಳ್ಳಬೇಕು.

ಯಾವ ಇಸ್ಲಾಮಿಕ್ ದೇಶವೂ ಅಮೇರಿಕದ ಹಾಗೆ ಜಗತ್ತಿನಾದ್ಯಂತ ಮಿಲಿಟರಿ ನೆಲೆಗಳನ್ನು ಹೊಂದಿಲ್ಲ;ಯಾವ ಇಸ್ಲಾಮಿಕ್ ದೇಶವೂ ಇನ್ನೊಂದು ದೇಶದ ನಾಗರಿಕರ ಮೇಲೆ ಅಣುಬಾಂಬ್ ಹಾಕಿಲ್ಲ. ೧೯ ಮತ್ತು ೨೦ನೆಯ ಶತಮಾನಗಳಲ್ಲಿ ಬ್ರಿಟನ್, ಫ್ರಾನ್ಸ್, ಸ್ಪೇನ್ ಮತ್ತು ಅಮೇರಿಕಗಳು ನಡೆಸಿರುವ ಕಗ್ಗೊಲೆಗಳಲ್ಲಿ ನೂರನೆಯ ಒಂದರಷ್ಟು ಕೊಲೆಗಳನ್ನು ಸಹ ಯಾವ ಇಸ್ಲಾಮಿಕ್ ದೇಶವೂ ನಡೆಸಿಲ್ಲ. ಆದಾಗ್ಯೂ ಇಸ್ಲಾಮಿಕ್ ಭಯೋತ್ಪಾದನೆ ಎಂಬ ನುಡಿಗಟ್ಟು ಚಾಲ್ತಿಯಲ್ಲಿದೆ; ಯಾಕೆ ಕ್ರೈಸ್ತ ಭಯೋತ್ಪಾದನೆ ಬಗ್ಗೆ ಯಾರೂ ಮಾತಾಡುವುದಿಲ್ಲ? ಇಸ್ಲಾಮಿಕ್ ಭಯೋತ್ಪಾದನೆ ಎಂಬುದು ಇರುವುದೇ ಹೌದಾದರೆ ಅದನ್ನು ಸೌದಿ ಅರೇಬಿಯಾ ಇರಾನ್, ಇರಾಕ್, ಪೆಲೆಸ್ತೀನ್, ಈಜಿಪ್ಟ್, ಅಫಘಾನಿಸ್ತಾನ ಮತ್ತು ಪಾಕಿಸ್ತಾನಗಳಲ್ಲಿ ಹುಟ್ಟುಹಾಕಿ ಬೆಳೆಸಿದ್ದು ನಿಸ್ಸಂದೇಹವಾಗಿ ಅಮೇರಿಕ ತನ್ನದೇ ಆದ 'ಪ್ರಭುತ್ವದ ಕಾರಣಗಳಿಗಾಗಿ'.

ಸೆಪ್ಟೆಂಬರ್ ೧೧, ೨೦೦೧ರಂದು ಅಮೇರಿಕದ ಮೇಲೆ ಉಗ್ರಗಾಮಿಗಳ ಬಾಂಬ್ ದಾಳಿ ನಡೆಯಿತು. ೧೯೭೩ರ ಸೆಪ್ಟೆಂಬರ್ ೧೧ರಂದು ಅಮೇರಿಕ ಚಿಲಿಯ ಚುನಾಯಿತ ಸಮಾಜವಾದಿ ಸರಕಾರವನ್ನು ಉರುಳಿಸಿ, ಅಧ್ಯಕ್ಷ ಅಲೆಂಡೆಯವರನ್ನೂ ಕೊಲ್ಲಿಸಿತು. ಇನ್ನೊಂದು ಸೆಪ್ಟೆಂಬರ್ ೧೧ ಅಂದರೆ ೧೯೦೬ರ ಸೆಪ್ಟೆಂಬರ್ ೧೧ ರಂದು ದಕ್ಷಿಣ ಆಫ್ರಿಕಾ ಜೊಹಾನ್ಸ್‌ಬರ್ಗ್‌ನಲ್ಲಿ ಮಹಾತ್ಮಾಗಾಂಧಿ, ಸ್ಥಳೀಯ ಸರಕಾರದ ವರ್ಣಭೇದ ನೀತಿಯ ವಿರುದ್ಧ ತನ್ನ ಮೊತ್ತ ಮೊದಲ ಸತ್ಯಾಗ್ರಹ ಪ್ರಾರಂಭಿಸಿದರು. ಆ ನೆವದಲ್ಲಾದರೂ ನಾವು ಪಶ್ಚಿಮದ ಹಿಂಸೆಯ ಚರಿತ್ರೆಯನ್ನು ನೆನಪಿಸಿಕೊಳ್ಳಬೇಕು. *

# ಸೆಕ್ಯುಲರಿಸ್ಟೊಬ್ಬನ ತಲ್ಲಣ, ಮನದ ಮಾತು

**ಇದು ಸೆಕ್ಯುಲರಿಸಮ್ ಮತ್ತು ಭಾರತದ ಮುಸ್ಲಿಮರನ್ನು ಕುರಿತ ಪ್ರಬಂಧ. ಮೊದಲಿಗೇ ಹೇಳಿಬಿಡುತ್ತೇನೆ, ಈಚಿನ ಕೆಲವು ಆಗುಹೋಗುಗಳಿಂದಾಗಿ ಈ ಲೇಖನವನ್ನು ಬರೆಯುವುದು ನಿಜಕ್ಕೂ ಕಷ್ಟವಾಗುತ್ತಿದೆ.–ಲೇಖಕ**

**ಶಿವ ವಿಶ್ವನಾಥನ್**
**ಅನುವಾದ: ರಘುನಂದನ**



**ಸು**ರುವಿನಿಂದ ಸುರು ಮಾಡುತ್ತೇನೆ. ನಾನು ಹುಟ್ಟಿದ್ದು ಜಮಶದ್‌ಪುರದಲ್ಲಿ. ಅಲ್ಲಿನ ಪೇಟೆ, ಗಲ್ಲಿಗಳಲ್ಲಿ ಮೇಲಿಂದಮೇಲೆ ಗಲಭೆಯಾಗುವುದನ್ನು ಕಂಡಿದ್ದೇನೆ. ನನ್ನ ಸಹಪಾಠಿ ಒಬೈದುಲ್ ಇಸ್ಲಾಮ್ ಕಡೆಯ ಸಲ ಶಾಲೆಗೆ ಬಂದ ಆ ದಿನ ನನಗಿನ್ನೂ ನೆನಪಿದೆ. ಮನೆಮಂದಿಯೊಡನೆ ಪಾಕಿಸ್ತಾನಕ್ಕೆ ವಲಸೆ ಹೋಗುತ್ತಿದ್ದೇನೆ ಅನ್ನುತ್ತ ನನ್ನ ಬಳಿ ಅಲವತ್ತುಕೊಂಡ ಅವನು. ನೂರು ಮೀಟರ್ ಓಟದ ಮಿನುಗು ತಾರೆಯಾಗಿದ್ದ ಆ ನನ್ನ ಒಬೈದುಲ್‌ನನ್ನು ಹಿಂದಿಕ್ಕೋಣವೆಂದು ಈಗಲೂ ನೋಡುತ್ತೇನೆ; ಆಗುತ್ತಿಲ್ಲ.

ವಯಸ್ಸಾಗುತ್ತ ಆಗುತ್ತ ೧೯೯೨ರ ಮುಂಬೈ ಗಲಭೆಗಳನ್ನು ಕಂಡೆ; ೨೦೦೨ರ ಗುಜರಾತ್ ನರಮೇಧ ಕಂಡೆ; ನಮ್ಮ ಬಹುಸಂಖ್ಯಾತ ಮತಧರ್ಮದ ಜನರು, "ಪ್ರಜಾಪ್ರಭುತ್ವವೆಂದರೆ ಹರಳೆಣ್ಣೆ ಕುಡಿದಂತೆ; ಆರೋಗ್ಯಕ್ಕೆ ಒಳ್ಳೆಯದೇನೋ ಹೌದು, ಆದರೆ ಹೇಗಪ್ಪ ಅದನ್ನು ಕುಡಿಯೋದು" ಎಂಬಂತೆ ಆಡುವುದನ್ನು ಕಂಡೆ; ವಿಷಣ್ಣನಾದೆ. ಗುಜರಾತ್ ಹಿಂಸಾಕಾಂಡದ ಹಿಂದುಮುಂದುಗಳ ಅಧ್ಯಯನಮಾಡುವಾಗ, ಆ ಹಿಂಸಾಚಾರಕ್ಕೆ ತುತ್ತಾಗಿ ಅಳಿದುಳಿದ ಮುಸ್ಲಿಮ್ ಸಮುದಾಯವು ಕಾನೂನಿನ ಪರಿಪಾಲನೆಯನ್ನು ನೆಚ್ಚಿಕೊಂಡು ಹೊಸದೊಂದು ನಾಗರಿಕ ಜೀವನ ಕಟ್ಟಿಕೊಂಡದ್ದನ್ನು ಕಂಡೆ. ಬರೋಡಾ ವಿಶ್ವವಿದ್ಯಾಲಯದಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕರಾಗಿದ್ದ ಶ್ರೀ ಬಂದೂಕ್‌ವಾಲಾ ಅವರು, ಹಿಂದೂಗಳನ್ನು ಉದ್ದೇಶಿಸಿ, 'ನೀವಾಗಿ ಕ್ಷಮೆ ಕೇಳದಿದ್ದರೂ ಪರವಾಗಿಲ್ಲ. ನಾನು ನಿಮ್ಮನ್ನು ಕ್ಷಮಿಸಿದ್ದೇನೆ" ಎಂದದ್ದನ್ನು ಕೇಳಿ, ಅರೇ ಹಾಗಾದರೆ ಸೆಕ್ಯುಲರಿಸಮ್ಮೆಂದರೆ ಏನು ಎಂಬ ಚಿಂತೆಗೊಳಗಾದೆ.

ನನ್ನ ಸೆಕ್ಯುಲರ್ ಸ್ನೇಹಿತರೋ, ವಿಲಕ್ಷಣ ಜಾತಿವಾದವೊಂದರ ಹಾದಿ ಹಿಡಿದಿದ್ದರು. ಗಲಭೆಗಳು ನಿಂತಮೇಲೆ, ಅವರು, ಮುಸ್ಲಿಮರನ್ನು ಮಾತ್ರ ಮಾತನಾಡಿಸುತ್ತಿದ್ದರು. ಮುಸ್ಲಿಮರಂತೆಯೇ ಹಿಂಸೆಗೊಳಗಾದ ಹಿಂದೂಗಳು ಅವರ ಕಣ್ಣಿಗೆ ಬೀಳದೇಹೋದರು. ಸೆಕ್ಯುಲರಿಸಮ್ ಅನ್ನುವುದು ತಾನೇ ಒಂದು ಥರದ ಜಾತಿಕೇರಿ ಆಗುತ್ತಿದೆಯೆಂದು ತೋರಿತು. ಆ ಕೇರಿಯ ಜನರಿಗೆ, ಒಂದು ಸಮುದಾಯದ ಜನರ ದುಕ್ಕದುಮ್ಮಾನ ದೊಡ್ಡದೆನ್ನಿಸುತ್ತದೆ, ಮತ್ತೊಬ್ಬರದು ಸಣ್ಣದನ್ನಿಸುತ್ತದೆ ಎಂದು ತೋರಿತು. ಇನ್ನೂ ಬೇಸರದ ವಿಷಯವೆಂದರೆ, ಸೆಕ್ಯುಲರಿಸಮ್ ಅನ್ನುವುದು ಬರಿದೇ ಬುಡುಬುಡಿಕೆಯಾಟವಾಗಿದೆ, ತನಗಿಂತ ಬೇರೆಯಾದುದರೊಂದಿಗೆ ಮಾತುಕತೆ ನಡೆಸಲು ಒಲ್ಲದಾಗಿದೆ ಅನ್ನಿಸತೊಡಗಿತು. ವಿಶಾಲ ತತ್ತ್ವದರ್ಶನವಿಲ್ಲದ ಯಂತ್ರತಂತ್ರಗಳ ಶಾಸ್ತ್ರವಿಧಿಯಾಗಿದೆ ಅದು, ರಾಜಕೀಯ ಮಡಿವಂತಿಕೆಯ ಒಂದು ಬಗೆಯಾಗಿದೆ; ಅಲ್ಲಿನ ಹರಕೆ ಹಾರೈಕೆಯ ಪದವೆಲ್ಲ ಅಲ್ಪಸಂಖ್ಯಾತರ ಮಕ್ಕಳ ಒಳಿತಿಗಾಗಿ ಮೀಸಲು; ಸತ್ಯ ಅನ್ನುವುದು ಅಲ್ಲಿ ಬೇಡವೇ ಆಗಿ, ಎತ್ತಲೋ ಹಾರಿಹೋಗಿದೆ ಅನ್ನಿಸತೊಡಗಿತು.

ಈ ಸೆಕ್ಯುಲರಿಸಮ್ ಅನ್ನುವುದು ವಿಜ್ಞಾನಕ್ಕೂ ಆಸ್ತಿಕ ಮತಧರ್ಮಕ್ಕೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳಲಾರದೆ ಎಡವಿದೆ. ಕಡೇಪಕ್ಷ ಆವೊಂದು ವಿಷಯದಲ್ಲಿಯಾದರೂ, ಸೆಕ್ಯುಲರಿಸಮ್ ಅನ್ನುವುದು ಇತಿಹಾಸವನ್ನು ಕುರಿತಾದ ತೀರ ತಪ್ಪು ತಿಳಿವಳಿಕೆಯ ಮೇಲೆ ನಿಂತಿದೆ. ಅದರಿಂದಾಗಿ, ವಿಜ್ಞಾನ ಮತ್ತು ಆಸ್ತಿಕ ಮತಧರ್ಮಗಳನ್ನು



ಸುಳ್ಳುಸುಳ್ಳೇ ಎದುರು ಬದುರು ನಿಲ್ಲಿಸಿ, ಸುಖಾಸುಮ್ಮನೆ ಅವುಗಳ ನಡುವೆ ಕಾದಾಟದ ಕಿಡಿ ಹಚ್ಚಲಾಗಿದೆ. ವಿಜ್ಞಾನ ಮತ್ತು ಆಸ್ತಿಕ ಮತಧರ್ಮದ ನಡುವೆ ಜಗಳವಿದೆ, ಇರಬೇಕು ಎಂದು ಹೇಳುವ ಬರಹಗಳು ಬರಲು ಸುರುಮಾಡಿದ್ದು ಆಧುನಿಕ ವಿಶ್ವವಿದ್ಯಾಲಯಗಳ ಮೇಲೆ ಅಧಿಕಾರ ಸಂಪಾದಿಸಲು ವಿಜ್ಞಾನಿಗಳು ಮತ್ತು ದೇವತಾಶಾಸ್ತ್ರಜ್ಞರ ನಡುವೆ ನಡೆದ ಪೈಪೋಟಿಯಿಂದ. ಈ ಇಬ್ಬಣದವರೂ ಇತಿಹಾಸವನ್ನು ಬರೆದದ್ದು ತಾವು ತಾವು ಹೇಳುತ್ತಿರುವುದೇ ಸರಿ ಎಂದು ಸಾಬೀತು ಮಾಡಲು. ಅದರಿಂದಾಗಿ, ವಿಜ್ಞಾನ ಮತ್ತು ಆಸ್ತಿಕ ಮತಧರ್ಮಗಳೆರಡೂ ಒಂದಕ್ಕೊಂದು ಪೂರಕವಾಗಿರುತ್ತ, ಸೃಜನಶೀಲವಾದ್ದನ್ನು ಮಾಡುತ್ತ ಬಂದಿವೆ ಅನ್ನುವ ತಿಳಿವಳಿಕೆಯೇ ನಾಶವಾಗಿಬಿಟ್ಟಿದೆ.

ನನಗನ್ನಿಸುವಂತೆ, ಭಾರತೀಯ ಸೆಕ್ಯುಲರಿಸಮ್ ಅನ್ನುವುದು ಆಸ್ತಿಕ ಮತಧರ್ಮದವನ್ನು ಹಗೆತನದಿಂದ ಕಾಣಬಾರದು; ಬದಲಾಗಿ, ಅದರೊಡನೆ ಒಗೆತನವಿರಿಸಿಕೊಳ್ಳಬೇಕು ಅದು, ಅದರೊಡನೆ ಮಾತುಕತೆಯಲ್ಲಿ ತೊಡಗಬೇಕು. ನನಗೆ ಹಳೆಯ ಚಲನಚಿತ್ರವೊಂದರ ನೆನಪಾಗುತಿದೆ. ಇನ್‌ಹೆರಿಟ್ ದ ವಿಂಡ್ ಎಂಬ ಚಲನಚಿತ್ರದಲ್ಲಿ ಅದರ ಕಥಾನಾಯಕ ಕ್ಲ್ಯಾರೆನ್ಸ್ ಡ್ಯಾರೋ ಅನ್ನುವವನು(ಕ್ಲ್ಯಾರೆನ್ಸ್ ಡ್ಯಾರೋ ಎಂಬ ಅಸಲಿ ವ್ಯಕ್ತಿಯ ಬದುಕನ್ನು ಆಧರಿಸಿ ಸೃಷ್ಟಿಸಲಾದ, ಆ ಚಲನಚಿತ್ರದ, ಪಾತ್ರದ ಹೆಸರು ಹೆನ್ರಿ ಡ್ರಮ್ಮಾಂಡ್. ಪಾತ್ರವನ್ನು ವಹಿಸಿದ ನಟನ ಹೆಸರು ಸ್ಪೆನ್ಸರ್ ಟ್ರೇಸೀ – ಅನುವಾದಕ.) ಛಾರ್ಲ್ಸ್ ಡಾರ್ವಿನ್ನನ ದಿ ಆರಿಜಿನ್ ಆಫ್ ದಿ ಸ್ಪೀಸೀಸ್ ಪುಸ್ತಕವನ್ನೂ ಬೈಬಲ್ ಪುಸ್ತಕವನ್ನೂ ಕೈಗೆತ್ತಿಕೊಂಡು ಅವೆರಡೂ ಅದ್ಭುತವಾದ ಪುಸ್ತಕಗಳೇ ಅನ್ನುತ್ತಾನೆ; ಅವುಗಳಲ್ಲಿ, ಒಂದು ಪುಸ್ತಕಕ್ಕೆ ಸ್ಫೂರ್ತಿಯಾದುದು ಒಂದು ಬಗೆಯ, ಒಂದು ನೆಲೆಯ ಸತ್ಯವಾದರೆ, ಮತ್ತೊಂದು ಪುಸ್ತಕಕ್ಕೆ ಸ್ಫೂರ್ತಿಯಾದುದು ಮತ್ತೊಂದೇ ಬಗೆ ಹಾಗೂ ನೆಲೆಯ ಸತ್ಯ ಅನ್ನುತ್ತಾನೆ.

ಸೆಕ್ಯುಲರಿಸಮ್ ಅನ್ನುವುದು ಒಗೆತನದ ಮಾತುಕತೆ ಅನ್ನುವುದಾದರೆ, ಅಂಥ ಮಾತುಕತೆಯಲ್ಲಿ ಟೀಕೆಗೆ, ವಿಮರ್ಶೆಗೆ ತಾವಿರಬೇಕು. ಈಗ ನಾನು ಅಂಥ ಟೀಕೆ, ವಿಮರ್ಶೆ ಮಾಡುವವನಿದ್ದೇನೆ.

ಮುಂಬೈಯಲ್ಲಿ ಮೊನ್ನೆ ಆದುದು, ಮತ್ತು ಈಗಲೂ ಆಗುತ್ತಿರುವುದು, ಹೇಸಿಗೆ ಹುಟ್ಟಿಸುತ್ತದೆ. ಮುಸ್ಲಿಮರು ಕೂಡ ಬಾಳಾ ಠಾಕ್ರೆಯಂತೆ ಇಲ್ಲವೇ ರಾಜ್ ಠಾಕ್ರೆಯಂತೆ ಮತಾಂಧರಾಗಿ ಹುಚ್ಚುಹುಚ್ಚಾಗಿ ಆಡುತ್ತಿದ್ದಾರೆ ಅನ್ನಿಸಿದರೆ, ಆಗ ನನ್ನಂಥವನು ಹಾಗೆಂದು ಹೇಳಲೇಬೇಕಾಗುತ್ತದೆ. ಮುಸ್ಲಿಮರು ತಾವು ಮಾತನಾಡುವುದು ಮುಸ್ಲಿಮರ ಪರವಾಗಿ ಮಾತ್ರವೇ,

ಬೊಡೋ ಜನರ ದುಮ್ಮಾನವನ್ನು ತಾವು ಗುರುತಿಸುವುದಿಲ್ಲ ಅನ್ನುವುದಾದರೆ, ಆಗ ಅವರು ತಮ್ಮಾಚೆಗಿನ ಏನನ್ನೂ ಕಾಣಲೊಲ್ಲದವರು, ಸೆಕ್ಯುಲರ್ ಮೌಲ್ಯಗಳನ್ನು ಪಾಲಿಸದವರು ಅನ್ನಬೇಕಾಗುತ್ತದೆ, ಅಷ್ಟೇ. ಹತ್ತು ಲಕ್ಷ ಜನ ಬೊಡೋಗಳು ಮನೆಮಠ ಕಳಕೊಂಡಿದ್ದಾರೆ ಅನ್ನುವುದನ್ನು ಮುಸ್ಲಿಮರು ತಮ್ಮ ಮನಸ್ಸಿಗೆ ತಂದುಕೊಳ್ಳದಿದ್ದರೆ, ಮೂವತ್ತು ಲಕ್ಷ ಮುಸ್ಲಿಮರು ಮನೆಮಠ ಕಳಕೊಂಡಿದ್ದಾರೆ ಅನ್ನುವುದನ್ನು ಮನಸ್ಸಿಗೆ ತಂದುಕೊಳ್ಳುವುದು ಕಷ್ಟವಾಗುತ್ತದೆ. ಒಬ್ಬರ ದುಕ್ಕದುಮ್ಮಾನಗಳನ್ನು ಕಂಡು ಮತ್ತೊಬ್ಬರು ಹಾಲು ಕುಡಿಯುವಂತಾಗಬಾರದು. ಇದು ಸೆಕ್ಯುಲರಿಸಮ್ಮಿನ ದಾರಿಯಲ್ಲ, ನೀತಿಯಲ್ಲ.

ನಾವು, ನಮ್ಮ ಸಮಾಜದಮಟ್ಟಿಗೆ, ಸೆಕ್ಯುಲರಿಸಮ್ಮನ್ನು ಹೊಸ ರೀತಿಯಲ್ಲಿ ಅರ್ಥವಿಸಿಕೊಳ್ಳಬೇಕು. ನಮ್ಮಲ್ಲಿ, ಸೆಕ್ಯುಲರಿಸಮ್ ಅಂದರೆ ಆಸ್ತಿಕ ಮತಧರ್ಮ ಮತ್ತು ವಿಜ್ಞಾನಗಳ ನಡುವಿನ ಕಾದಾಟವೇ ಎಂದಾಗಬಾರದು. ಹಾಗೆಯೇ, ಸೆಕ್ಯುಲರಿಸಮ್ ಅಂದರೆ ಪ್ರಭುತ್ವ–ಸರಕಾರ ಮತ್ತು ಆಸ್ತಿಕ ಮತಧರ್ಮಗಳು ಸಂಪೂರ್ಣವಾಗಿ ಬೇರೆಬೇರೆಯೇ ಆಗಿರುವ ವ್ಯವಸ್ಥೆ ಎಂದು ನಾವು ಹಠ ಹಿಡಿಯುವುದು ಕೂಡ ಸಲ್ಲ. ನಿಜವಾಗಿ ನೋಡಿದರೆ, ನಮ್ಮಂತೆ ಇಲ್ಲದಿರುವವರನ್ನು, ಹೆರವರನ್ನು ನಾವು ಆದರದಿಂದ ಕಾಣುವುದೇ ಸೆಕ್ಯುಲರಿಸಮ್. ನಮ್ಮಂತಲ್ಲದ, ನಮ್ಮಂತಿಲ್ಲದಿರುವ ಹೆರವರಿಂದಾಗಿಯಲ್ಲವೇ ನಮಗೆ ನಮ್ಮತನದ ಗುರುತು ಹತ್ತುವುದು?!

ಸೆಕ್ಯುಲರಿಸಮ್ಮಿನ ಮೊದಲ ನಿಯಮ ಅಂದರೆ ಇದೇ, ಆದರ ಅನ್ನುವುದೇ, ಆಗಬೇಕು. ನಮ್ಮಂತಿಲ್ಲದಿರುವವರನ್ನು ಅವರು ನಮ್ಮಂತಿಲ್ಲ, ನಮ್ಮಂತಲ್ಲ ಎಂಬುದಕ್ಕಾಗಿಯೇ ನಾವು ಸತ್ಕರಿಸಬೇಕು. ಆ ಹೆರವರು ಎಂದು ಕರೆಯಿಸಿಕೊಳ್ಳುವವರು, “ನಾವು ಯಾರೂ ನಾವೇ ನಾವಾಗಿ ಶುದ್ಧಸತ್ವದ ಗಟ್ಟಿಗಳಲ್ಲ; ನಾವೂ ಅವರೂ ಅದು ಯಾವುದೋ ದೊಡ್ಡದೊಂದರ ತುಣುಕುಗಳು ಮಾತ್ರ; ತುಣುಕಿಗೆ ತುಣುಕು, ಹನಿಗೆ ಹನಿಗೆ ಬೇಕು; ನಾವು ಒಬ್ಬರಿಗೊಬ್ಬರು ಬೇಕಾದವರು” ಅನ್ನುವುದನ್ನು ನಮಗೆ ನೆನಪು ಮಾಡಿಕೊಡುತ್ತಾರೆ.

ಸೆಕ್ಯುಲರಿಸಮ್ಮಿನ ಎರಡನೆಯ ನಿಯಮವನ್ನು ದಲೈಲಾಮಾ ಅವರು ಆಡಿದ ಮಾತೊಂದರಮೇಲೆ ಕಟ್ಟಿಕೊಳ್ಳಬಹುದು. ಜಾರ್ಜ್ ಬುಷ್ಷನ ನಡವಳಿಕೆಯು “ನನ್ನೊಳಗಿನ ಮುಸ್ಲಿಮನನ್ನು ಬಡಿದೆಬ್ಬಿಸುತ್ತದೆ” ಅಂದರಂತೆ ಅವರು. ಹಾಗೇನೆ, ಗುಜರಾತಿನ ನರಮೇಧದಿಂದಾಗಿ, ನರೇಂದ್ರ ಮೋದಿಯು ನನ್ನೊಳಗಿನ ಮುಸ್ಲಿಮನನ್ನು ಬಡಿದೆಬ್ಬಿಸಿದ್ದಾರೆ. ನಮ್ಮಂತಲ್ಲದ, ನಮ್ಮಂತಿಲ್ಲದ ಹೆರವರ ಸಂಕಟದ ಗಳಿಗೆಯಲ್ಲಿ ಅವರೇ ನಾವು–ನಾವೇ ಅವರು ಅನ್ನುವ ಭಾವ ನಮಗಿದ್ದರೆ, ಆಗ ನಾವು ಈ ಸೆಕ್ಯುಲರ್ ಎಂಬ ನೆಲೆಗೊಂದು ಸಾರ್ಥಕತೆಯನ್ನು ಒದಗಿಸಿದಂತಾಗುತ್ತದೆ.

ಇಷ್ಟಾದರೂ, ಸೆಕ್ಯುಲರಿಸಮ್ಮಿನ ಬಾಳಿನಲ್ಲಿ ಪಂಗಡ ಪಂಗಡದ ನಡುವೆ ಮೋಟುಗೋಡೆಗಳೂ ಇದ್ದರೆ ಒಳ್ಳೆಯದು. ಯಾಕೆಂದರೆ, ನಾನು ನೀನೆಂಬ ಗುರುತುಗಳು ಒಂದಕ್ಕೊಂದು ತೀರ ಹತ್ತಿರವಾಗಿ, ತೀರ ಮಸುಕಾಗಿ, ಕಲೆಸಿ ಹೋಗಲು ಸುರುಮಾಡಿದರೆ, ನಾನು ನೀನುಗಳ ನಡುವಿನ ದೂರಗಳನ್ನು ನಾವು ತಕ್ಕಮಟ್ಟಿಗೆ ಕಾಯ್ದುಕೊಳ್ಳದಿದ್ದರೆ, ಆಗಲೂ ಹಿಂಸೆಯ ಭುಗಿಲು ಏಳಬಹುದು ಅನ್ನುವುದನ್ನು ನಾವು ಅರಿಯಬೇಕು. ನಮ್ಮ ನಮ್ಮ ನಡುವಿನ ವ್ಯತ್ಯಾಸ ಮತ್ತು ದೂರಗಳನ್ನು ನಮ್ಮ ಸೆಕ್ಯುಲರಿಸಮ್ಮು ಸೃಜನಶೀಲವಾಗಿ ಅರ್ಥವಿಸಿಕೊಳ್ಳಬೇಕು, ಯಾಕೆಂದರೆ ನಮ್ಮಲ್ಲಿ ಸೆಕ್ಯುಲರಿಮ್ ಅನ್ನುವುದು ಬಹುತ್ವದ ದರ್ಶನ ಮತ್ತು ಸಿದ್ಧಾಂತವಾಗಿದೆಯೇ ಹೊರತು ಎಲ್ಲ ಬಹುತ್ವ, ಎಲ್ಲ ಬಹುರೂಪತೆಯನ್ನು ಬಲವಂತವಾಗಿ ಸಾರಿಸಿ, ಸಪಾಟು ಮಾಡಿಬಿಡುವ ಏಕರೂಪತ್ವದ ದರ್ಶನ ಮತ್ತು ಸಿದ್ಧಾಂತವಾಗಿಲ್ಲ; ಆಗಬಾರದು ಕೂಡ.

ಮಾನವ ಹಕ್ಕುಗಳ ಪರ ನಿಂತು ಹೋರಾಡುವವನಾಗಿ, ನಾನು ಸೆಕ್ಯುಲರಿಸ್ಟನಲ್ಲದೇ ಮತ್ತೊಂದಾಗಿರಲು ಸಾಧ್ಯವೇ ಇಲ್ಲ. ನಾನು ಹಿಂದೂ, *ಹಾಗಾಗಿ* ಹಿಂದೂಗಳ ಪರವಾಗಿ ಮಾತ್ರ ಹೋರಾಡುತ್ತೇನೆ ಅನ್ನುವುದು ಸಲ್ಲ; ಬದಲಾಗಿ, ನಾನು ಮುಸ್ಲಿಮರ ಪರವಾಗಿ ಹೋರಾಡುತ್ತೇನೆ, *ಯಾಕೆಂದರೆ* ನಾನು *ಹಿಂದೂ* ಅನ್ನುವುದು ಚಂದ. ನನ್ನ ಜಾತಿ–ಸಮುದಾಯದ ನೆಲೆಯಿಂ ಆಚೆಗೂ ನಾನು ಪಾಲಿಸ ಬೇಕಾದ ಕರ್ತವ್ಯಗಳಿವೆ, ಯಾಕೆಂದರೆ ನನಗೆ ದಕ್ಕಿರುವ ಹಕ್ಕುಗಳು ಕೂಡ ಆ ನೆಲೆಯ ಆಚೆಗಿವೆ. ನನ್ನ ಸೆಕ್ಯುಲರಿಸಮ್ಮಿಗೆ ಇಂಥ ಸಂವಾದದ ಸ್ವಭಾವ–ಸ್ವರೂಪವಿರುವುದರಿಂದಲೇ ನಾನು ಮುಸ್ಲಿಮ್ ಮೂಲಭೂತವಾದವನ್ನೂ ಹಿಂದೂ ಮತಾಂಧತೆಯನ್ನೂ ಒಟ್ಟೊಟ್ಟಿಗೇ ಎದುರು ಹಾಕಿಕೊಳ್ಳಬೇಕಾಗುತ್ತದೆ.



ಇವತ್ತು ನಮ್ಮ ಸಮಾಜದ ಪರಿಸ್ಥಿತಿ ಏನನ್ನೂ ಹೇಳಲು ಬಾರದಂತೆ ನಾಜೂಕಾಗಿದೆ, ಯಾಕೆಂದರೆ ಮುಸ್ಲಿಮರು ಉಳಿದವರಿಂದ ಕಾಯ್ದುಕೊಂಡಿರುವ ದೂರವು ಅವರಿಂದ – ಮುಸ್ಲಿಮರಿಂದ – ಆಗುವ ಹಿಂಸೆಯ ಕೆಲಸಗಳನ್ನು ಇನ್ನಷ್ಟು ಸಮಸ್ಯಾತ್ಮಕಗೊಳಿಸಿದೆ. ಮುಸ್ಲಿಮರನ್ನು ಹೀಗೆ ಟೀಕಿಸುತ್ತಿದ್ದೇನೆ ಅಂದಾಗ, ಆ ಸಮುದಾಯವೇ ಒಂದು ಪಿಡುಗಾಗಿದೆ, ಪೆಡಂಭೂತವಾಗಿದೆ ಎಂದು ಹೇಳಿದಂತಾಗುವುದಿಲ್ಲ. ಈ ಸಮಾಜದ ಪ್ರಜೆಗಳಾಗಿ ನಾವು ಒಬ್ಬರಿಗೊಬ್ಬರು ಕನ್ನಡಿ ಹಿಡಿಯಬೇಕಾದ್ದು ಕೇವಲ ನಮ್ಮ ಕರ್ತವ್ಯ, ಅಷ್ಟೇ. ಈಗಾಗುತ್ತಿರುವಂಥವೇ ಇನ್ನು ಕೆಲವು ಗಲಭೆಗಳಾಗಿಬಿಟ್ಟರೆ, ನಮ್ಮ ರಾಜಕಾರಣದ ಸ್ವಭಾವವೇ ಬದಲಾಗಿಬಿಡಬಹುದು ಎಂಬ ಅರಿವು ನಮಗೆ ಈಗಲಾದರೂ ಬರಬೇಕು.

ನಮ್ಮ ಪ್ರಜಾಪ್ರಭುತ್ವದ ಭವಿಷ್ಯವನ್ನು ಕುರಿತ ಚಿಂತೆಯಿಂದಾಗಿ ಹೀಗೆ ಬರೆಯುತ್ತಿದ್ದೇನೆ. ಪರಿಸ್ಥಿತಿ ಬಿಗಿಯಾಗಿದೆ. ಭಾರತದಲ್ಲಿ ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿರುವ ರಾಜ್ಯಗಳಲ್ಲಿ ಅಸ್ಸಾಮಿಗೆ ಎರಡನೆಯ ಸ್ಥಾನವಿದೆ, ಮರೆಯದಿರೋಣ. ಬಹುಸಂಖ್ಯಾತರ ಮಾತು ಮಾತ್ರ ನಡೆಯಬೇಕು ಅನ್ನುವ ದೊಣ್ಣಾಯಕತನದ ದಬ್ಬಾಳಿಕೆಯಂತೆಯೇ, ನಡೆಯತಕ್ಕದ್ದು ಅಲ್ಪಸಂಖ್ಯಾತರ ಮಾತೊಂದೇ ಅನ್ನುವ ದುಂಡಾವರ್ತಿಯೂ ಕೊಳಕು ಮನಸ್ಸಿನ ನಾತ ಬೀರುತ್ತದೆ ಅನ್ನುವುದನ್ನು ನಾವು ತಿಳಿಯ ಬೇಕಾಗಿದೆ.

ಮುಸ್ಲಿಮ್ ಮೂಲಭೂತವಾದಿಗಳು, ಹಿಂದೂ ಮತಾಂಧರು, ಇಬ್ಬರೂ ಪ್ರಜಾಪ್ರಭುತ್ವಕ್ಕೆ ಮುಳುವಾಗಿದ್ದಾರೆ. ನಾವು ಇಬ್ಬರನ್ನೂ ಎದುರಿಸಬೇಕು. ಅದಕ್ಕಾಗಿ ನಾವು ನಿಜವಾದ, ಭಿಡೆಯಿಲ್ಲದ ಪ್ರಜಾಪ್ರಭುತ್ವದ ಹಾದಿ ಹಿಡಿದು ನಡೆಯಬೇಕು, ನುಡಿಯಬೇಕು. ರಾಜ್ ಠಾಕ್ರೆಯಂಥವರಿಗಿಂತ ಮೌಲಾನಾ ಅಬ್ದುಲ್ ಖಾದಿರ್ ಅಲ್ವಿಯಂಥವರು ಮೇಲು ಅನ್ನುವುದು ತಪ್ಪು. ಅಲ್ವಿಯಂಥವರು, ಏನಿದ್ದರೂ, ಮುಸ್ಲಿಮ್ ಪೋಷಾಕು ತೊಟ್ಟ ನರೇಂದ್ರ ಮೋದಿಗಳು, ಅಷ್ಟೇ. ಬೇರೆಯಲ್ಲ.

ಭಯ, ಭೀತಿ, ದ್ವೇಷ ತುಂಬಿದ ವಾತಾವರಣವನ್ನು ಉಂಟುಮಾಡಲು, ಮೋದಿಯಂಥ ರಾಜಕಾರಣಿಯನ್ನು ಅಧಿಕಾರಕ್ಕೆ ತರಲು ಇನ್ನು ಕೆಲವು ಗಲಭೆಗಳು ಸಾಕು. ಅಂಥ ಅಪಾಯದ ಪರಿಸ್ಥಿತಿಯಲ್ಲಿದ್ದೇವೆ ನಾವು. ಅಂಥ ಇತಿಹಾಸವು ನಮ್ಮದಾಗುವುದನ್ನು ತಪ್ಪಿಸಲು ಎಲ್ಲ ಸೆಕ್ಯುಲರಿಸ್ಟರೂ ಹವಣಿಸಬೇಕು. ಸೆಕ್ಯುಲರಿಸಮ್ಮಿಗೆ ಈಗ ಇರುವುದು ತೀರ ತೆಳುವಾದ, ಬಡವಾದ ಅರ್ಥ. ನಾವು ಬದುಕಲು ಬಯಸುವ ಲೋಕಗಳನ್ನು ಅರ್ಥವಿಸಿಕೊಳ್ಳುವ ಸಲುವಾಗಿ ನಾವು ನಮ್ಮ ಮಾತುಗಳಿಗೆ ಹೊಸರೂಪ, ಹೊಸ ಅರ್ಥ, ಹೊಸ ಹರಹು ಕೊಟ್ಟುಕೊಳ್ಳಬೇಕಾಗಿದೆ. ಈಗ ನಾವು ಹೊಸ ಬಗೆಯ ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ತೊಡಗಬೇಕಾಗಿದೆ. ಅಂಥಲ್ಲಿ, ಪ್ರಭುತ್ವಗಳ ಅಂಕೆ, ಆರೈಕೆಯಲ್ಲಿ ಬಾಳುವ ಪಾಶ್ಚಾತ್ಯ ಮೂಲದ ಬಡಕಲು ಸೆಕ್ಯುಲರಿಸಮ್ಮಿನ ಒಣಗೈರತ್ತು ಸುತರಾಂ ಕೆಲಸಕ್ಕೆ ಬರುವುದಿಲ್ಲ.


**(ಕೃಪೆ: ಡೆಕ್ಕನ್ ಕ್ರಾನಿಕಲ್)**

***(ಶಿವ ವಿಶ್ವನಾಥನ್ ರಾಷ್ಟ್ರದ ಪ್ರಮುಖ ಸಮಾಜ ವಿಜ್ಞಾನಿಗಳಲ್ಲಿ ಒಬ್ಬರು ಗುಜರಾತಿನ ರಾಜಧಾನಿ ಗಾಂಧಿನಗರದ ಸಂಶೋಧನ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅವರು, ನರೇಂದ್ರ ಮೋದಿಯನ್ನು ಎದುರು ಹಾಕಿಕೊಂಡ ಕಾರಣದಿಂದಾಗಿ ಹರಿಯಾಣಾಕ್ಕೆ ವಲಸೆ ಹೋಗಿ ನೆಲೆಸಿದ್ದಾರೆ)***

# ಅಂದ ಹಾಗೆ: ಕಿಡಿಗೇಡಿಯೊಬ್ಬನ ಕಾಲಹರಣದ ಟಿಪ್ಪಣಿಗಳು



**ಹಿ**ಮಾಚಲ ಪ್ರದೇಶದಲ್ಲಿನ ಗೆಲುವಿನ ಬಗ್ಗೆ ಯಾರೂ ಮಾತಾಡದೇ, ಗುಜರಾತ್‌ನಲ್ಲಿ ಕಾಂಗ್ರೆಸ್ ಸತತವಾಗಿ ಐದನೇ ಬಾರಿ ಮಣ್ಣು ಮುಕ್ಕಿದ್ದರ ಕುರಿತೇ ಎಲ್ಲರೂ ಮಾತನಾಡುತ್ತಿರುವುದರ ಬಗ್ಗೆ ಶಾನೆ ತಲೆ ಕೆಡಿಸಿಕೊಂಡ ಸೋನಿಯಾ ಗಾಂಧಿಯವರು ಈ ಮಾತು ಆಡುತ್ತಿರುವವರ ಗಂಟಲಲ್ಲೇ ಸಿಕ್ಕಿ ಹಾಕಿಕೊಳ್ಳುವಂತಹ ಪ್ರತಿ ಮಾತೊಂದನ್ನು ಕಂಡು ಹಿಡಿದು ತರಲು ತಮ್ಮ ಪಕ್ಷದ ಚತುರ ಮಾತುಗಾರ ಮನೀಶ್ ತಿವಾರಿ ಎಂಬ ಇಂಗ್ಲಿಷ್ ಪಡ್ಡೆಯೊಬ್ಬನಿಗೆ ಹೇಳಲಾಗಿ ಆತ ಈ ಸಲದ ಚುನಾವಣಾ ದಸ್ತಾವೇಜುಗಳನ್ನೆಲ್ಲ ಹುಡುಕಿ ತಡಕಿ ಈ ಬಾರಿ ಎರಡೂ ರಾಜ್ಯಗಳಲ್ಲಿ ರಾಹುಲ ಗಾಂಧಿ ಪ್ರಚಾರ ಭಾಷಣಕ್ಕೆ ಹೋದ ಎಲ್ಲ ೧೩ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಜಯಭೇರಿ ಬಾರಿಸಿದೆ ಎಂದು ಕಂಡು ಹಿಡಿದುಕೊಂಡು ಬಂದು ವರದಿಯನ್ನು ಅರುಹುತ್ತಿರಲು, ಅದೇ ಹೊತ್ತಿಗೆ ಗುಜರಾತ್ ಯುದ್ಧಭೂಮಿಯಿಂದ ಸುಸ್ತಾಗಿ ಆಗಮಿಸಿದ ಅಹಮದ್ ಪಟೇಲ್ ಎಂಬ ಮಂಕುದಿಣ್ಣೆ ಸಂದರ್ಭ ತಿಳಿಯದೆ ತಾನೂ ಒಂದು ಸಂತೋಷದ ಸುದ್ದಿ ಅರುಹುವ ಉತ್ಸಾಹದಲ್ಲಿ ಮಧ್ಯೆ ಬಾಯಿ ಹಾಕಿ ಈ ಹಿಂದೆ ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಾದಂತೆ ಮುಖಭಂಗವಾಗಬಾರೆಂದು ಈ ಬಾರಿ ನುರಿತವರಿಂದ ಸಮೀಕ್ಷೆ ನಡೆಸಿ ಶೇ. ೨೦೦ರಷ್ಟು ಖಚಿತವಾಗಿ ನಮ್ಮ ಪಕ್ಷ ಗೆಲ್ಲುವ ಕ್ಷೇತ್ರಗಳಿಗಷ್ಟೇ ರಾಹುಲರನ್ನು ಕಳಿಸುವ ನಮ್ಮ ಯೋಜನೆ ಶೇ. ೧೦೦ರಷ್ಟು ಯಶಸ್ವಿಯಾಗಿದೆ ಎಂದು ಅರುಹಿದೊಡನೆ ಸೋನಿಯಾ ಗಾಂಧಿಯವರು ಇಬ್ಬರನ್ನೂ ಒಟ್ಟಿಗೇ ಸುಟ್ಟು ಬಿಡುವಂತೆ ನೋಡಿ ಹೊರ ಹೋಗಲು ಆಜ್ಞೆ ಮಾಡಿದರಂತಲ್ಲಾ!




**ಇ**ತ್ತ ಕರ್ನಾಟಕದಲ್ಲಿ ತಾನು ಸೇರಿದ ಪಕ್ಷಗಳೆಲ್ಲ ಮುಂದಿನ ಚುನಾವಣೆಗಳಲ್ಲಿ ಮುಂಡಾಮೋಚಿಕೊಂಡು ಹೋಗುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ನಿಷ್ಣಾತನಾದ ಕೆ.ಎಚ್. ಶ್ರೀನಿವಾಸನೆಂಬ ಪಕ್ಷಾಂತರ ವೀರನೊಬ್ಬ ತನ್ನ ಈ ರಾಜಕೀಯ ದಶಾವತಾರ ನಾಟಕದ ಇತ್ತೀಚಿನ ವೇಷದಲ್ಲಿ ಕೆಜೆಪಿ ಸೇರಿ, ಸಮಾಜವಾದಿ ಪಟೇಲ ಹೋದಾಗಿನಿಂದ ರಾಜ ದರ್ಬಾರಿನ ಸವಿಯಿಂದ ವಂಚಿತರಾಗಿ ಶಾನೆ ಬೇಜಾರಾಗಿರುವ ಅನಂತಮೂರ್ತಿಯೆಂಬ ಬೌದ್ಧಿಕ ಭೋಳೆ ಬಾಬಾನ ರಾಜಕೀಯ ದೌರ್ಬಲ್ಯವನ್ನು ಅರಿತವನಾಗಿ ಅವರೊಂದಿಗೆ ತನ್ನ 'ಕಾನುಗೋಡು' ಎಂಬ ಮಹಾಕಾವ್ಯವನ್ನು ಗುನುಗುತ್ತಾ ಸದಾಶಿವ ನಗರದಲ್ಲಿ ವಾಯುವಿಹಾರಕ್ಕೆಂದು ಕರೆದುಕೊಂಡು ಹೋಗಿ ಯಡ್ಯೂರಪ್ಪನ ಮನೆ ಮುಂದೆ ತಂದು ನಿಲ್ಲಿಸುವ ಮೂಲಕ ಇಬ್ಬರನ್ನೂ ಖುಷಿಪಡಿಸಿ ತನಗೆ ಶಿವಮೊಗ್ಗದಿಂದ ಟಿಕೆಟ್ ಗ್ಯಾರಂಟಿ ಮಾಡಿಕೊಳ್ಳುವಲ್ಲಿ ಯಶಸ್ವಿಯಾದ ನಂತರದ ಒಂದು ಮಧ್ಯರಾತ್ರಿ ಕೆಜೆಪಿ ಪ್ರಣಾಳಿಕೆಗೆ ತಮ್ಮದೇ ಸಮಾಜವಾದಿ ಸ್ಪರ್ಶ ನೀಡುವ ಸೃಜನಶೀಲ ಕೆಲಸದಲ್ಲಿ ತೊಡಗಿದವರಾಗಿದ್ದ ಅನಂತಮೂರ್ತಿಯವರು ಪಕ್ಕದಲ್ಲಿ ತಮ್ಮ ಪಥ್ಯೋಪಚಾರಕ್ಕಾಗಿ ಕೂತಿದ್ದ ಶ್ರೀನಿವಾಸನತ್ತ ಹುಸಿ ಕೋಪ ಬೀರುತ್ತಾ 'ಏನಯ್ಯಾ ಶ್ರೀನಿವಾಸ ನನ್ನನ್ನು ಈ ಕೆಲಸಕ್ಕೆ ಹೇಗೆ ಮರುಳು ಮಾಡಿದೆಯಯ್ಯಾ! ಅಸಾಧ್ಯ ಕಣಯ್ಯಾ ನೀನು!' ಎಂದು ಮೆಚ್ಚುಗೆಯ ನೋಟ ಬೀರಲು ಆತ, 'ಇದರಲ್ಲಿ ಅಸಾಧ್ಯವೇನು ಬಂತು ಗುರುವರ್ಯರೇ, ಜಾತಿ ಸೃಜನಶೀಲ ಎಂಬ ನಿಮ್ಮ ಹಳೆಯ ಒಳನೋಟದ ಸತ್ವವನ್ನು ನಾನು ಹೊಸದಾಗಿ ಕಂಡುಕೊಂಡೆನಷ್ಟೆ!' ಎಂದು ಸಲೀಸಾಗಿ ಹೇಳಿ ತನ್ನ ಜನಿವಾರವನ್ನೊಮ್ಮೆ ನೀವಿಕೊಂಡನಂತಲ್ಲಾ!



**ಇ**ದೆಲ್ಲವನ್ನೂ ತಿಳಿದು ಗೊಂದಲಗೊಂಡ ಅನಂತಮೂರ್ತಿ ಮಠದ ಪಾರುಪತ್ತೇದಾರರು ಈ ಎಲ್ಲ ಗೊಂದಲಗಳ ಬೌದ್ಧಿಕ ಪರಿಹಾರಕ್ಕಾಗಿ ಮತ್ತು ತಮ್ಮ ಗುರುವರ್ಯರ ಹೊಸ ಬೌದ್ಧಿಕ ಸಾಹಸದ ಆತಂರ್ಯವನ್ನು ಸಾರ್ವಜನಿಕರಿಗೆ ಅರುಹಲು 'ಬಸವಣ್ಣ, ಗಾಂಧಿ ಮತ್ತು ಲೋಹಿಯಾ: ಯಡ್ಯೂರಪ್ಪನವರ ಹೊಸ ರಾಜಕಾರಣದ ಪರಿಪ್ರೇಕ್ಷ್ಯದಲ್ಲಿ' ಎಂಬ ವಿಚಾರ ಸಂಕಿರಣವೊಂದನ್ನು ಉಡುಪಿಯ ರಥಬೀದಿಯಲ್ಲಿ ಏರ್ಪಡಿಸಲು ಸರ್ವ ಸಿದ್ಧತೆಗಳನ್ನೂ ಮಾಡಿ ಕೊಳ್ಳುತ್ತಿರಲಾಗಿ ಶ್ರೀನಿವಾಸರಿಂದ ದೂರವಾಣಿ ಕರೆಯೊಂದು ಬಂದು ಅದರಲ್ಲಿ ಅವರು, 'ನಮ್ಮ ಪಕ್ಷಕ್ಕೆ ಚಂಪಾ ಅವರೂ ಬುಕ್ ಆಗಿದ್ದಾರೆ ಅವರನ್ನು ಆಹ್ವಾನಿಸಿ ಹುಡಿ ಹಾರಿಸಿ' ಎಂದು ಹೇಳಲಾಗಿ ರಥಬೀದಿಯಲ್ಲಿ ಬಾಂಬು ಬಿದ್ದಂತಾಗಿ ಅಲ್ಲಿ ಸೇರಿದ್ದ ಬುದ್ಧಿಜೀವಿಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಓಡಿದರಂತಲ್ಲಾ




**ಮ**ಡೆ ಮಡೆ ಸ್ನಾನವೆಂಬ ಭವ್ಯ ಭಾರತೀಯ ಪರಂಪರೆಯ ಅವಿಭಾಜ್ಯ ಮತ್ತು ಪವಿತ್ರವಾದ ಅಂಗವನ್ನು ಹಿಂದುಳಿದವರು ಎಂದು ಕರೆದುಕೊಳ್ಳುವ ಕೆಲವರು ಹೈಕೋರ್ಟಿನೊಂದಿಗೆ ಸೇರಿ ಊನಗೊಳಿಸಲು ನಡೆಸಿದ ಪ್ರಯತ್ನವನ್ನು ಸುಪ್ರೀಂ ಕೋರ್ಟು ಮಧ್ಯಂತರ ತಡೆಯಾಜ್ಞೆ ನೀಡಿ ಭಂಗಗೊಳಿಸಿರುವುದನ್ನು ತಿಳಿದ ಈ ಕಲಿತ-ಬಲಿತ ಹಿಂದುಳಿದವರ ಕಾಟದಿಂದ ದಲಿತ ಆದಿವಾಸಿಗಳ ನಂಬಿಕೆ-ಹಕ್ಕುಗಳು ದಮನಗೊಳ್ಳುತ್ತಿರುವುದನ್ನು ಕಂಡು ಕನಲಿಹೋಗಿರುವ ಹೆಗ್ಗೋಡಿನ ಕಡೆಯ ಆಧುನಿಕೋತ್ತರವಾದಿಗಳಲ್ಲಿ ಪುಳಕ ಹುಟ್ಟಿಸಿ 'ಸುಪ್ರೀಂ ಕೋರ್ಟಿನ ಆದೇಶದ ಅಂತಃಪಠ್ಯ' ಎಂಬ ತಮ್ಮ ಹೊಸ ಬೌದ್ಧಿಕ ವಿವೇಚನೆಯ ಪ್ರಬಂಧಕ್ಕೆ ಬೆಂಬಲವಾಗಿ ಇತ್ತೀಚಿನ ಮಡೆಸ್ನಾನದಲ್ಲಿ ಭಾಗವಹಿಸಿ ರೋಗರುಜಿನ ಮುಕ್ತರಾದವರ ಸಂದರ್ಶನಗಳನ್ನು ಅವುಗಳ ಅಥೆಂಟಿಸಿಟಿಗೆ ಧಕ್ಕೆಯಾಗದಂತೆ ಅವರ ಮಾತಿನ ವರಸೆಯಲ್ಲೇ ಬರೆದು ಕಳಿಸಲು ಮಣಿಪಾಲದ ಸಂದರ್ಶನ ನಿಪುಣೆಯೊಬ್ಬರಿಗೆ ಹೇಳಿಕಳಿಸಿದ್ದಾರಂತಲ್ಲಾ!



**ಕ**ಳೆದ ಮುವ್ವತ್ತು ವರ್ಷಗಳಲ್ಲಿ ಏನೂ ಬರೆಯಲಾಗದೆ, ಬರೆಯಲಾಗದಿರುವುದನ್ನೇ ಒಂದು ಮಹಾತ್ಮೆಯನ್ನಾಗಿ ಮಾಡಿ ತಿರುಗಾಡಿಕೊಂಡಿದ್ದ ಮೈಸೂರು ಕಡೆಯ ದಲಿತ ಸಾಹಿತಿಯೊಬ್ಬರು ಈ ಮಹಾತ್ಮೆಯ ಪ್ರಭಾವ ಇಳಿದು ಅಳಿಯುತ್ತಿದ್ದುದನ್ನು ಗಮನಿಸಿದವರಂತೆ ಇದ್ದಕ್ಕಿದ್ದಂತೆ ತಮ್ಮ ಅಳಿದುಳಿದ ಎಲ್ಲ ಬರಹಗಳ ಬೃಹತ್ ಹೊತ್ತಗೆಯೊಂದನ್ನು ಪ್ರಕಟಿಸಿ 'ಎದೆಗೆ ಬಿದ್ದ ಅಕ್ಷರ' ಎಂಬ ಇನ್ನೊಂದು ಮಹಾತ್ಮೆಯನ್ನು ಸೃಷ್ಟಿಸಲು ಯತ್ನಿಸಲಾಗಿ ಇವರ ಇಂತಹ ಹುಸಿ ಮಹಾತ್ಮೆಗಳ ಕಾಟದಿಂದಲೇ ತಮ್ಮ ನಿಜ ಮಹಾತ್ಮೆಗಳಾವುವೂ ನಡೆಯುತ್ತಿಲ್ಲವೆಂದು ಕ್ರುದ್ಧರಾಗಿರುವ ತುಮಕೂರು ಕಡೆಯ ಕೆಲ ಸುಡಗಾಡು ಸಿದ್ಧರು ತಾವು ಭಿಕ್ಷಕ್ಕೆ ಹೋಗುವ ಮನೆಗಳಲ್ಲೆಲ್ಲ 'ಅದು ಎದೆಗೆ ಬಿದ್ದ ಅಕ್ಷರವಲ್ಲ; ಎಡವಿ ಬಿದ್ದ ಅಕ್ಷರ!' ಎಂಬ ಪ್ರಚಾರ ಕೈಗೊಂಡಿದ್ದಾರಂತಲ್ಲಾ!

## ಕೊನೆ ಹನಿ:

ಇದು ನೀನಾಸಂ ಆವರಣದಲ್ಲಿ ಕೇಳಿಬಂದ ಜೋಕು:




ಚಂದ್ರಶೇಖರ ಕಂಬಾರರು ಈಚೆಗೆ ಕಂಪನಿ ನಾಟಕವೆಂದರೆ ಬೆಚ್ಚಿ ಬೀಳುತ್ತಾರಂತೆ. ಅದಕ್ಕೆ ಕಾರಣ ಇದಂತೆ: ಅವರು ಹಂಪಿ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ ಹೊಸಪೇಟೆಗೆ ನಾಟಕ ಕಂಪನಿಯೊಂದು ಬಂದು ತನ್ನ 'ರೌದ್ರ ಗದ್ದೆ' ನಾಟಕದ ಮೊದಲ ಆಟಕ್ಕೆ ಅವರನ್ನು ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಲಾಯಿತಂತೆ. ತಮ್ಮ ಧರ್ಮಪತ್ನಿಯೊಂದಿಗೆ ಆಟಕ್ಕೆ ಆಗಮಿಸಿದ ಕಂಬಾರರು ನಾಟಕ ಗೃಹದ ಮೊದಲ ಸಾಲಿನ ಕುರ್ಚಿಯಲ್ಲೇ ಕೂತರು. ನಾಟಕ ಶುರುವಾಯಿತು. ಮೊದಲ ದೃಶ್ಯದಲ್ಲೇ ಗೌಡ-ಗೌಡಸಾನಿ ಬಂದು ಮಾತುಕತೆ ಶುರು ಮಾಡಿದರು. ಗೌಡ ಗೌಡಸಾನಿಯ ಒನಪು-ವಯ್ಯಾರಗಳನ್ನು ಬಣ್ಣಿಸುತ್ತಾ, ಇಂದು ರಾತ್ರಿ ತನ್ನಲ್ಲಿಗೆ ಬಂದೇ ಬರಬೇಕೆಂದು ಒತ್ತಾಯಿಸುತ್ತಿರಲು ಗೌಡಸಾನಿ ಕಂಬಾರರತ್ತ ಒಮ್ಮೆ ನೋಡಿ ಕಣ್ಣು ಹೊಡೆದು 'ಇವೊತ್ತು ರಾತ್ರಿ ಮಾತ್ರ ಆಗೂದಿಲ್ಲ ಗೌಡ, ಯಾಕೇಂದ್ರೆ ಇವೊತ್ತು ರಾತ್ರಿಗೆ ಕಂಬಾರರು ಬುಕ್ ಆಗ್ಯಾರ!' ಎಂದು ಡೈಲಾಗು ಹೊಡೆಯುತ್ತಿದ್ದಂತೆ ನಾಟಕಗೃಹದ ತುಂಬಾ ಸಿಳ್ಳು ಕೇಕೆ!

ಅಂದು ಆ ಕ್ಷಣದಲ್ಲಿ ತಮ್ಮ ಧರ್ಮ ಪತ್ನಿಯ ಹಿಂದೆ ಸದ್ಗೃಹಸ್ಥನಾಗಿ ತಲೆ ಬಗ್ಗಿಸಿಕೊಂಡು ಹೋದ ಕಂಬಾರರು ಇಂದಿನವರೆಗೆ ಯಾವ ಕಂಪನಿ ನಾಟಕ ಗೃಹದಲ್ಲೂ ಕಾಣಿಸಿಕೊಂಡಿಲ್ಲವಂತೆ!

**-ಕಿಡಿಗೇಡಿ**

## ಸಾಹಿತ್ಯ–ಸಂಸ್ಕೃತಿ ಇತ್ಯಾದಿ

# ಸಮಾಜವಾದಿ ಚಿಂತಕರಿಬ್ಬರ ಈಚಿನ ಎರಡು ಪುಸ್ತಕಗಳು





**ಈಚೆಗೆ ಕನ್ನಡದಲ್ಲಿ ಇಬ್ಬರು ಪ್ರಮುಖ ಲೇಖಕರ ಎರಡು ಪುಸ್ತಕಗಳು ಹೊರಬಂದಿವೆ. ಒಂದು ದೇವನೂರ ಮಹದೇವ ಅವರ ಸೃಜನೇತರವೆಂದು ಕರೆಯಬಹುದಾದ ಲೇಖನಗಳ ಸಂಗ್ರಹ: 'ಎದೆಗೆ ಬಿದ್ದ ಅಕ್ಷರ'. ಇನ್ನೊಂದು ಈವರೆಗೆ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಪುಸ್ತಕಗಳಲ್ಲಿ ಸೇರಿರದ ಅವರ ಲೇಖನಗಳ ಸಂಗ್ರಹ: 'ಹೊಸ ವಿಚಾರಗಳು'.**

**ಮಹಾದೇವ ಅವರ ಪುಸ್ತಕ 'ಇಷ್ಟೇ ಬರೆದು ಅಷ್ಟು ದೊಡ್ಡ ಹೆಸರು ಮಾಡಿದರು' ಎಂಬ ಅವರನ್ನು ಕುರಿತ ಮಾತಿಗೆ ಪ್ರತಿಕ್ರಿಯೆಎಂಬಂತೆ ಬೃಹತ್ ಗಾತ್ರದಲ್ಲಿ(೩೫೦ ಪುಟಗಳು) ಹೊರಬಂದಿದೆ. ಈ ಪುಸ್ತಕ ಓದುತ್ತಿದ್ದಂತೆ ಮಹಾದೇವ ಲೋಕವನ್ನು ನೋಡುವ ಮತ್ತು ಅಭಿವ್ಯಕ್ತಿಸುವ ಕ್ರಮಗಳಲ್ಲಿ ಕನ್ನಡ ಪರಂಪರೆಗೇ ಹೊಸದನ್ನು ನೀಡಿದ ಲೇಖಕ ಎನ್ನಿಸದಿರದು. ಒಟ್ಟಿಗೇ ಒಳ್ಳೆ ಗದ್ಯವೂ ಹೌದು, ಒಳ್ಳೆಯ ಪದ್ಯವೂ ಹೌದು ಎನ್ನಿಸುವ ರೀತಿಯಲ್ಲಿ ಬರೆದ ಮಹಾದೇವ ಅವರ ಈ ಬರಹಗಳ ಹಿಂದೆ ಒಂದು ಕ್ರಿಯೆಯೂ ಇದ್ದುದರಿಂದ ಈ ಬರಹಗಳ ಅಂದಿನ ಓದಿಗೆ ಒಂದು ವಿಶಿಷ್ಟ ಪ್ರಭೆಯೂ ಒದಗಿತ್ತು. ಆದರೆ ಆ ಕ್ರಿಯೆ ಈಗ ನಿಂತು ಹೋಗಿರುವುದರಿಂದ ಈ ಬರಹಗಳು ಈಗ ಕೆಲವರಿಗೆ ಮಾತಿನ ಮಾಟಗಾರಿಕೆಯಾಗಿ ಕಂಡರೂ ಆಶ್ಚರ್ಯವಿಲ್ಲ. ಕವಿ ಕೆ.ಬಿ. ಸಿದ್ದಯ್ಯ ನಮ್ಮ ಮುಂದಿನ ಸಂಚಿಕೆಯಲ್ಲಿ ಈ ಪುಸ್ತಕದ ಬಗ್ಗೆ ಬರೆಯಲಿದ್ದಾರೆ.**

**ಇನ್ನು ತೇಜಸ್ವಿ ಪುಸ್ತಕ ತನ್ನ ವಿಶಾಲ ಕಾಲಭಿತ್ತಿಯಲ್ಲಿ ಹರಡಿಕೊಂಡ ಲೇಖನಗಳ ವಿಷಯ ವೈವಿಧ್ಯದಿಂದಾಗಿ ಅವರ ವ್ಯಕ್ತಿತ್ವ ವಿಕಾಸವಾದ ಒಂದು ಸಂಕೀರ್ಣ ಚಿತ್ರವನ್ನು ಒದಗಿಸುವಂತಿದೆ. ಇದರ ಒಂದು ಇಣುಕುನೋಟ ನೀಡುವಂತಹ ಲೇಖನವೊಂದನ್ನು ಆಯ್ದು ಇಲ್ಲಿ ಪ್ರಕಟಿಸುತ್ತಿದ್ದೇವೆ.**–ಸಂ.

## ಒಂದು ಸ್ಪಷ್ಟೀಕರಣ

ನನ್ನ ಸಾಹಿತ್ಯ ಚಿಂತನೆಗೆ (ಕಸ್ತೂರಿ, ಮಾರ್ಚ್, ೭೨) ಕನ್ನಡದ ಮೂವರು ಲೇಖಕರು ಬರೆದ ಪ್ರತಿಕ್ರಿಯೆಯನ್ನು ನೋಡಿದೆ. (ಕಸ್ತೂರಿ ಮೇ, ೭೨) ಆ ಬಗ್ಗೆ ಪುಟ್ಟ ಸ್ಪಷ್ಟೀಕರಣ ಈ ಬರಹ. ಅನಂತಮೂರ್ತಿಯವರು ತಮ್ಮ ವಿಮರ್ಶಕ ಅಭಿಪ್ರಾಯ ಅದಲ್ಲವೆಂದೂ, ಕೆಲವು ಸಂದರ್ಭಗಳಲ್ಲಿ ತಮಗೆ ಅನ್ನಿಸುವ ಅನ್ನಿಸಿಕೆ ಅದೆಂದೂ ತಿಳಿಸಿದ್ದಾರೆ. ಒಬ್ಬ ವಿಮರ್ಶಕನಿಗೆ ಹಾಗೆ ಅನ್ನಿಸುವ ಅಭಿಪ್ರಾಯಗಳ ಮೂಲಗಳನ್ನು ಹಾಗೂ ಅ ವಿಮರ್ಶೆಯಲ್ಲಿ ಧ್ವನಿಸಬಹುದಾದ ಧ್ವನಿತಾರ್ಥಗಳನ್ನು ಗಮನಿಸಬೇಕೆಂದು ಅಪೇಕ್ಷಿಸುವುದು ತಪ್ಪು. "ಇದಮಿತ್ಥಂ' ಶೈಲಿಯಿಂದ ಅಪಾರ್ಥ ಹಾಗೂ ಅನರ್ಥಗಳಿಂದ ಪಾರಾಗಬಹುದು. ನಾನು ಅವಸರದಿಂದಲೋ ಅಸಹನೆಯಿಂದಲೂ ಬರೆಯುತ್ತಿರುವುದು ನಿಜ. ಏಕೆಂದರೆ, ವಿಪರೀತ ಸಹನಶೀಲನಾದವನು ಅವಸರವೇ ಇಲ್ಲದ ವಿರಾಮಮೂರ್ತಿಯಾದವನೂ, ಏನನ್ನೂ ಬರೆಯುವ ಗೋಜಿಗೇ ಹೋಗುವುದಿಲ್ಲ.

ನಾನು ಅಡಿಗರ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ನನ್ನಲ್ಲಿಯೇ ಗೊಂದಲವಿದೆಯೆಂದು ಅನಂತಮೂರ್ತಿ ತಿಳಿಸಿದ್ದಾರೆ. ಇದು ತಪ್ಪು. ಪರಂಪರೆ ಎಂದರೆ ತಮ್ಮ ತಮ್ಮ ಮತದ ಧಾರ್ಮಿಕ ಪರಂಪರೆಯೊಂದೇ ಎಂಬುದು ಅನಂತಮೂರ್ತಿಯವರು ಹೆಸರಿಸದಿದ್ದರೂ ಪರೋಕ್ಷವಾಗಿ ಪರಿಭಾವಿಸಿಕೊಂಡಿರುವ ಅಭಿಪ್ರಾಯ. ಭಾರತೀಯ ಸಂಸ್ಕೃತಿ ಎಂದಾಗಲೂ ಅವರ ಮಾತಿನ ಅರ್ಥ ಇದೇ ಆಗಿರುತ್ತದೆ. ದೇಶೀಯವೂ ಪ್ರಾಂತೀಯವೂ ಆದ ಸಂಸ್ಕೃತಿಗಳು ಈ ದೇಶದ ಸರಹದ್ದಿನಲ್ಲಿ ಇದ್ದುದೂ ಇರುವುದೂ ನಜ. ಈ ಸಂಸ್ಕೃತಿಗಳಿಗೂ ವೈದಿಕ ಸಂಸ್ಕೃತಿಗೂ ನಿರಂತರ ಘರ್ಷಣೆಗಳು ನಡೆದೇ ಇದ್ದವು. ಮಹಮ್ಮದೀಯ ಸಂಸ್ಕೃತಿಯ ಆಕ್ರಮಣ ಆರಂಭವಾದಾಗಲೂ ಕೂಡ ಅಖಂಡ ಭಾರತದ ವ್ಯಾಪ್ತಿಯ ಒಂದು ಸಂಸ್ಕೃತಿ ಭಾರತದಲ್ಲಿ ಇರಲಿಲ್ಲ. ಯೂರೋಪಿಯನ್ ಸಂಸ್ಕೃತಿಯ ಪ್ರಭಾವವೇ ಇಂದು ನಮ್ಮನ್ನು ಅಖಂಡವಾದ ಭಾರತೀಯ ಸಂಸ್ಕ್ರತಿ ಎಂದು ಯೋಚಿಸಲು ಪ್ರೇರೇಪಿಸುತ್ತಿರುವುದು. ಆದರೆ ಇದು ಎಷ್ಟರಮಟ್ಟಿಗಿನ ವಾಸ್ತವ ಎಂಬುದೇ ಈಗಿರುವ ಸಮಸ್ತೆ. ನನ್ನ ಪ್ರಶ್ನೆ, ವೈದಿಕ ಪರಂಪರೆಯ ವಿರುದ್ಧ ಹೋರಾಟದ ಒಂದು ಪರಂಪರೆಯೇ ನಮ್ಮ ಕರ್ನಾಟಕದ್ದಲ್ಲವೇ ಎಂಬುದು. ಪಂಪನಿಂದ ಹಿಡಿದು ಕುವೆಂಪು–ಕಾರಂತರವರೆಗೆ ವೈದಿಕ ಧರ್ಮದ ವಿರೋಧಿ ಪ್ರವೃತ್ತಿಯೊಂದು ಸಾಹಿತ್ಯ ಸೃಷ್ಟಿಗೆ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿರುವುದು ಕಾಣುತ್ತದೆ. ಅಡಿಗರು ತಮ್ಮ ಧಾರ್ಮಿಕ ಪರಂಪರೆಗೆ ಹೆಚ್ಚು ನಿಷ್ಠರಾದಂತೆ, ಅವರ ಕಾವ್ಯ ಹೆಚ್ಚು ಮತಶೀಲವಾದಂತೆ ನಮ್ಮಂತಹವರಿಗೆ ನಿರುಪಯುಕ್ತ ಎನ್ನುವಷ್ಟು ದೂರವಾಗುತ್ತದೆ. ಅಡಿಗರ 'ವರ್ಧಮಾನ', 'ಭೂತ' ಪದ್ಯಗಳನ್ನು ಅತ್ಯುತ್ತಮವೆಂದು ಪ್ರಶಂಸಿಸಿದ ವಿಮರ್ಶಕರು ಅದೇ ಧರ್ಮಕ್ಕೆ ಸಂಬಂಧಿಸಿದವರಾಗಿರುವುದು ಕೇವಲ ಆಕಸ್ಮಿಕವಲ್ಲ, ಸಹಜ. "ಹನುಮದ್ವಿಕಾಸ" ಎನ್ನುವ ಪದ ಒಬ್ಬ ವೈದಿಕ ಪಂಥಿಗೆ ಮಿಡಿವ ಭಾವಕೋಶವೇ ಬೇರೆ, ನನಗೇ ಬೇರೆ.

(ಚಂದ್ರಶೇಖರ) ಪಾಟೀಲರು ನನಗೆ ಮಾಧ್ವರ ಮೇಲೆ ವೈಯುಕ್ತಿಕ ಕಿನಸು ಇರಬಹುದೇ ಎಂದು ಗುಮಾನಿಸಿದ್ದಾರೆ. ಇದು ತಪ್ಪು ಗ್ರಹಿಕೆ. ಆದರೆ ದ್ವೈತ, ಅದ್ವೈತ, ಆಜ್ಞೇಯ, ಚಾರ್ವಾಕ ಈ ಪಂಥಗಳು ನಮ್ಮ ಸಂಸ್ಕೃತಿಗಳ ಹೋರಾಟ, ಹೊಯ್ದಾಟಗಳಲ್ಲಿ ಎಷ್ಟೊಂದು ಪ್ರಭಾವ ಬೀರಿವೆ ಎಂದರೆ, ಇವುಗಳನ್ನು ಹೆಸರಿಸದೆ ವಿಮರ್ಶಿಸುವುದು ಅಸಾಧ್ಯವಾಗಿದೆ. ಆದರೆ ನಮ್ಮ ಲೇಖಕರು ವಿಮರ್ಶಕರಲ್ಲಿ ಅನೇಕರು ಇಂದಿಗೂ ತಮ್ಮ ಹುದ್ದೆ, ಬಡ್ತಿ ಇತ್ಯಾದಿಗಳಿಗೆಲ್ಲ ತಮ್ಮ ಜಾತಿಗಳನ್ನೂ, ನಂಟನ್ನೂ ಸಮಯೋಚಿತವಾಗಿ ಉಪಯೋಗಿಸಿಕೊಳ್ಳುತ್ತಿರುವುದರಿಂದ ಈ ವಿಷಯಗಳನ್ನು ಎತ್ತಿದ ಕೂಡಲೇ ತಮ್ಮ ವಸ್ತುನಿಷ್ಠತೆಯನ್ನು ಕಳೆದುಕೊಳ್ಳುತ್ತಾರೆ. ನಮ್ಮ ಭಾಷೆಯ ವ್ಯಾಕರಣ, ಸಂಸ್ಕೃತಿ ಚರಿತ್ರೆ, ಸಾಹಿತ್ಯ ಚರಿತ್ರೆ ಇವೆಲ್ಲ ಈ ಬಗೆಯ ಕಾಂಪ್ಲೆಕ್ಸ್‌ಗಳಿಂದ ಕಲುಷಿತಗೊಂಡಂತವೇ ಆಗಿವೆ. ನಾನು ಎಂ.ಎ. ಮತ್ತು ಅನರ್ಸ್‌ಗಳಲ್ಲಿ ಅಭ್ಯಾಸ ಮಾಡಿದ ಸಂಸ್ಕೃತಿ ಚರಿತ್ರೆಯಂತೂ ಒಂದು ಟೂರಿಸ್ಟ್ ಗೈಡ್ ಆಗಲಿಕ್ಕೂ ಅಯೋಗ್ಯವಾದುದಾಗಿದೆ.

ನಾನು ಉಪಾಧ್ಯಾಯರನ್ನು ಎಲ್ಲೂ ಕೀಳುಗಳೆದಿಲ್ಲ. ನಮ್ಮ ತಂದೆಯವರೂ ಉಪಾಧ್ಯಾಯರೇ. ಈಗಿರುವ ಪ್ರಶ್ನೆ ಒಬ್ಬ ಲೇಖಕನ ಹೊಟ್ಟೆಪಾಡು ಯಾವುದರಿಂದ ನಡೆದಿದೆ ಎಂಬುದಲ್ಲ. ಅವನ ಜೀವನ ಎಂತೆಂತಹ ಅನುಭವಗಳನ್ನು ಒಳಕೊಳ್ಳಬಲ್ಲದು ಮತ್ತು ಒಂದು ಸಂಸ್ಕೃತಿಯ ವಿಕಾಸದಲ್ಲಿ ಇದರ ಪರಿಣಾಮಗಳೇನೆಂದು ಅಭ್ಯಸಿಸುವುದು;ಅಷ್ಟೆ. ಆದ್ದರಿಂದಲೇ ನಾನು ಸಾಹಿತಿಗಳೆಲ್ಲ ಬ್ರಾಹ್ಮಣರೇ ಎಂದು ಕರುಬುತ್ತಿದ್ದೇನೆಂದು ತಿಳಿಯುವುದೂ ತಪ್ಪು. ಆದರೆ ಇಂಥದೊಂದು ಪರಿಸ್ಥಿತಿಗೆ ಕಾರಣವಾದ ಸಂಸ್ಕೃತಿಯ ಸ್ವರೂಪವೇನು ಎಂದು ಆಲೋಚಿಸುತ್ತೇನೆ. ಮಾಧ್ವರು ಸ್ಮಾರ್ತರು, ವೈದಿಕರು ಶೂದ್ರರು ಮುಂತಾದ ಪದಗಳನ್ನು ಅವುಗಳ ಸ್ಪಷ್ಟ ತಾಂತ್ರಿಕ ಅರ್ಥದಲ್ಲೂ ನಾನು ಉಪಯೋಗಿಸಿದ್ದೇವೆಯೇ ಹೊರತು ಪುಡಾರಿ ರಾಜಕಾರಣದ ದೃಷ್ಟಿಯಿಂದಲ್ಲ. ಈ ಬಗೆಯ ಗೊಂದಲಗಳನ್ನೆಬ್ಬಿಸಿ ವಿಮರ್ಶೆಯ ದಿಕ್ಕು ತಪ್ಪಿಸುವುದರಿಂದ ನಾವು ನಮ್ಮ ಜವಬ್ದಾರಿಯಿಂದಲೂ, ವಾಸ್ತವದಿಂದಲೂ ತಪ್ಪಿಸಿಕೊಳ್ಳಬಹುದಷ್ಟೆ. ಆದರೆ ನಮ್ಮ ಬುದ್ಧಿ ಇನ್ನೂ ಗಾಢವಾದ ಸಿಕ್ಕುಗಳಲ್ಲಿ ಸಿಲುಕಿಕೊಂಡು ದೃಷ್ಟಿ ಕುರುಡಾಗುತ್ತದೆ. ಭಾರತೀಯ ತತ್ವ ಚಿಂತನೆ ಎಲ್ಲವೂ ಜಾತಿ ಪಂಥಗಳ ಗೇಣೀದಾರಿಕೆಯಲ್ಲಿ ಸಿಲುಕಿ ಮಠಪೀಠಗಳ ಸಮಾಧಿಯಲ್ಲಿ ಮೃತಾವಸ್ಥೆಗೆ ಬಹು ಹಿಂದೆಯೇ ಸಂದಿತು. ಈಗ ಇದು ವಿವಾಹ್ ವಿಧಿ, ಜಾತಕ, ಹುದ್ದೆಗೆ ಹಾಕಿಕೊಳ್ಳುವ ಅರ್ಜಿ ಮುಂತಾದವುಗಳಲ್ಲಿ ಮಾತ್ರ ಹೆಸರಿಸಲ್ಪಡುವ ಕ್ಷುಲ್ಲಕ ವಸ್ತುವಾಗಿ ಉಳಿದಿದೆ.


ನನಗೆ ಬ್ರಾಹ್ಮಣೇತರರರನ್ನು ಬರೆಯುವಂತೆ ಪುಸಲಾಯಿಸುವ ಅಗತ್ಯವೂ ಇಲ್ಲ. ಬ್ರಾಹ್ಮಣನೇ ಬರೆಯುತ್ತಾನೆಂಬ ಕಾರಣದಿಂದ ಆತನನ್ನು ದ್ವೇಷಿಸುವ ಅಗತ್ಯವೂ ಇಲ್ಲ. ಪರಸ್ಪರ ವಿಚ್ಛಿದ್ರಗೊಂಡಿರುವ ಜಗತ್ತಿನಲ್ಲಿ ಬದುಕುತ್ತಿರುವುದನ್ನು ಇಬ್ಬರೂ ತಿಳಿಯಬೇಕಷ್ಟೆ.

**–ಕೆ.ಪಿ.ಪೂರ್ಣಚಂದ್ರ ತೇಜಸ್ವಿ**

## ಪುಸ್ತಕಾವಲೋಕನ

ಪು: **ಬೆಳಗಲಿ ನಾಡ ನಾಳೆಗಳು** (ಕಲಿಕಾ ವ್ಯವಸ್ಥೆಗೊಂದು ಕೈಪಿಡಿ) ಸಂ: **ಪ್ರಿಯಾಂಕ್ ಕತ್ತಲಗಿರಿ** ಪ್ರ: **ಬನವಾಸಿ ಬಳಗ ಪ್ರಕಾಶನ, ಬೆಂಗಳೂರು** ಪುಟಗಳು: ೧೧೨ ಬೆಲೆ: ರೂ. ೭೫/-

### ಕನ್ನಡ ಶಿಕ್ಷಣಕ್ಕೊಂದು ಮನೋಜ್ಞ ಕೈಪಿಡಿ



**ನಾ**ನೊಮ್ಮೆ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದೆ. ಚಿಕ್ಕವಯಸ್ಸಿನ ದಂಪತಿಗಳು ತಮ್ಮ ಮೂರು ವರ್ಷದ ಮಗುವಿನೊಂದಿಗೆ ನನ್ನ ಪಕ್ಕದ ಸೀಟಿನಲ್ಲಿ ಕುಳಿತುಕೊಂಡರು. ಭಯಂಕರವಾದ ಬಿಸಿಲು-ಸೆಖೆ. ಹಲವಾರು ಗಂಟೆಗಳ ದೂರದ ಪ್ರಯಾಣ ಬೇರೆ. ಮೊದ'ಮೊದಲು ಗೆಲುವಾಗಿಯೇ ಇದ್ದ ಮಗು ಬಿಸಿಲಿನ ಝಳವನ್ನು ತಡೆಯಲಾರದೆ ಒಂದೇ ಸಮನೆ ಅಳತೊಡಗಿತು-ಇಂಗ್ಲಿಷ್‌ನಲ್ಲಿ. ನಾನು ನನ್ನ ಈ ಅನುಭವವನ್ನು ನಮ್ಮಪ್ಪನ ಬಳಿ ಹೇಳಿಕೊಂಡಾಗ ಅವರು "ನಾನ್‌ಸೆನ್ಸ್, ಇಂಗ್ಲಿಷ್‌ನಲ್ಲಿ ಅಳೋದು ಅಂದರೆ ಏನಯ್ಯಾ, ಅಳೋದಕ್ಕೆ ನಗೋದಕ್ಕೆ ಭಾಷೆ ಬೇರೆ ಇರುತ್ತಾ" ಎಂದರು. ಆದರೆ ನಾನು ನನ್ನ ಪಟ್ಟು ಬಿಡಲಿಲ್ಲ. 'ನಿಜವಾಗಲೂ ಅಣ್ಣ, ಮಗು ಇಂಗ್ಲಿಷ್‌ನಲ್ಲೇ ಅಳ್ತಾ ಇತ್ತು, ಅದು ಡ್ಯಾ...... ಡಿ.... ಮೊ..... ಮ್ಮಿ.... ಅಂತ ಅಳ್ತಾ ಇತ್ತು'.

ಮಕ್ಕಳಿಗೆ ಅಳುವುದನ್ನೂ ಇಂಗ್ಲಿಷ್‌ನಲ್ಲೇ ಕಲಿಸುವಂತಹ ತಂದೆ ತಾಯಿಯರಿರುವ ನಮ್ಮ ಕನ್ನಡ ನಾಡಿನಲ್ಲಿ ಮಾತೃಭಾಷೆಯ ಪ್ರಾಮುಖ್ಯತೆಯೇನು? ಮೊದಲ ಹಂತದ ಕಲಿಕೆ ಮಾತೃಭಾಷೆಯಲ್ಲಿ ನಡೆಯದೇ ಹೋದರೆ ನಮ್ಮ ಮಕ್ಕಳು ಏನನ್ನು ಕಳೆದುಕೊಳ್ಳುತ್ತಾರೆ? ಮಾತೃಭಾಷೆಯಲ್ಲೇ ಮೊದಲ ಹಂತದ ಶಿಕ್ಷಣ ಆಗಬೇಕೆಂದು ತಜ್ಞರು ಏಕೆ ಹೇಳುತ್ತಾರೆ? -ಹೀಗೆ ಹತ್ತು ಹಲವು ಅಮೂಲ್ಯ ಪ್ರಶ್ನೆಗಳಿಗೆ ಉತ್ತರಗಳು ಮತ್ತು ವಿಚಾರಗಳನ್ನುಳ್ಳ ಲೇಖನ ಮಾಲೆಯನ್ನು ನಾವು ಪ್ರಿಯಾಂಕ ಕತ್ತಲಗಿರಿಯವರ ಈ ಪುಸ್ತಕದಲ್ಲಿ ಓದಬಹುದು. ಪ್ರಿಯಾಂಕ ಅವರ ಲೇಖನಗಳ ಜೊತೆ ಆನಂದ್, ಕಿರಣ್ ಬಾಟ್ನಿ ಮತ್ತು ವಸಂತ ಶೆಟ್ಟಿಯವರ ಸುಮಾರು ನಲವತ್ತು ಲೇಖನಗಳು ಈ ಪುಸ್ತಕದಲ್ಲಿದೆ. "ಶೈಶವದಿಂದಲೇ ಇಂಗ್ಲಿಷ್‌ನಲ್ಲಿ ಯೋಚಿಸಲು ಹಾಗೂ ಮಾತನಾಡಲು ತಮ್ಮ ಮಕ್ಕಳಿಗೆ ಕಲಿಸುವ ಭಾರತೀಯ ತಂದೆ ತಾಯಿಗಳು ತಮ್ಮ ಮಕ್ಕಳು ಹಾಗೂ ತಮ್ಮ ರಾಷ್ಟ್ರವನ್ನು ವಂಚಿಸುತ್ತಿರುತ್ತಾರೆ" ಎಂಬ ಗಾಂಧೀಜಿಯ ಮಾತಿನ ಮಹತ್ವವನ್ನು ಈ ಪುಸ್ತಕ ಅತ್ಯಂತ ಪರಿಣಾಮಕಾರಿಯಾಗಿ ಮತ್ತು ವೈಜ್ಞಾನಿಕ ಪುರಾವೆಗಳೊಡನೆ ತಿಳಿಸುತ್ತದೆ.

ಕನ್ನಡ ಭಾಷೆಯನ್ನು 'ಉಳಿಸಿ-ಬೆಳೆಸಿ-ರಕ್ಷಿಸುವ' ಆವೇಶದ ಮಾತುಗಳನ್ನಾಡುವ ಜನ ಇಡೀ ಚರ್ಚೆಯ ದಾರಿ ತಪ್ಪಿಸುತ್ತಿದ್ದಾರೆ. ಉಳಿಸುವ ಹುಮ್ಮಸ್ಸಿನಲ್ಲಿ ಈ ಕನ್ನಡ ಚಳುವಳಿಕಾರರು ಕನ್ನಡ ಮಾಧ್ಯಮದ ಶಿಕ್ಷಣದ ಮಹತ್ವದ ವಿಚಾರವನ್ನೇ ಅಂಚಿಗೆ ತಳ್ಳಿಬಿಡುತ್ತಾರೆ. ನಮ್ಮಿಂದ ಕನ್ನಡ ಉಳಿಯಬೇಕೊ ಕನ್ನಡ ಭಾಷೆಯಿಂದ ನಾವು ಉಳಿದುಕೊಳ್ಳಬೇಕೊ ಅದು ಮೊದಲು ನಿರ್ಧಾರವಾಗಬೇಕು. ಕನ್ನಡ ಭಾಷೆಯನ್ನು ಮೊದಲ ಹಂತದ ಬೋಧನೆಯ ಮಾಧ್ಯಮವನ್ನಾಗಿ ಉಳಿಸಿಕೊಳ್ಳುವ ಮೂಲಕ ಕನ್ನಡ ನಾಡಿನ ಲಕ್ಷಾಂತರ ಮಕ್ಕಳ ಆರೋಗ್ಯಕರ ಗ್ರಹಿಕೆಯ ಒಂದು ಕ್ರಮವನ್ನು ನಾವು ರೂಪಿಸಬೇಕಾಗಿದೆ. ಈ ಸುಸಂಗತ ಗ್ರಹಿಕೆಯ ಪರಿಣಾಮವಾಗಿ ನಮ್ಮ ಮಕ್ಕಳು ಜಗತ್ತಿನ ಭೌತಿಕ ವಾಸ್ತವಗಳನ್ನು ಗ್ರಹಿಸಿ ಪಡೆದ ಅನುಭವ ಅನ್ವಯಿಕ ಜ್ಞಾನವಾಗಬೇಕಾಗಿದೆ. ಈ ಜ್ಞಾನ ಸುಖ ಸಂತೋಷಗಳ ಬದುಕನ್ನು ಕಟ್ಟಲು ಅತ್ಯಗತ್ಯವಾಗಿ ಬೇಕು. ಒಟ್ಟಿನಲ್ಲಿ ಕನ್ನಡ ಭಾಷೆಯನ್ನು ನಮಗಾಗಿ ನಮ್ಮ ಮಕ್ಕಳ ಏಳಿಗೆಗಾಗಿ ನಮ್ಮ ನಾಡಿನ ನಿರ್ಮಾಣಕ್ಕಾಗಿ ಉಳಿಸಿಕೊಳ್ಳಬೇಕು ಎಂಬ ವಾಸ್ತವವನ್ನು ಈ ಪುಸ್ತಕದ ಲೇಖನಗಳು ಸ್ಪಷ್ಟಪಡಿಸುತ್ತದೆ. ಹುಂಬತನದ ಕನ್ನಡ ಪ್ರೇಮದಿಂದ ಸದಾ ಅಂತರ ಕಾಯ್ದುಕೊಳ್ಳುವ ಈ ಲೇಖಕರಿಗೆ ನಮ್ಮ ನಾಡಿನ ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿ ಇದೆ; ಗಾಢವಾದ ಪ್ರೀತಿ ಇದೆ.

'ತಾಯ್ನುಡಿಯಲ್ಲಿ ಕಲಿಕೆ ಏಕೆ' ಎಂಬ ಪ್ರಿಯಾಂಕ ಅವರ ಲೇಖನದಲ್ಲಿ ಎರಡನೇ ತರಗತಿಯ ಮಕ್ಕಳು ಸರಾಗವಾಗಿ ಓದುವುದನ್ನು ಕಲಿಯದಿದ್ದರೆ ಹೇಗೆ ಓದಿದ ವಿಷಯ ಮನನವಾಗುವುದಿಲ್ಲ ಎಂಬ ವಿಚಾರವನ್ನು ವೈಜ್ಞಾನಿಕವಾಗಿ ವಿವರಿಸುತ್ತಾರೆ. ಹಾಗೆಯೇ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಓದಿದ ಮಕ್ಕಳು ಜಾಣರಾಗುತ್ತಾರೆ ಎಂಬ ಸುಳ್ಳು ನಂಬಿಕೆಯನ್ನು 'ಪ್ರಥಮ್' ಸಂಸ್ಥೆಯ ಸಮೀಕ್ಷೆ ಬಹಿರಂಗ ಪಡಿಸಿರುವ ಕುರಿತು ಒಂದು ಲೇಖನವಿದೆ. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ನಾಯಿಕೊಡೆಗಳಂತೆ ತಲ 'ಎತ್ತುತ್ತಿರುವ ನಕಲಿ ಇಂಗ್ಲಿಷ್ ಶಾಲೆಗಳ ಗುಟ್ಟು ಈ ಸಮೀಕ್ಷೆಯಿಂದ ಬಹಿರಂಗವಾಗಿರುವ ಬಗ್ಗೆ ವಿವರಣೆಯಿದೆ. ಕಿರಣ್ ಬಾಟ್ನಿಯವರು ನಮ್ಮ ಶಿಕ್ಷಣ ವ್ಯವಸ್ಥೆ ಪ್ರತಿಭೆಯನ್ನು ಗುರುತಿಸುವ ಬದಲು ಇಂಗ್ಲೀಷಿಗೆ ಮಣೆ ಹಾಕುತ್ತಿರುವುದರಿಂದ ಲಕ್ಷಾಂತರ ಪದವೀಧರರು ಪ್ರತಿವರ್ಷ ಕಾಲೇಜುಗಳಿಂದ ಹೊರಬಂದರೂ ಗಮನಾರ್ಹವಾದ ಒಂದು ಸಂಶೋಧನೆಯನ್ನೂ ಮಾಡಲಾಗಲಿಲ್ಲ ಅಥವಾ ಚಕಿತಗೊಳಿಸುವ ಒಂದು ಉತ್ಪನ್ನವನ್ನೂ ನಮ್ಮ ಕಂಪನಿಗಳು ಇದುವರೆಗೂ ತಯಾರಿಸಲಾಗಿಲ್ಲ ಎಂದು ಪ್ರತಿಪಾದಿಸುತ್ತಾರೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು 'ಒಂದು ಸಣ್ಣ ಸೂಜಿಯನ್ನೂ ನಮಗೆ ಸರಿಯಾಗಿ ಮಾಡಲು ಬರುವುದಿಲ್ಲ, ಆದರೂ ಪಾಶ್ಚಾತ್ಯರನ್ನು ಅಣಗಿಸುತ್ತೀರಿ' ಎಂದು ಛೇಡಿಸಿದ ಮಾತು ನೆನಪಿಗೆ ಬರುತ್ತದೆ.

'ವಂಗೀಯ ವಿಜ್ಞಾನ ಪರಿಷತ್' ಸ್ಥಾಪಿಸಿದ ಸತ್ಯೇಂದ್ರನಾಥ್ ಬೋಸ್ ಅವರು ವಿಜ್ಞಾನವನ್ನು ಮಾತೃಭಾಷೆಯಲ್ಲೇ ಕಲಿಯುವುದು ಬಹಳ ಮುಖ್ಯ ಎಂದು ಭಾವಿಸಿದ್ದರು. ಐನ್‌ಸ್ಟೈನ್ ಅವರ ಗೌರವಕ್ಕೆ ಪಾತ್ರರಾದ ಸತ್ಯೇಂದ್ರನಾಥ್ ಬೋಸ್ ತಾವು ಮೊದಲ ಹಂತದ ಶಿಕ್ಷಣವನ್ನು ಮಾತೃಭಾಷೆಯಲ್ಲಿ ಕಲಿತದ್ದರಿಂದಲೇ ಅದ್ವಿತೀಯವಾದುದನ್ನು ಸಾಧಿಸಲು ಸಾಧ್ಯವಾಯಿತೆಂದು ಹೇಳಿಕೊಂಡಿದ್ದಾರೆ. ಇದನ್ನು 'ಬೋಸ್ ಸಿದ್ಧಾಂತ ಏನು ಗೊತ್ತೆ' ಲೇಖನದಲ್ಲಿ ಆನಂದ್ ಅವರು ದಾಖಲಿಸುತ್ತಾರೆ.

ಜಗತ್ತೇ ಬೆರಗಾಗುವ ಅದ್ವಿತೀಯ ಸಾಧನೆಗಳ ದೇಶ ಜರ್ಮನಿ. ಇಲ್ಲಿಯ ಶಿಕ್ಷಣ ವ್ಯವಸ್ಥೆಯ ಬಗ್ಗೆ ಪ್ರಿಯಾಂಕ ಅವರು 'ಜರ್ಮನಿಯ ಕಲಿಕೆಯೇರ್ಪಾಡು...' ಲೇಖನದಲ್ಲಿ ತಿಳಿಸುತ್ತಾರೆ. ಜರ್ಮನಿ ದೇಶದ ಜನಗಳಿಗೆ ಜರ್ಮನ್ ಮಾಧ್ಯಮದ ಶಾಲೆಗಳೇ ಇಷ್ಟವಂತೆ. ಇಲ್ಲಿ 'ಇಂಟರ್‌ನ್ಯಾಷನಲ್ ಶಾಲೆ' ಎಂಬ ಹೆಸರಿನ ಇಂಗ್ಲಿಷ್ ಕಲಿಸುವ ಕೆಲವೇ ಕೆಲವು ಶಾಲೆಗಳಿವೆ. ಆದರೆ ಬಹುಪಾಲು ಜರ್ಮನ್ನರು ಜರ್ಮನ್ ಮಾಧ್ಯಮದಲ್ಲೇ ಕಲಿಯಲು ಇಷ್ಟಪಡುತ್ತಾರೆ. ಜಗತ್ಪ್ರಖ್ಯಾತವಾದ *ಮರ್ಸಿಡಿಸ್ ಬೆಂಜ್, ಆಡಿ, ವೋಕ್ಸ್‌ವ್ಯಾಗನ್, ಬಿ.ಎಂ.ಡಬ್ಲ್ಯೂ., ಸೀಮನ್ಸ್, ಬಾಶ್* ಮುಂತಾದ ಕಂಪನಿಗಳು ಹುಟ್ಟಿ ಬಂದಿರುವುದಕ್ಕೆ ಮಾತೃಭಾಷೆ ಜರ್ಮನ್ ಕಾರಣವೇ ಹೊರತು ಇಂಗ್ಲಿಷ್ ಅಲ್ಲ ಎನ್ನುತ್ತಾರೆ ಲೇಖಕರು.

ಆರನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸುವ ಸರ್ಕಾರದ ಅವಿವೇಕದ ನಿರ್ಧಾರವನ್ನು ಬಹಳ ನಮ್ರತೆಯಿಂದಲೇ ಕಿರಣ್ ಬಾಟ್ನಿಯವರು ವಿರೋಧಿಸುತ್ತಾರೆ. ತನ್ನದೇ ಭಾಷೆಯನ್ನು ಸಮರ್ಥವಾಗಿ ಕಲಿತವರು ಮತ್ತೊಂದು ಭಾಷೆಯನ್ನೂ ಸುಲಭವಾಗಿ ಕಲಿಯಬಲ್ಲರು. ತನ್ನ ಭಾಷೆಯನ್ನೇ ಸರಿಯಾಗಿ ಕಲಿಯದವರು ಯಾವ ಭಾಷೆಯನ್ನು ತಾನೆ ಕಲಿಯಬಲ್ಲರು?

ಇಂತಹ ವಿಚಾರಗಳನ್ನು ಮನೋಜ್ಞವಾಗಿ ಚರ್ಚಿಸುವ ಈ ಪುಸ್ತಕವನ್ನು ಎಲ್ಲ ಕನ್ನಡಿಗರು ಓದಲೇಬೇಕು

**-ಜಿ.ಎಸ್.ಜಯದೇವ**

**ಕಳೆದ ಸಂಚಿಕೆಯ ೧೯ನೇ ಪುಟದ ಮೊದಲರ್ಧ ಭಾಗದಲ್ಲಿ ಪತ್ರಿಕೆಗೆ ಶುಭ ಕೋರಿ ಜಾಹೀರಾತು ನೀಡಿದ್ದ ಎದೆ ರೋಗ ತಜ್ಞರು ಡಾ॥ ಎಚ್.ಎಸ್. ರುದ್ರೇಶ್ ಅವರು. ಮುದ್ರಣದಲ್ಲಾದ ಲೋಪದಿಂದಾಗಿ ಅವರ ಹೆಸರು ಬಿಟ್ಟುಹೋಗಿತ್ತು. ಅದಕ್ಕಾಗಿ ವಿಷಾದಿಸುತ್ತೇವೆ.**-ಸಂ

ಪತ್ರಿಕೆಗೆ ಹಾರ್ದಿಕ ಶುಭಾಶಯಗಳು!

ಶ್ರೀದೇವಿ ಹೋಂ ಇಂಡಸ್ಟ್ರೀಸ್
ಪ್ರೊ.: ಮಂಜುನಾಥ ಕರ್ಕಿಕೊಪ್ಪ
ಎಡಜಿಗಳೆ ಮನೆ ಅಂಚೆ
ಸಾಗರ(ಶಿವಮೊಗ್ಗ ಜಿಲ್ಲೆ)

ನಮ್ಮಲ್ಲಿ ಉತ್ತಮ ಗುಣಮಟ್ಟದ
ಎಲ್ಲ ರೀತಿಯ ಸ್ಟೀಲ್ ಉಪಕರಣಗಳು ಲಭ್ಯ!

ಪತ್ರಿಕೆಗೆ ಶುಭವನ್ನು ಕೋರುವ,

ಕರ್ಣಾಟಕ ಬ್ಯಾಂಕ್,
ಸಾಗರ

ನಿಮ್ಮ ಕುಟುಂಬದ ಬ್ಯಾಂಕ್
ಭಾರತದಾದ್ಯಂತ!

ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ

## ವಿಶೇಷ ತರಬೇತಿ ಕಾರ್ಯಕ್ರಮ

**ಎಂ.ಬಿ.ಎ.ಗಾಗಿ ಕೇಂದ್ರೀಯ (PGCET) ಪರೀಕ್ಷೆ**
**ಭಾರತೀಯ ಜೀವವಿಮಾ ನಿಗಮದ(LIC) ಸಹಾಯಕ ಅಭಿವೃದ್ಧಿ ಅಧಿಕಾರಿಗಳ(ADOB) ಪರೀಕ್ಷೆ**
**ಬ್ಯಾಂಕ್ ಗುಮಾಸ್ತರು ಮತ್ತು ಅಂಚೆ ಸಹಾಯಕ(Postal Assistant)ರಿಗಾಗಿ ಪರೀಕ್ಷೆ**
**ಬ್ಯಾಂಕ್ ಅಧಿಕಾರಿ ಹುದ್ದೆಗಳಗಾಗಿ IBPS ಪರೀಕ್ಷೆ**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:



**ವಿವೇಕ ಬ್ಯೂರೋ ಆಫ್ ಕಾಂಪಿಟೇಟೀವ್ ಎಕ್ಸಾಮ್ಸ್**
**ಎಸ್. ಜೆ. ಪಿ. ಪಾರ್ಕ್ ರಸ್ತೆ, ಕೆ.ಆರ್. ಪುರಂ**
**ಹಾಸನ-573201**
**ದೂರವಾಣಿ: 9448867087 ಮತ್ತು 08172-268253**



**'ಹೊಸ ಮನುಷ್ಯ'ಕ್ಕೆ**

**ಹಾರ್ದಿಕ ಶುಭಾಶಯಗಳು**

**-ಸ್ಪಂದನ ರಂಗ ತಂಡ, ಸಾಗರ**

ಎಂ.ವಿ.ಪ್ರತಿಭಾ
'ಚಿಗುರು' ೩ನೇ ತಿರುವು,
ಶಿವಪ್ಪನಾಯಕ ನಗರ, ಸಾಗರ
ದೂ: ೯೯೪೫೧೭೮೭೯೨



HOSA MANUSHYA, a kannada monthly solely owned, edited, published and printed by D. S. Nagabhushana at HIG-5, Kallahally Extension, Vinobanagara, SHIMOGA-577204 and printed in Chitrakuta Printers, Durgigudi, Shimoga-577 201

**RNI No: KARKAN/22649/10/2012-TC**
**RGD. No. MAG/ SDM/ SMG /PRB/ CR25/2012-13**


ತೆರೆದ ಅಂಚೆ

ಇವರಿಗೆ,

If undelivered, please return to D.S. Nagabhushana,
HIG-5, 'Nudi', Kallahalli Extension, Vinoba Nagara,
Shivamogga - 577204 (Karnataka)